ಸಂಪುಟ: 13 Volume | ಸಂಚಿಕೆ: 363 Issue | ಪುಟಗಳು 08 Pages | ಮಂಗಳವಾರ 31 ಮಾರ್ಚ್ 2026 | ₹6 | PRGINO.120927 (RNINO: KARKAN/2011/48371) | BDR/054/2026-2027 | www.mallammanudi.in | mallammanudi@gmail.com | 9448604450, 9845028349

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper

ಪ್ರಾದೇಶಿಕ ಕನ್ನಡ ದೈನಿಕ

**ಬೆಳಗು**

ನಿಮ್ಮಷ್ಟಕ್ಕೆ ನೀವೇ ಬೆಳೆಯಬೇಕು. ಅದಕ್ಕಾಗಿ ಬೇರೊಬ್ಬ ಶಿಕ್ಷಕನಿರುವುದಿಲ್ಲ.
–ಸ್ವಾಮಿ ವಿವೇಕಾನಂದ

ಸಂಪಾದಕರು: ರಮೇಶ ರೆಡ್ಡಿ | ಪ್ರಧಾನ ಸಂಪಾದಕರು: ಮಾಣಿಕರೆಡ್ಡಿ, ಕೌಡಾಳೆ

ಮಕ್ಕಳ ಮನಸ್ಸು ಅರಿತು ಬೋಧಿಸುವುದೇ ಶಿಕ್ಷಣ 6 | ಮಹಾವೀರ ಜಯಂತಿ ಸರಳ ಆಚರಣೆ 7 | ಸಮ್ಮೇಳನ ಸಮಿತಿಗಳ ಪೂರ್ವ ಸಿದ್ಧತಾ ಸಭೆ 8



ನಂಜನಗೂಡಿನಲ್ಲಿ ನಂಜುಂಡೇಶ್ವರ ಹಾಗೂ ಪಂಚ ರಥೋತ್ಸವ ವಿಜೃಂಭಣೆಯಿಂದ ಜರುಗಿತು. ಚಿತ್ರಗಳು ಸುತ್ತೂರು ನಂಜುಂಡ ನಾಯಕ.



ಹುಣಸಗಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು ಚಂದ್ರಶೇಖರ ಎನ್ ದಂಡಿನ ಅವರಿಗೆ ನಮ್ಮ ಮಲ್ಲಮ್ಮ ನುಡಿ ಯುಗಾದಿ ವಿಶೇಷ ಸಂಚಿಕೆ ವಿತರಿಸಲಾಯಿತು.

## ತ್ರಿಶೂರ್‌ನಲ್ಲಿ ಪ್ರಧಾನಿ ರೋಡ್ ಶೊ

• ಮಲ್ಲಮ್ಮ ನುಡಿ ವಾರ್ತೆ ತಿರುವನಂತಪುರಂ

ಕೇರಳ ವಿಧಾನಸಭಾ ಚುನಾವಣಾ ಕಣ ರಂಗೇರತೊಡಗಿದೆ. ಏಪ್ರಿಲ್ 9ರಂದು ಒಂದೇ ಹಂತದಲ್ಲಿ ಚುನಾವಣೆ ನಡೆಯಲಿದೆ. ಹತ್ತು ದಿನ ಬಾಕಿ ಉಳಿದಿದ್ದು, ಎಡಪಕ್ಷ ಮತ್ತು ಯುಡಿಎಫ್ ಮೈತ್ರಿಕೂಟದ ಕಾಂಗ್ರೆಸ್ ಪಾರ್ಟಿಯ ರಾಷ್ಟ್ರೀಯ ನಾಯಕರು ಬಿರುಸಿನ ಪ್ರಚಾರದಲ್ಲಿ ತೊಡಗಿಸಿಕೊಂಡಿದ್ದಾರೆ. ಪ್ರಧಾನಿ ಮೋದಿಯವರು ತ್ರಿಶೂರ್‌ನಲ್ಲಿ ರೋಡ್ ಶೋ, ಸಾರ್ವಜನಿಕ ಸಭೆ ನಡೆಸಿದ್ದಾರೆ. ಹಾಲೀ ವಿಧಾನಸಭಾ ಚುನಾವಣೆಯ ಪ್ರಚಾರದಲ್ಲಿ ಪ್ರಮುಖ ಅಂಶವಾಗಿ ಹೊರಹೊಮ್ಮುತ್ತಿರುವುದು ಎಡಪಕ್ಷಗಳು ಮತ್ತು ಕಾಂಗ್ರೆಸ್ ಮೈತ್ರಿಕೂಟವು, ಒಬ್ಬರು ಇನ್ನೊಬ್ಬರನ್ನು ಬಿಜೆಪಿಯ ಬಿ–ಟೀಂ ಎಂದು ಹೇಳುತ್ತಿರುವುದು.





ದೇವರ ಸ್ವಂತ ನಾಡಿನಲ್ಲಿ ಖಾತೆ ತೆರೆಯಲು ಶತಪ್ರಯತ್ನ ಮಾಡುತ್ತಿರುವ ಬಿಜೆಪಿಗೆ, ಎರಡು ಪ್ರಮುಖ ಪಾರ್ಟಿಯ ನಾಯಕರಿಂದ ಮೈಲೇಜ್ ಸಿಗುತ್ತಿರುವುದು ವಿಶೇಷವಾಗಿದೆ. ಇವರ ಹೇಳಿಕೆಗೆ, ಪ್ರಧಾನಿ ಮೋದಿ ಕೌಂಟರ್ ಕೊಟ್ಟಿರುವ ರೀತಿ, ಇನ್ನಷ್ಟು ಕುತೂಹಲ ಕೆರಳಿಸಿದೆ.

## ಪ್ರಸಾದ: 200ಕ್ಕೂ ಹೆಚ್ಚು ಮಂದಿ ಅಸ್ವಸ್ಥ

• ಮಲ್ಲಮ್ಮ ನುಡಿ ವಾರ್ತೆ ಕುಂದಾಣ

ದೇವನಹಳ್ಳಿ ತಾಲೂಕು ಜಾಲಿಗೆ ಗ್ರಾಪಂ ವ್ಯಾಪ್ತಿಯ ಬೆಟ್ಟೇನಹಳ್ಳಿ ಗ್ರಾಮದಲ್ಲಿ ಶ್ರೀರಾಮನವಮಿ ಅಂಗವಾಗಿ ವ್ಯವಸ್ಥೆ ಮಾಡಿದ್ದ ಅನ್ನಪ್ರಸಾದ ಸೇವಿಸಿದ್ದ ಗ್ರಾಮಸ್ಥರ ಪೈಕಿ 200 ಕ್ಕೂ ಹೆಚ್ಚು ಮಂದಿ ಅಸ್ವಸ್ಥಗೊಂಡಿದ್ದಾರೆ. ದೇವನಹಳ್ಳಿಯ ಬೆಟ್ಟೇನಹಳ್ಳಿ ಗ್ರಾಮದಲ್ಲಿ ಶ್ರೀರಾಮನವಮಿ ಪ್ರಯುಕ್ತ ಅನ್ನಪ್ರಸಾದ ವಿನಿಯೋಗ ಮಾಡಲಾಯಿತು. ಪ್ರಸಾದ ಸೇವಿಸಿದ ಆರೋಗ್ಯದಲ್ಲಿ ಏರುಪೇರಾದವರಿಗೆ ಸ್ಥಳೀಯ ಅರದೇಶನಹಳ್ಳಿ ಆರೋಗ್ಯ ಕೇಂದ್ರದಿಂದ ಆರೋಗ್ಯ ಸಿಬ್ಬಂದಿ ಪ್ರಾಥಮಿಕ ಚಿಕಿತ್ಸೆ ನೀಡಿದ್ದಾರೆ. ತೀವ್ರ ಅಸ್ವಸ್ಥರಾದವರನ್ನು ಆಂಬುಲೆನ್ಸ್ ಮೂಲಕ ನಾನಾ ಆಸ್ಪತ್ರೆಗೆ ಕಳುಹಿಸಿಕೊಡಲಾಯಿತು. ಗ್ರಾಮದಲ್ಲಿ ಪ್ರತಿವರ್ಷ ಶ್ರೀರಾಮನವಮಿ ಅನ್ನಪ್ರಸಾದ ವಿನಿಯೋಗ



ನಡೆಯುತ್ತಿತ್ತು. ಇದೇ ಮೊದಲ ಬಾರಿಗೆ ಫುಡ್ ಪಾಯಿಸನ್ ಆಗಿದ್ದು, ಇದರಿಂದ ಗ್ರಾಮಸ್ಥರಲ್ಲಿ ಆತಂಕ ಹೆಚ್ಚಾಗಿದೆ. ಅರದೇಶನಹಳ್ಳಿ ಪಿಎಚ್ಸಿಗೆ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಲಕ್ಕಾ ಕೃಷ್ಣಾರೆಡ್ಡಿ ಭೇಟಿ ನೀಡಿ, ಆಸ್ಪತ್ರೆಗೆ ದಾಖಲಾದವರ ಆರೋಗ್ಯ ವಿಚಾರಿಸಿದ್ದಾರೆ. ತನಿಖೆ ಮುಂದುವರಿದಿದೆ.

# ಬೈಎಲೆಕ್ಷನ್ ಭರ್ಜರಿ ದನಿ

### ದಾವಣಗೆರೆ ಹಾಗೂ ಬಾಗಲಕೋಟೆ ಎರಡೂ ಕ್ಷೇತ್ರಗಳಲ್ಲಿ ಮಾತಿನ ಭರಾಟೆ | ನಾಯಕರಿಂದ ಪರ–ವಿರೋಧ ವಾಕ್ಸಮರ

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ/ದಾವಣಗೆರೆ

ರಾಜ್ಯ ಉಪಚುನಾವಣಾ ಕಣ ರಂಗೇರ ತೊಡಗಿದೆ. ರಾಷ್ಟ್ರೀಯ ಪಕ್ಷಗಳ ಧುರೀಣರು ಕಣಕ್ಕೆ ಇಳಿದು ಭರ್ಜರಿ ಪ್ರಚಾರ ಆರಂಭಿಸಿದ್ದಾರೆ. ದಾವಣಗೆರೆ ಹಾಗೂ ಬಾಗಲಕೋಟೆ ಎರಡೂ ಕ್ಷೇತ್ರಗಳ ಜನತೆ ಮಾತ್ರ ಮುಗುಮ್ಮಾಗಿ ಎಲ್ಲವುದನ್ನೂ ಕೇಳಿಸಿಕೊಳ್ಳುತ್ತಿದ್ದಾರೆ. ಬಿಜೆಪಿ ಹಾಗೂ ಕಾಂಗ್ರೆಸ್ ಪಕ್ಷಗಳ ನಾಯಕರು ಪರಸ್ಪರ ವಾಕ್ಸಮರ ಜಾರಿಯಲ್ಲಿದೆ.

**ವಿಜಯೇಂದ್ರ ವಿಶ್ವಾಸ:** ಮುಖ್ಯಮಂತ್ರಿಯಾದಿಯಾಗಿ ಯಾ–ರೇ ಇಲ್ಲಿ ಬಂದು ಬೀಡು ಬಿಟ್ಟರೂ ಮತದಾರರು ಬಿಜೆಪಿಗೆ ಆಶೀರ್ವಾದ ನೀಡಿ ಚರಂತಿಮಠ ಅವರನ್ನು ಗೆಲ್ಲಿಸಲಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ.ವಿಜಯೇಂದ್ರ ಅವರು ಬಾಗಲಕೋಟದಲ್ಲಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಮಾಧ್ಯಮ ಪ್ರತಿನಿಧಿಗಳ ಪ್ರಶ್ನೆಗೆ ಇಂದು ಉತ್ತರ ನೀಡಿದ ಅವರು, ಕಾಂಗ್ರೆಸ್ಸಿನ ತಂತ್ರ, ಕುತಂತ್ರ ಯಾವುದೂ ನಡೆಯುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

**ಮೇಟಿಯವರ ಶ್ರಮದ ಫಲ:** ಎಚ್.ವೈ.ಮೇಟಿ ಅವರ ಆತ್ಮಕ್ಕೆ ಶಾಂತಿ ಸಿಗಬೇಕಾದರೆ ಉಮೇಶ್ ಮೇಟಿ ಅವರನ್ನು ಗೆಲ್ಲಿಸಲೇಬೇಕು. ಬಾಗಲಕೋಟೆಗೆ ಮೆಡಿಕಲ್ ಕಾಲೇಜು ಬರುತ್ತಿರುವುದು ಮೇಟಿಯವರ ಶ್ರಮದ ಫಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆ ನೀಡಿದ್ದಾರೆ. ಬಾಗಲಕೋಟೆ ಉಪ ಚುನಾವಣಾ ಪ್ರಚಾರ ಕಾರ್ಯದಲ್ಲಿ ಪಾಲ್ಗೊಂಡು ಸುತಗುಂಡಾರ, ನಾಯನೇಗಲಿ ಸೇರಿ ಸುತ್ತ ಮುತ್ತಲ ಗ್ರಾಮಗಳಲ್ಲಿ ಪ್ರಚಾರ ನಡೆಸಿ ಮಾತನಾಡಿದರು.



### ಕೈ ಪದ್ಧತಿಯಂತೆ ಟಿಕೆಟ್

ಮೇಟಿ ಅವರ ನಾಲ್ವರೂ ಮಕ್ಕಳು ಟಿಕೆಟ್ ಕೇಳಿದ್ದರು. ಆದರೆ, ಯಾರಿಗೇ ಕೊಟ್ಟರೂ ಒಟ್ಟಿಗೇ ಕೆಲಸ ಮಾಡುವ ಭರವಸೆ ನೀಡಿದರು. ಕಾಂಗ್ರೆಸ್ ಪದ್ಧತಿಯಂತೆ ಉಮೇಶ್ ಮೇಟಿ ಅವರಿಗೆ ಟಿಕೆಟ್ ಕೊಟ್ಟಿದ್ದೇವೆ. ಆದ್ದರಿಂದ ಇವರನ್ನು ಬೆಂಬಲಿಸಿ, ಗೆಲ್ಲಿಸಿ ಕಳುಹಿಸಿ. ಕೇಂದ್ರದಲ್ಲಿರುವ ಬಿಜೆಪಿ ಸರ್ಕಾರ ಆಲಮಟ್ಟಿ ವಿಚಾರದಲ್ಲಿ ಜನವಿರೋಧಿ ನಿಲುವು ಹೊಂದಿದೆ. ಹದಿಮೂರು ವರ್ಷಗಳಿಂದ ಗೆಜೆಟ್ ನೋಟಿಫಿಕೇಶನ್ ಕೂಡ ಮಾಡಲಿಲ್ಲ ಎಂದು ಸಿಎಂ ದೂರಿದ್ದಾರೆ.

### ಗಣ್ಯರಿಗೆ ಜನ್ಮಕೊಟ್ಟ ಜಿಲ್ಲೆ

ಬಾಗಲಕೋಟೆ ವಿಧಾನಸಭಾ ಕ್ಷೇತ್ರದ ಮತದಾರರ ಒಲವು ಬಿಜೆಪಿ ಪರವಾಗಿ ಹೆಚ್ಚಾಗುತ್ತಿದೆ. ನಮ್ಮ ಅಭ್ಯರ್ಥಿ ಬೆಳಿಗ್ಗೆ 7ರಿಂದ ಮತಯಾಚನೆ ಮಾಡುತ್ತಿದ್ದಾರೆ. ವಾತಾವರಣ ಬಿಜೆಪಿ ಪರವಾಗಿದೆ. ಈ ಕ್ಷೇತ್ರ ಮುಖ್ಯಮಂತ್ರಿಗಳಿಗೆ ರಾಜಕೀಯ ಪುನರ್ ಜನ್ಮ ಕೊಟ್ಟ ಜಿಲ್ಲೆ; ಅಂಥ ಜಿಲ್ಲೆಯನ್ನು ಮುಖ್ಯಮಂತ್ರಿಗಳು ಮತ್ತು ಕಾಂಗ್ರೆಸ್ಸಿನವರು ಸಂಪೂರ್ಣವಾಗಿ ನಿರ್ಲಕ್ಷಿಸಿದ್ದಾರೆ. ಅವರಿಲ್ಲಿ ಏನೇ ಭಾಷಣ ಮಾಡಿದರೂ ಜನರಿಗೆ ವಾಸ್ತವ ಅರ್ಥವಾಗಿದೆ ಎಂದಿದ್ದಾರೆ ವಿಜಯೇಂದ್ರ.

### ಪ್ರಚಾರ ಕಣಕ್ಕೆ ಎಚ್ಡಿಕೆ ಎಂಟ್ರಿ

ಜೆಡಿಎಸ್ ರಾಜ್ಯಾಧ್ಯಕ್ಷರಾಗಿರುವ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ಎರಡು ದಿನಗಳ ಕಾಲ ರಾಜ್ಯದ ಎರಡು ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆಯಲ್ಲಿ ಎನ್‌ಡಿಎ ಅಭ್ಯರ್ಥಿಗಳ ಪರ ಚುನಾವಣಾ ಪ್ರಚಾರ ಕೈಗೊಳ್ಳಲಿದ್ದಾರೆ. ದಾವಣಗೆರೆ ದಕ್ಷಿಣ ಕ್ಷೇತ್ರದ ಉಪ ಚುನಾವಣೆಯಲ್ಲಿ ಏ.4ರಂದು ಹಾಗೂ ಬಾಗಕೋಟೆ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಏ.5ರಂದು ಕುಮಾರಸ್ವಾಮಿ ಅವರು ಚುನಾವಣಾ ಪ್ರಚಾರ ಕೈಗೊಂಡು ಎನ್‌ಡಿಎ ಅಭ್ಯರ್ಥಿಗಳ ಪರವಾಗಿ ಮತಯಾಚನೆ ಮಾಡಲಿದ್ದಾರೆ.

ಯಡಿಯೂರಪ್ಪ, ಬೊಮ್ಮಾಯಿ ಸರ್ಕಾರ ಬರೀ ಲೂಟಿ ಮಾಡಿದ್ದು ಬಿಟ್ಟರೆ ಅಭಿವೃದ್ಧಿ ಕಾರ್ಯ ಮಾಡಲಿಲ್ಲ. ಎಚ್.ವೈ.ಮೇಟಿಯವರ ಒತ್ತಾಯದಂತೆ ಬಾಗಲಕೋಟೆಗೆ ಮೆಡಿಕಲ್ ಕಾಲೇಜು ತರಲು ಶಂಕುಸ್ಥಾಪನೆ ಮಾಡಿದ್ದೇವೆ. ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಮತ್ತು ಟ್ರಾಮಾ ಸೆಂಟರನ್ನೂ ನಾವು ಮಾಡುತ್ತೇವೆ. ನುಡಿದಂತೆ ಮಾಡುವ ಸರ್ಕಾರ ನಮ್ಮದು.
–ಸಿದ್ದರಾಮಯ್ಯ, ಮುಖ್ಯಮಂತ್ರಿ

## ತೆರಿಗೆ ಉಪಆಯುಕ್ತ ಲೋಕಾ ಬಲೆಗೆ

**ಹುಬ್ಬಳ್ಳಿ:** 6 ಲಕ್ಷ ರೂ.ಲಂಚ ಸ್ವೀಕರಿಸುತ್ತಿದ್ದಾಗ ವಾಣಿಜ್ಯ ತೆರಿಗೆ ಉಪಆಯುಕ್ತ ಭರತ್ ಕುಮಾರ್ ಹೆಗ್ಡೆ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ. ಅಂಕೋಲಾ ಮೂಲದ ಉದ್ಯಮಿ ವಿಶ್ವಜಿತ್ ನಾಯಕ್ ಅವರಿಂದ ಹಣ ಪಡೆಯುತ್ತಿದ್ದಾಗ ಹೆಗ್ಡೆ ಸಿಕ್ಕಿಬಿದ್ದಿದ್ದಾರೆ ಎಂದು ಬೆಂಗಳೂರು ಲೋಕಾಯುಕ್ತ ಪೊಲೀಸ್ ವರಿಷ್ಠಾಧಿಕಾರಿ ಶಿವ ಪ್ರಕಾಶ್ ದೇವರಾಜ್ ತಿಳಿಸಿದ್ದಾರೆ. ವಿಶ್ವಜಿತ್ ನಾಯಕ್ 2019ರಲ್ಲಿ ಎಂಟು ಟಿಪ್ಪರ್ ಟ್ರಕ್‌ಗಳನ್ನು ಖರೀದಿಸಿದ್ದರು. 60 ಲಕ್ಷ ರೂ.ಗಳ ಇನ್ಪುಟ್ ಟ್ಯಾಕ್ಸ್ ಕ್ರೆಡಿಟ್ ಗೆ ಅರ್ಹರಾಗಿದ್ದರು. ವಾಣಿಜ್ಯ ತೆರಿಗೆ ಇಲಾಖೆಯು ಅಕ್ರಮವಾಗಿ

## ಇರಾನ್ ದಾಳಿಗೆ ಭಾರತೀಯ ಬಲಿ

**ಕುವೈತ್:** ಇಲ್ಲಿನ ವಿದ್ಯುತ್ ಉತ್ಪಾದನೆ ಮತ್ತು ನೀರು ನಿರ್ಲವಣೀಕರಣ ಘಟಕದ ಸೇವಾ ಕಟ್ಟಡದ ಮೇಲೆ ಇರಾನ್ ನಡೆಸಿದ ದಾಳಿಯ ಪರಿಣಾಮ ಭಾರತೀಯ ಕಾರ್ಮಿಕನೊಬ್ಬ ಮೃತಪಟ್ಟಿದ್ದಾನೆ ಎಂದು ವಿದ್ಯುತ್, ನೀರು ಮತ್ತು ನವೀಕರಿಸಬಹುದಾದ ಇಂಧನ ಸಚಿವಾಲಯ ತಿಳಿಸಿದೆ. ಈ ದಾಳಿಯು ಕುವೈತ್ ರಾಜ್ಯದ ವಿರುದ್ಧದ 'ಇರಾನಿನ ಆಕ್ರಮಣ'ದ ಭಾಗವಾಗಿದೆ ಎಂದು ಹೇಳಿದೆ. ಈ ದಾಳಿಯಿಂದ ಗಮನಾರ್ಹ ಹಾನಿಯನ್ನುಂಟಾಗಿದ್ದು ಓರ್ವ ಕಾರ್ಮಿಕನ ಸಾವಿಗೆ ಕಾರಣವಾಯಿತು, ಅವರ ಗುರುತು ಇನ್ನೂ ಬಹಿರಂಗಗೊಂಡಿಲ್ಲ ಎಂದು ಬಿಡುಗಡೆ ಮಾಡಿದ ಅಧಿಕೃತ ಹೇಳಿಕೆಯಲ್ಲಿ ತಿಳಿಸಿದೆ.

## ಹಿಂದಿ: ಪ್ರಿಯಾಂಕ್-ಶೋಭಾ ವಾಕ್ಸಮರ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಕರ್ನಾಟಕ ಸರ್ಕಾರ ದ್ವಿಭಾಷಾ ಸೂತ್ರವನ್ನು ಅವಳವಡಿಸುವ ನಿರ್ಧಾರ ಇದೀಗ ಚರ್ಚೆಗೆ ಗ್ರಾಸವಾಗಿದೆ. ಈ ಬಗ್ಗೆ ಸಚಿವ ಪ್ರಿಯಾಂಕ್ ಖರ್ಗೆ ಮತ್ತು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಪರಸ್ಪರ ವಾಗ್ದಾಳಿ ಮುಂದುವರಿಸಿದ್ದಾರೆ. ಹಿಂದಿ ಮತ್ತು ತ್ರಿಭಾಷಾ ನೀತಿಯನ್ನು ಅನುಷ್ಠಾನಗೊಳಿಸುವುದರಿಂದಾಗುವ ಪ್ರಯೋಜನಗಳ ಬಗ್ಗೆ ಸಚಿವ ಪ್ರಿಯಾಂಕ್ ಖರ್ಗೆ ಬಿಜೆಪಿ ನಾಯಕರನ್ನು ಪ್ರಶ್ನಿಸಿದ್ದಕ್ಕೆ ಕೇಂದ್ರ ಸಚಿವೆ





ಶೋಭಾ ಕರಂದ್ಲಾಜೆ ಕರ್ನಾಟಕದ ಕಾಂಗ್ರೆಸ್ ನಾಯಕರು ಅನಗತ್ಯ ಗೊಂದಲವನ್ನು ಸೃಷ್ಟಿಸುತ್ತಿದ್ದಾರೆ ಎಂದು ದೂರಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಪ್ರಿಯಾಂಕ್, ಬಿಜೆಪಿ ನಾಯಕರು ಹಿಂದಿ ಭಾಷೆ ಅಥವಾ ತ್ರಿಭಾಷಾ ನೀತಿಯ ಅನುಕೂಲಗಳನ್ನು ವಿವರಿಸಲಿ. ವಿಷಯವನ್ನು ರಚನಾತ್ಮಕವಾಗಿ ಪ್ರಸ್ತಾಪಿಸಿದರೆ ರಾಜ್ಯವು ಚರ್ಚೆಗೆ ಮುಕ್ತವಾಗಿದೆ ಎಂದು ಎಂದಿದ್ದಾರೆ.

## ನಾಡಿನ ಜನತೆಗೆ ಪವರ್ ಶಾಕ್..!

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ನಾಡಿನ ಜನತೆಗೆ ಮತ್ತೊಂದು ಶಾಕ್ ಕಾದಿದೆ..! ಹೌದು, ಆರ್ಥಿಕ ವರ್ಷದ ಆರಂಭದ ದಿನದಿಂದಲೇ ಕರುನಾಡಿನ ಜನರಿಗೆ ವಿದ್ಯುತ್ ಹಾಗೂ ನೀರು ಬಿಸಿ ತಾಕಿಸಿವೆ. ಕಾರಣ, ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು ಏ. 1ರಿಂದ ಹೊಸ ದರ ಜಾರಿಗೆ ತರುವ ಬಗ್ಗೆ ಅಂತಿಮ ಹಂತದ ಚರ್ಚೆಯಲ್ಲಿ ತೊಡಗಿದೆ. ಯೂನಿಟ್‌ಗೆ 40 ರಿಂದ 50 ಪೈಸೆ ಹೆಚ್ಚಳ ಸಾಧ್ಯತೆ ದಟ್ಟವಾಗಿದೆ.

**ಎಷ್ಟು ಹೆಚ್ಚಳ..?:** ಬೆಸ್ಕಾಂ ಸೇರಿದಂತೆ ಐದು ಎಸ್ಕಾಂಗಳ ಪ್ರಸ್ತಾವನೆಯಂತೆ ಪ್ರತಿ ಯೂನಿಟ್ ವಿದ್ಯುತ್‌ಗೆ 40 ರಿಂದ 50 ಪೈಸೆವರೆಗೆ ಹೆಚ್ಚಳ ಮಾಡುವ ಸಾಧ್ಯತೆ ಇದೆ. ನಷ್ಟದಲ್ಲಿರುವ ವಿದ್ಯುತ್ ವಿತರಣಾ ಕಂಪನಿಗಳು ಆದಾಯದ ಕೊರತೆ ಸರಿಪಡಿಸಲು ಈ ಕ್ರಮ ಅನಿವಾರ್ಯ ಎಂದು ಅಧಿಕಾರಿಗಳು ವಾದಿಸಿದ್ದಾರೆ.

ಗೃಹ ಬಳಕೆದಾರರು, ವಾಣಿಜ್ಯ ಬಳಕೆದಾರರು ಹಾಗೂ ಕೈಗಾರಿಕಾ ಕ್ಷೇತ್ರದ ಮೂರು ವರ್ಗಗಳಿಗೂ ದರ ಏರಿಕೆಯ ನೇರ ಪರಿಣಾಮ ಬೀಳಲಿದೆ. ಗೃಹ ಜ್ಯೋತಿ ಫಲಾನುಭವಿಗಳಿಗೆ ವಿನಾಯಿತಿ ಸಿಗುವ ಸಾಧ್ಯತೆಗಳಿವೆ.

## ಪ್ರತ್ಯೇಕ ಸಭೆ, ಆಚರಣೆಗೆ ಆದ್ಯತೆ

• ಮಲ್ಲಮ್ಮ ನುಡಿ ವಾರ್ತೆ ಗಂಗಾವತಿ

ಸಂವಿಧಾನ ಶಿಲ್ಪಿ ಡಾಕ್ಟರ್ ಬಿಆರ್ ಅಂಬೇಡ್ಕರ್, ಮಾಜಿ ಉಪರಾಷ್ಟ್ರಪತಿ ಬಾಬು ಜಗಜೀವನ್ ರಾವ್ ಅವರು ಸೇರಿದಂತೆ ಸರಕಾರದಿಂದ ಆಚರಿಸಲ್ಪಡುವ ಜಯಂತ್ಯುತ್ಸವದ ಪೂರ್ವಭಾವಿ ಸಭೆ ಹಾಗೂ ಆಚರಣೆಗಳನ್ನು ಪ್ರತ್ಯೇಕವಾಗಿ ಆಚರಿಸಲು ತಹಶೀಲ್ದಾರ್ ಕಟ್ಟು ನಿಟ್ಟಿನ ಆದೇಶವನ್ನು ಹೊರಡಿಸಬೇಕೆಂದು ದಲಿತ ಮುಖಂಡ ಕೆ ಅಂಬಣ್ಣ ಮಾಗಿ ಹುಲುಗಪ್ಪ ಚಲವಾದಿ ಹೇಳಿದ್ದಾರೆ. ತಾ.ಪಂ. ಮಂಥನ ಸಭಾಂಗಣದಲ್ಲಿ ತಹಶೀಲ್ದಾರ್ ವಿಶ್ವನಾಥ್ ಮುರಡಿ ನೇತೃತ್ವದಲ್ಲಿ ಕರೆಯಲಾದ ಇಬ್ಬರು ಮಹಾನ್ ನಾಯಕರ ಜಯಂತ್ಯುತ್ಸವ ಆಚರಣೆ–ಯ ಪೂರ್ವಭಾವಿ ಸಭೆಯಲ್ಲಿ ಮಾತನಾಡಿ, ಈ ಹಿಂದೆ ತಹಸೀಲ್ದಾರರು ಅಂಬೇಡ್ಕರ್, ಬಾಬು ಜಗಜೀವನ್‌ರಾಮ್ ಅವರ ಜಯಂತಿ ವೇಳೆಯಲ್ಲಿ ವಿದ್ಯಾರ್ಥಿಗಳಿಗೆ ಭಾಷಣ ಸ್ಪರ–್ಧೆ ಪ್ರಬಂಧ ಸ್ಪರ್ಧೆ ಜೊತೆಗೆ ಹಲವಾರು ಕಾರ್ಯಕ್ರಮಗಳನ್ನು ಶಿಕ್ಷಣ ಇಲಾಖೆಯ




### ದಲಿತ ಧುರೀಣರ ಸಲಹೆಗೆ ಅಸ್ತು

ಪೂರ್ವಭಾವಿ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ತಹಸಿಲ್ದಾರ್ ವಿಶ್ವನಾಥ್ ಮುರಡಿ, ಪ್ರತಿ ವರ್ಷದಂತೆ ಈ ವರ್ಷವೂ ಸಹ ಮಹಾನ್ ನಾಯಕರ ಜಯಂತ್ಯುತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಲಾಗುತ್ತದೆ. ದಲಿತ ಧುರೀಣರು ನೀಡಿದ ಸಲಹೆ ಹಿರಿಯನ್ನು ಅಧಿಕಾರಿಗಳ ಗಮನಕ್ಕೆ ತಂದು ನಿರ್ಣಯ ತೆಗೆದುಕೊಳ್ಳಲಾಗುವುದು ಎಂದು ಅಭಯ ನೀಡಿದ್ದಾರೆ.

ನೇತೃತ್ವದಲ್ಲಿ ನಡೆಸಿ ಬಹುಮಾನಗಳನ್ನು ವಿತರಿಸಲಾಗುತ್ತಿತ್ತು. ಆದರೆ ಆ ಪದ್ಧತಿ ಇಂದು ಕಣ್ಮರೆಯಾಗಿರುವುದು ದುರಂತ. ಕಾಟಾಚಾರಕ್ಕೆ ಎಂಬಂತೆ ಅಧಿಕಾರಿಗಳು ಭಾಗವಹಿಸುವುದು ಸೂಕ್ತದಾಯಕ ಅಲ್ಲ ಎಂದು ಸಲಹೆ ನೀಡಿದ್ದಾರೆ. ಇದಕ್ಕೂ ಪೂರ್ವದಲ್ಲಿ ಕೆ ಅಂಬಣ್ಣ ಹಾಗೂ ಮಾಗಿ ಹುಲಗಪ್ಪ ಅವರು ಮಾತನಾಡಿದ್ದಾರೆ.

ದಲಿತಪರಸಂಘಟನೆಗಳ ಮುಖಂಡರುಗಳಾದ ಹುಲುಗಪ್ಪ ಮಾಗಿ ವಿವಿಧ ಇಲಾಖೆಗಳ ಅಧಿಕಾರಿಗಳು ಪೂರ್ವಭಾವಿ ಸಭೆಯಲ್ಲಿ ಪಾಲ್ಗೊಂಡಿದ್ದರು.

## ಸಾಹಿತ್ಯಿಕ ಶ್ರೀಮಂತಿಕೆಗೆ ಸಂಚಿಕೆ ಸಾಕ್ಷಿ..!

• ಮಲ್ಲಮ್ಮ ನುಡಿ ವಾರ್ತೆ ಕೆಂಭಾವಿ

ಪಟ್ಟಣದ ಮಹಾ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಸೌಹಾರ್ದ ಪತ್ತಿನ ಸಹಕಾರಿ ಸಂಘದ ಕಾರ್ಯಾಲಯದಲ್ಲಿ ಸೋಮವಾರ ಸಹಕಾರಿ ಸಂಘದ ಆಡಳಿತ ಮಂಡಳಿಯ ಸಹಯೋಗ ದೊಂದಿಗೆ, 'ಮಲ್ಲಮ್ಮ ನುಡಿ' ಪತ್ರಿಕೆಯ 'ಯುಗಾದಿ ಹಬ್ಬದ ವಿಶೇಷ ಸಂಚಿಕೆ'ಯನ್ನು ಅದ್ದೂರಿಯಾಗಿ ಲೋಕಾರ್ಪಣೆಗೊಳಿಸಲಾಯಿತು.

ಸಹಕಾರಿ ಸಂಘದ ಉಪಾಧ್ಯಕ್ಷ ಶರಣಬಸವ ಡಿಗ್ಗಾವಿ ಅವರು ಮಾತನಾಡಿ, ಪತ್ರಿಕೆಗಳು ಸಮಾಜದ ಕನ್ನಡಿ. ಮಲ್ಲಮ್ಮ ನುಡಿಯ ಈ ಯುಗಾದಿ ವಿಶೇಷ ಸಂಚಿಕೆಯು ಅತ್ಯುತ್ತಮ ಸಾಹಿತ್ಯಿಕ ಶ್ರೀಮಂತಿಕೆಯಿಂದ ಕಂಗೊಳಿಸುತ್ತಿದೆ. ವೈವಿಧ್ಯಮಯ ಲೇಖನ ಮತ್ತು ಹಬ್ಬದ ವಿಶೇಷತೆಗಳನ್ನು ಒಳಗೊಂಡಿರುವ ಈ ಸಂಚಿಕೆಯು ಓದುಗರ ಮನಸ್ಸಿಗೆ ಮುದ ನೀಡಲಿದೆ ಎಂದು ವ್ಯಾಖ್ಯಾನಿಸಿದ್ದಾರೆ.



ಪ್ರತಿಷ್ಠಿತ ಪ್ರಾದೇಶಿಕ ಪತ್ರಿಕೆಯಾಗಿ ಇದೀಗ ರಾಜ್ಯಮಟ್ಟದಲ್ಲೂ ಮಿಂಚುತ್ತಿರುವ ಮಲ್ಲಮ್ಮ ನುಡಿ ಕನ್ನಡ ಪತ್ರಿಕೆಯು, ನಾಡೇ ಅಚ್ಚರಿಪಡುವಂತೆ ಯುಗಾದಿ ಹಬ್ಬದ ವಿಶೇಷ ಸಂಚಿಕೆಯನ್ನು ರೂಪಿಸಿದೆ. ಇದು ಚೊಚ್ಚಲ ಪ್ರಯತ್ನವೆನಿಸದೆ, ಇದರ ಹಿಂದೆ ಪ್ರಭುದ್ಧ ಮನಸುಗಳು ಕೆಲಸ ಮಾಡಿರುವುದಕ್ಕೆ ವಿಶೇಷಾಂಕ ಸಾಕ್ಷಿಯಾಗಿದೆ.
–ಶರಣಬಸವ ಡಿಗ್ಗಾವಿ, ಸಹಕಾರಿ ಸಂಘದ ಉಪಾಧ್ಯಕ್ಷ

ನಾಡಿನ ಸಮಸ್ತ ಜನತೆಗೆ ಹಾಗೂ ಪತ್ರಿಕಾ ಬಳಗಕ್ಕೆ ನೂತನ ಕ್ರೋಧಿ ನಾಮ ಸಂವತ್ಸರದ ಹಾರ್ದಿಕ ಶುಭಾಶಯಗಳನ್ನು ಕೋರಿದ್ದಾರೆ.

ಈ ಸಂದರ್ಭದಲ್ಲಿ ಪ್ರಮುಖರಾದ ರಾಮನಗೌಡ ವಂದಗನೂರು ಯಾಳಗಿ, ಸಿದ್ದನಗೌಡ ಶಿವಪುರ, ಮಲ್ಲನಗೌಡ ಎಸ್ ಬಿರಾದಾರ, ಶಿವರಾಜ ಬುದೂರು, ರಾಮನಗೌಡ ಹದನೂರು, ಸುರೇಶ ಯಾಳಗಿ ಸೇರಿದಂತೆ ಸಹಕಾರಿ ಸಂಘದ ಸಿಬ್ಬಂದಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಹಿಂದೆ ಬಿಜೆಪಿ ಸರಕಾರ ಕೊಟ್ಟ ಕಾರ್ಯಕ್ರಮಗಳಿಗೆ ಇವತ್ತು ಕೂಡ ಗುದ್ದಲಿ ಪೂಜೆ ಆಗುತ್ತಿದೆ. ಯಾವುದೇ ರೀತಿ ಅಭಿವೃದ್ಧಿಗೆ ಇವರು ಹಣ ನೀಡಿಲ್ಲ: ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

# ಮಾತಾಜಿ ಹಾಕಿಕೊಟ್ಟ ಮಾರ್ಗದಲ್ಲಿ ನಾವೆಲ್ಲರೂ ಸಾಗಬೇಕು: ಸುಶೀಲಮ್ಮನವರು



• ಮಲ್ಲಮ್ಮ ನುಡಿ ವಾರ್ತೆಬಸವಕಲ್ಯಾಣ

ಈ ಜಾಗತಿಕ ಪ್ರಪಂಚಕ್ಕೆ ಬಸವಣ್ಣ, ಬಸವತತ್ವವನ್ನು ತಮ್ಮ ಅಮೋಘ ಪ್ರವಚನಗಳ ಮೂಲಕ ಪರಿಚಯಿಸಿದವರು ಲಿಂಗೈಕ್ಯ ಮಾತೆ ಮಹಾದೇವಿ ತಾಯಿಯವರು. ಈಗಿನ ಕಾಲಘಟ್ಟದಲ್ಲಿ ಇಂತಹ ಬಸವತತ್ವ ಚೇತನರ ಅಗತ್ಯವಿದ್ದು, ಮಾತಾಜಿ ಅವರ ಸಂತತಿ ಹೆಚ್ಚಾಗಬೇಕಿದೆ ಹಾಗೂ ಅವರ ಹಾಕಿಕೊಟ್ಟ ಮಾರ್ಗದಲ್ಲಿ ನಾವೆಲ್ಲರೂ ಸಾಗಬೇಕಾಗಿದೆ ಎಂದು ಬೆಂಗಳೂರಿನ ಸುಮಂಗಲಿ ಸೇವಾ ಆಶ್ರಮದ ಶ್ರೀ ಡಾ ಎಸ್ ಜಿ.ಸುಶೀಲಮ್ಮಾ ಹೇಳಿದರು. ಇಲ್ಲಿನ ಬಸವ ಧರ್ಮ ಪೀಠದ ಮಾಹಾಮನೆ ಮಾಹಾಮಠದ ಸಭಾಂಗಣದಲ್ಲಿ ಆಯೋಜಿಸಿದ್ದ ಪ್ರಥಮ ಮಹಿಳಾ ಜಗದ್ಗುರು ಪೂಜ್ಯ ಶ್ರೀ ಡಾ. ಮಾತೆ ಮಹಾದೇವಿಯವರ 80ನೇ ಜನ್ಮದಿನದ ಮತ್ತು 7ನೇ ಲಿಂಗೈಕ್ಯ ಸಂಸ್ಮರಣೆ ಕಾರ್ಯಕ್ರಮ ಹಾಗೂ ನೂತನ ಬಸವಾತ್ಮಜೆ ಮಹಿಳಾ ಸಹಕಾರ ಸಂಘ ನಿಯಮಿತದ ಉದ್ಘಾಟನಾ ಸಮಾರಂಭ ನೇರವೇರಿಸಿ ಮಾತನಾಡಿದ ಅವರು ಈಗ ಅನೇಕ ಜನ ಬಸವಣ್ಣ, ಬಸವತತ್ವದ ಬಗ್ಗೆ ಮಾತನಾಡುತ್ತಾರೆ. ಒಂದು ಕಾಲದಲ್ಲಿ ಯಾರಿಗೂ ಬಸವಣ್ಣ, ಬಸವತತ್ವದ ಬಗ್ಗೆ ಗೊತ್ತಿರಲಿಲ್ಲ. ಅಂತಹ ಕಾಲದಲ್ಲಿ ಮಾತೆ ಮಹಾದೇವಿಯವರು ಪ್ರವಚನಗಳ ಮೂಲಕ ಬಸವಾದಿ ಶರಣರ ವಿಚಾರಗಳನ್ನು ಪ್ರಚಾರ ಮಾಡಿದವರು. ಬಸವತತ್ವದ ಬೆನ್ನೆಲುಬಾಗಿ ದುಡಿದು, ಬಸವ ಸಂಘಟನೆ ಬಲಪಡಿಸುವ ನಿಟ್ಟಿನಲ್ಲಿ ಹಗಲಿರುಳೆನ್ನದೆ ಶ್ರಮಿಸಿದ್ದಾರೆ. ವಚನ ಸಾಹಿತ್ಯದ ಪ್ರಸಾರ, ಲಿಂಗಾಯತ ಧರ್ಮ ಮಾನ್ಯತೆಗಾಗಿ ಹೋರಾಡಿದ ಹೋರಾಟ ಸೇವೆ ಅಪಾರ, ಶರಣ ಸಂಸ್ಕೃತಿಯ ಪ್ರಸಾರಕ್ಕೆ ಅವರು ಸಲ್ಲಿಸಿದ ಅಮೂಲ್ಯ ಸೇವೆ ಮತ್ತು ಮಹಿಳಾ ಸಬಲೀಕರಣಕ್ಕೆ ನೀಡಿದ ಕೊಡುಗೆ ಅನನ್ಯವಾದದ್ದು ಎಂದರು.

ದಿವ್ಯ ಸಾನಿಧ್ಯ ವಹಿಸಿದ್ದ ಅಲ್ಲಮ ಪ್ರಭು ಶೂನ್ಯ ಪೀಠದ ಪೂಜ್ಯಶ್ರೀ ಸಿದ್ದರಾಮೇಶ್ವರ ಸ್ವಾಮಿಜಿ ಮಾತನಾಡಿ ಮಾತಾಜಿಯವರು ಭೌತಿಕವಾಗಿ ದೂರವಾಗಿರಬಹುದು. ಆದರೆ, ಅವರು ಹಚ್ಚಿರುವ ತತ್ವದ ಬೆಳಕಿನ ಜ್ಯೋತಿ ಸಮಾಜದಲ್ಲಿ ಸದಾ ಬೆಳಗುತ್ತಿದೆ. ಮಾತಾಜಿಯವರು ಕಾಲಿಗೆ ಚಕ್ರಕಟ್ಟಿ–ಕೊಂಡು ನಾಡಿನಾದ್ಯಂತ ಸಂಚರಿಸಿ ಬಸವತತ್ವ ಪ್ರಸಾರ ಮಾಡಿದವರು. ಹೀಗಾಗಿಯೇ ಇಂದು ಮಾತಾಜಿ ಎಲ್ಲರ ಮನೆ ಮತ್ತು ಮನಗಳಲ್ಲಿ ನೆಲೆಸಿದ್ದಾರೆ. ಲಿಂಗಾಯತರು ಒಗ್ಗಟ್ಟಾಗಿ ಮುಂದೆ ಸಾಗಬೇಕು. ಲಿಂಗಾಯತರಲ್ಲಿ ಅನೇಕ ಬಡವರಿದ್ದಾರೆ. ಅವರನ್ನು ಮೇಲೆತ್ತುವ ಕೆಲಸ ಮಾಡೋಣ. ನಮಗಾಗಿ ನಮ್ಮ ಕುಟುಂಬಕ್ಕಾಗಿ ಅಲ್ಲ ಬಸವತತ್ವಕ್ಕಾಗಿ ನಾವೆಲ್ಲರೂ ಒಗ್ಗಟ್ಟಾಗಬೇಕು ಎಂದರು.

ಪ್ರಾಸ್ತಾವಿಕವಾಗಿ ಮಾತೆ ಲಾವಣ್ಯದೇವಿ ಮಾತಾಜಿ ಮಾತನಾಡಿ ಪರಮ ಪೂಜ್ಯ ಶ್ರೀ ಡಾ ಮಾತೆ ಮಹಾದೇವಿಯವರ ಸಾಧನಾ ಸೇವೆಯನ್ನು ಸ್ಮರಿಸಿ, ಅವರ ದಾರಿಯಲ್ಲಿ ಹೋಗೋಣ ಎಂದರು.

ಬಸವತ್ಮಾಜೆ ಮಹಿಳಾ ಸಹಕಾರ ಸಂಘ ನಿಯಮಿತದ ಧ್ಯೇಯ ಉದ್ದೇಶಗಳು ತಿಳಿಸಿದರು. ಈ ಸಂದರ್ಭದಲ್ಲಿ ಪರಮ ಪೂಜ್ಯ ಶ್ರೀ ಜ್ಞಾನೇಶ್ವರಿ ಮಾತಾಜಿ, ಪರಮ ಪೂಜ್ಯ ಶ್ರೀ ಪ್ರಭುದೇವ ಸ್ವಾಮಿಜಿ, ಪೀಠಾಧ್ಯಕ್ಷರು ಲಿಂಗಾಯತ ಮಾಹಾಮಠ ಗೋರ್ಟಾ (ಬಿ), ಪರಮ ಪೂಜ್ಯ ಬಸವಯೋಗಿ ಸ್ವಾಮಿಜಿ, ಕೆಎ ಅಧಿಕಾರಿ ಸಾವಿತ್ರಿ ಶರಣು ಸಲಗರ್, ಸಾಹಿತಿ ಡಾ.ಸೋಮನಾಥ ಪಾಟೀಲ, ರಾಜೇಶ್ವರಿ ಶ್ರೀಕಾಂತ ಸ್ವಾಮಿ, ಪೂಜ್ಯ ನಾಗಲಾಂಬಿಕಾ ಮಾತಾಜಿ , ಜಿಲ್ಲಾ ಶಿಶು ಅಭಿವೃದ್ಧಿ ಅಧಿಕಾರಿ ರೂಪಾ ಕೋಟೆ, ಶರಣ ಸಾಹಿತ್ಯ ಪರಿಷತ್ತಿನ ಜಿಲ್ಲಾ ಗೌರವ ಕಾರ್ಯದರ್ಶಿ

ಸಂಗಮೇಶ ಎನ್ ಜವಾದಿ, ಶಂಕ್ರಪ್ಪ ಪಾಟೀಲ ಜಹೀರಾಬಾದ, ಆರ್ ಜಿ ಶೇಟಕಾರ್, ಸೊನಾಲಿ ವಿಜಯಸಿಂಗ್, ಶಾರದಮ್ಮ ಸಂಗನಕಲ್ಲು, ದೇವಕಿ ನಾಗೂರೆ, ವಿಜಯಶ್ರೀಬಶೆಟ್ಟಿ, ಕುಶಾಲರಾವ ಪಾಟೀಲ, ರವೀಂದ್ರ ಕೋಳಕೂರ್,

ಸಂಜುಕುಮಾರ ಪಾಟೀಲ, ಕಂಟೆಪ್ಪ ಗಂದೆಗುಡಿ, ರಾಜೇಂದ್ರ ಗಂದಗೆ, ರಾಜೇಂದ್ರಜೊನ್ನಿಕೇರಿ, ಜಗನ್ನಾಥದೇವಣಿ, ಮಾಹಾದೇವ ಮಾಹಾಜನ, ವೀರಶೆಟ್ಟಿ ಚಿಟ್ಟೆದ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ರವಿ ಕೊಳಕೂರ ಸ್ವಾಗತಿಸಿದರು, ಸುರೇಶ ಸ್ವಾಮಿ ನಿರೂಪಿಸಿದರು, ರವಿ ಪಾಪಡೆ ವಂದಿಸಿದರು. ಈ ಸಂದರ್ಭದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿತ್ತು. ವಿವೇಕಾನಂದ ವಸ್ತದ, ಪ್ರವೀಣ ಎನ್ ರವರಿಂದ ವಚನ ಗಾಯನ ಜರುಗಿತು. ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಾಧಕ ಮಹಿಳೆಯರಿಗೆ ಹಾಗೂ ನೂತನ ಬಸವೇಶ್ವರ ದೇವಸ್ಥಾನ ಆಡಳಿತ ಮಂಡಳಿ ಪದಾಧಿಕಾರಿಗಳಿಗೆ ಗೌರವ ಸನ್ಮಾನ ನೇರವೇರಿಸಲಾಯಿತು.

# ಸಹಬಾಳ್ವೆ ನಮ್ಮೆಲ್ಲರ ಆದ್ಯ ಕರ್ತವ್ಯ



• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ಸೃಷ್ಟಿಕರ್ತ ದೇವನೊಬ್ಬನೇ ಇದ್ದಾನೆ, ಅವನ ಮಕ್ಕಳಾದ ನಾವೆಲ್ಲವರೂ ಅಣ್ಣ ತಮ್ಮಂದಿರಂತೆ ಸಹಬಾಳ್ವೆ ನಡೆಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಎಂದು ಜಮಾವತೆ ಇಸ್ಲಾಮೀ ಹಿಂದ್ ಕಲಬುರಗಿಯ ಇಂಜಿನಿಯರ್ ಅಬ್ದುಲ್ ಸತ್ತಾರ ಸಾಹೇಬ್ ಹೇಳಿದರು.

ಪಟ್ಟಣದ ಬಸ್ ನಿಲ್ದಾಣದ ಹತ್ತಿರದ ಮಹಮ್ಮದಿ ಮಸ್ಜಿದ್‌ನಲ್ಲಿ ರವಿವಾರ ರಾತ್ರಿ ಜಮಾವತೆ ಇಸ್ಲಾಮೀ ಹಿಂದ್ ವತಿಯಿಂದ ಆಯೋಜಿಸಿದ್ದ ರಂಝಾನ್ ಹಬ್ಬದ ಸಂತೋಷ ಹಂಚಿಕೊಳ್ಳುವ ಈದ್ ಸ್ನೇಹಕೂಟದಲ್ಲಿ ಅವರು ಮಾತನಾಡಿದರು. ಒಂದು ಸಣ್ಣ ಪ್ರಾಣಿಗೂ ತೊಂದರೆ ನೀಡದಂತೆ ಕಾರ್ಯಮಾಡಿದರೆ ದೇವರು ಮೆಚ್ಚುವನು. ಮಹಾತ್ಮಾ ಬಸವೇಶ್ವರರು ಹುಟ್ಟಿದ ನಾಡಿನಲ್ಲಿ ಹುಟ್ಟಿರುವ ನಾವೆಲ್ಲರೂ ಮನುಷ್ಯರನ್ನು ಜೋಡಿಸುವ ಕಾರ್ಯಮಾಡಬೇಕು. ಇವನಾರವ, ಇವನಾರವ ಎಂದೆನಿಸದಿರಯ್ಯಾ, ಇವ ನಮ್ಮವ, ಇವ ನಮ್ಮವ, ಇವ ನಮ್ಮ ಮನೆಯ ಮಗನೆಂದಿಸಯ್ಯಾ ಯನ್ನುವ ಬಸವವಾಣಿ ನಮಗೆ ಪ್ರೇರಣೆಯಾಗಬೇಕು ಎಂದು ಹೇಳಿದರು. ಜಾಮಾ ಮಜ್ಜಿದ್‌ನ ಮೌಲಾನಾ ಜಲಾಲೋದಿನ್ ಖಾಸ್ಮಿ ಮಾತನಾಡಿ, ಎಲ್ಲಾ ಧರ್ಮಗಳ ಸಾರವೇ ಕುರಾನ್‌ನಲ್ಲಿ ಮೂಡಿ ಬಂದಿದೆ ಎಂದು ಹೇಳಿದರು. ಯೇಸು ನಿಲಯದ ಫಾದರ್ ಡೇವಿಡ್ ಮಾತನಾಡಿ, ನಾವೆಲ್ಲರೂ ಮಾನವ ಕುಟುಂಬಕ್ಕೆ ಸೇರಿದವರಾಗಿದ್ದೇವೆ, ಎಲ್ಲಾ ಧರ್ಮಗಳ ತಿರುವು ಶಾಂತಿ, ಸಮಾನತೆಯಾಗಿದೆ ಎಂದು ಹೇಳಿದರು. ಕರುಣಾ ಬುದ್ಧವಿಹಾರದ ಭಂತೆ ಮಹಾಥೇರು ನೌಪಾಲ್‌ಜೀ ಮಾತನಾಡಿ, ಜೋಡಿಸುವ ಕಾರ್ಯ ಧರ್ಮಗಳದ್ದಾಗಿದೆ. ಧರ್ಮದ ಮತ್ತು ಭಾಷೆಯ ಹೆಸರಿನಲ್ಲಿ ಜನರನ್ನು ಒಡೆಯುವ ಕೆಲಸ ಮಾಡುವವರಿಗೆ ಬುದ್ದಿ ಕಲಿಸುವ ಕಾರ್ಯವಾಗಬೇಕು ಎಂದು ಹೇಳಿದರು. ಜಮಾಇತೆ ವಿಶೇಷ ಉಪನ್ಯಾಸ ಮಂಡಿಸಿದ ಇಸ್ಲಾಮೀ ಹಿಂದ್‌ನ ಬೀದರ ಸದಸ್ಯ ನಿವೃತ್ತ ಉಪನ್ಯಾಸಕ ನಿಝಾಮುದಿನ್ ಸಾಹೇಬ್, ಜಗತ್ತಿನಲ್ಲಿಯೇ ಉತ್ತಮವಾದ ರಾಷ್ಟ್ರ ನಮ್ಮ ಭಾರತವಾಗಿದೆ. ಭಾರತೀಯ ಬಹುಸಂಖ್ಯಾತರು ಎಲ್ಲರಿಗೂ ಒಳ್ಳೆಯದನ್ನೇ ಬಯಸುತ್ತಾರೆ. ಪ್ರಕೃತಿ ಮನುಷ್ಯನಿಗೆ ಒಳ್ಳೆದನ್ನೇ ಬಯಸುತ್ತದೆ. ಇಫ್ತಾರ ಕೂಟದಿಂದ ಭಾತೃತ್ವಭಾವ ಮೂಡಿಬರುತ್ತದೆ ಎಂದು ಹೇಳಿದರು. ಮಹಮದ್ ಎಕ್ಬಾಲ್ ಅಹ್ಮದ ಗಾಝಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ನ್ಯಾಯವಾದಿ ಬಾಬುರಾವ ಗಾಮಾ ಮಾತನಾಡಿ, ಮನುಷ್ಯಜೀವನ ಕ್ಷಣಿಕವಾಗಿದೆ, ಮರಣದ ವರೆಗೆ ಜೀವನದ ಸಾರ್ಥಕತೆಗೆ ಉತ್ತಮವಾದ ಕಾರ್ಯಮಾಡಬೇಕು ಎಂದು ಹೇಳಿದರು. ಅಲ್ತಾಫ್ ಅಂಜದ ಸಾಹೇಬ್, ಶೇಖ್ ಅಬ್ದುಲ್ ನಸೀರ ಈದ್ ಸ್ನೇಹ ಕೂಟದ ಬಗ್ಗೆ ಮಾತನಾಡಿದರು. ಈ ಸಂದರ್ಭದಲ್ಲಿ ಪುರಸಭೆ ಮಾಜಿ ಅಧ್ಯಕ್ಷ ಬಸವರಾಜ ವಂಕೆ, ಸೋಮನಾಥಪ್ಪ ಅಸ್ಟೂರೆ, ವೀರಶೈವ ಮಹಾಸಭಾದ ಅಧ್ಯಕ್ಷ ಮಲ್ಲಿಕಾರ್ಜುನ ಹಲಮಂಡಗೆ, ಅಂಬಾದಾಸ ಕೋರೆ, ಜಯರಾಜ ದಾಬಶೆಟ್ಟೆ, ಶೇಖ್ ಸಾಬೇರ್ ಪಟೇಲ, ಶೇಖ್ ಅಬ್ದುಲ್ ನಸೀರ, ಇಂಜಿನಿಯರ ಅಲ್ತಾಫ್ ಅಹಮದ, ಆಸಿಫ್ ಅಲಿ, ಸೇಖ ಮುದಸಿರ್, ಸಯ್ಯದ ಶರೀಫ್, ಮಹಮ್ಮದ ರಫೀಕ್ ಮುಲ್ಲಾ ಉಪಸ್ಥಿತರಿದ್ದರು.

ಆಸಿಫ್ ಅಲಿ ಸ್ವಾಗತಿಸಿದರು. ಸಯ್ಯದ್ ಶರೀಫ್ ನಿರೂಪಿಸಿದರು. ಸೇಖ್ ಮುದಸಿರ ವಂದಿಸಿದರು.

## ಸಂಪಾದಕೀಯ

ಮಾಣಿಕರೆಡ್ಡಿ ಕೌಡಾಳೆ
ಪ್ರಧಾನ ಸಂಪಾದಕರು
ಮೋ: 9845028349



# ಜನರ ತೆರಿಗೆಯಿಂದಲೇ ಅಧಿಕಾರಿಗಳ ಸಂಬಳ ಮರೆಯಬಾರದು!

ರಾಜ್ಯದಲ್ಲಿ ಗ್ರಾಮ ಪಂಚಾಯತ ಮಟ್ಟದಿಂದ ಹಿಡಿದು ಉನ್ನತ ಮಟ್ಟದ ಅಧಿಕಾರಿಗಳವರೆಗೆ ಎಲ್ಲರೂ ಸರ್ಕಾರದ ಸೇವೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರವು ಅವರಿಗೆ ನೀಡುವ ಸಂಬಳ, ಸೌಲಭ್ಯಗಳು, ವಾಹನಗಳು ಹಾಗೂ ಕಚೇರಿ ವ್ಯವಸ್ಥೆ ಚಿಟಟ ಇವುಗಳೆಲ್ಲವೂ ಜನರು ಕಟ್ಟುವ ತೆರಿಗೆಯಿಂದಲೇ ಬರುತ್ತವೆ ಎಂಬುದನ್ನು ಅಧಿಕಾರಿಗಳು ಎಂದಿಗೂ ಮರೆಯಬಾರದು.

ಗ್ರಾಮೀಣ ಪ್ರದೇಶಗಳಲ್ಲಿ ಸಾಮಾನ್ಯ ಜನರು ತಮ್ಮ ಕೆಲಸಗಳಿಗಾಗಿ ಸರ್ಕಾರಿ ಕಚೇರಿಗಳ ಸುತ್ತ ಅಲೆದಾಡಬೇಕಾದ ಪರಿಸ್ಥಿತಿ ಕಾಣಿಸುತ್ತಿದೆ. ಸಣ್ಣ ಸಣ್ಣ ಕೆಲಸಗಳಿಗೂ ಜನರು ದಿನಗಟ್ಟಲೆ ಕಾಯಬೇಕಾಗುತ್ತದೆ. ಕೆಲವೊಮ್ಮೆ ಅಧಿಕಾರಿಗಳ ನಿರ್ಲಕ್ಷ್ಯ, ವಿಳಂಬ ಹಾಗೂ ಕಚೇರಿ ಕ್ರಮಗಳ ಗೊಂದಲದಿಂದ ಬಡ ಜನರು ತುಂಬಾ ಸಂಕಷ್ಟ ಅನುಭವಿಸುತ್ತಿದ್ದಾರೆ.

ಸರ್ಕಾರಿ ಹುದ್ದೆ ಎನ್ನುವುದು ಅಧಿಕಾರ ಪ್ರದರ್ಶನಕ್ಕಾಗಿ ಅಲ್ಲ; ಅದು ಜನಸೇವೆಗಾಗಿ ನೀಡಲಾದ ಹೊಣೆಗಾರಿಕೆ. ಜನರು ತಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ಅಧಿಕಾರಿಗಳ ಬಳಿ ಬರುತ್ತಾರೆ. ಆದರೆ ಅವರಿಗೆ ಸರಿಯಾದ ಸ್ಪಂದನೆ ಸಿಗದಿದ್ದರೆ ಸರ್ಕಾರದ ಮೇಲಿನ ವಿಶ್ವಾಸವೇ ಕುಸಿಯುವ ಪರಿಸ್ಥಿತಿ ಉಂಟಾಗುತ್ತದೆ.

ಗ್ರಾಮ ಪಂಚಾಯತಗಳಿಂದ ಜಿಲ್ಲೆ ಹಾಗೂ ರಾಜ್ಯ ಮಟ್ಟದವರೆಗೆ ಇರುವ ಎಲ್ಲಾ ಅಧಿಕಾರಿಗಳು ತಮ್ಮ ಕರ್ತವ್ಯವನ್ನು ಪ್ರಾಮಾಣಿಕವಾಗಿ ನಿರ್ವಹಿಸುವುದು ಅತ್ಯಂತ ಮುಖ್ಯ. ಜನರ ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸುವುದು, ಕಡತಗಳನ್ನು ಸಮಯಕ್ಕೆ ವಿಲೇವಾರಿ ಮಾಡುವುದು, ಹಾಗೂ ಜನರೊಂದಿಗೆ ಗೌರವದಿಂದ ವರ್ತಿಸುವುದು ಅವರ ಮೊದಲ ಕರ್ತವ್ಯವಾಗಬೇಕು. ಜನರ ತೆರಿಗೆಯಿಂದ ಸಂಬಳ ಪಡೆಯುವ ಅಧಿಕಾರಿಗಳು ಜನಸೇವೆಯ ಮನೋಭಾವದಿಂದ ಕೆಲಸ ಮಾಡಿದಾಗ ಮಾತ್ರ ಉತ್ತಮ ಆಡಳಿತ ಸಾಧ್ಯ. ಇಲ್ಲದಿದ್ದರೆ ಜನರಲ್ಲಿ ಅಸಮಾಧಾನ ಹೆಚ್ಚಾಗಿ ಆಡಳಿತದ ಮೇಲೆ ನಂಬಿಕೆ ಕುಸಿಯುವ ಅಪಾಯವಿದೆ.

ಆದ್ದರಿಂದ ಗ್ರಾಮ ಪಂಚಾಯತದಿಂದ ಹಿಡಿದು ಉನ್ನತ ಮಟ್ಟದ ಅಧಿಕಾರಿಗಳವರೆಗೆ ಎಲ್ಲರೂ "ನಮ್ಮ ಸಂಬಳ ಜನರ ತೆರಿಗೆಯಿಂದಲೇ ಬರುತ್ತದೆ" ಎಂಬ ಸತ್ಯವನ್ನು ಸದಾ ನೆನಪಿನಲ್ಲಿ ಇಟ್ಟುಕೊಂಡು ಜನರ ಸೇವೆಗೆ ಪ್ರಾಮಾಣಿಕವಾಗಿ ತೊಡಗಬೇಕು. ಆಗ ಮಾತ್ರ ಉತ್ತಮ ಆಡಳಿತ ಮತ್ತು ಜನಸಂತೃಪ್ತಿ ಸಾಧ್ಯವಾಗುತ್ತದೆ.

## ರಾಷ್ಟ್ರಮಟ್ಟದ ಖೇಲೊ ಇಂಡಿಯಾ ಟ್ರೈಬಲ್ ಗೇಮ್ಸ್

# ಮಾಣಿಕ್ ಪಬ್ಲಿಕ್ ಸ್ಕೂಲ್ ವಿದ್ಯಾರ್ಥಿನಿಯರು ಕಂಚಿನ ಪದಕ ಸಾಧನೆ




• ಮಲ್ಲಮ್ಮ ನುಡಿ ವಾರ್ತೆ,ಹುಮನಾಬಾದ್

ಛತ್ತೀಸ್‌ಗಢದ ರಾಯಪುರನಲ್ಲಿ ನಡೆಯುತ್ತಿರುವ ರಾಷ್ಟ್ರಮಟ್ಟದ ಖೇಲೋ ಇಂಡಿಯಾ ಟ್ರೈಬಲ್ ಗೇಮ್ಸ್ 2026ರ ಈಜುಸ್ಪರ್ಧೆಯಲ್ಲಿ ದಿ ಮಾಣಿಕ್ ಪಬ್ಲಿಕ್ ಸ್ಕೂಲ್ ವಿದ್ಯಾರ್ಥಿನಿಯರು ಕಂಚಿನ ಪದಕ ಗೆದ್ದು, ಅದ್ಭುತ ಸಾಧನೆ ಮಾಡಿದ್ದಾರೆ.

ಕ್ರೀಡಾಕೂಟದಲ್ಲಿ ಕರ್ನಾಟಕ ತಂಡದ ಮೇಘಾಂಜಲಿ, ವೈಷ್ಣವಿ ವಿ, ಅಕ್ಷಿತಾ ಜಿ. ಹಾಗೂ ನಿಧಿ ಎಸ್. ಅವರು 4100 ಮೀಟರ್ ಫ್ರೀಸ್ಟೈಲ್ ರಿಲೇ ಸ್ಪರ್ಧೆಯಲ್ಲಿ 6.29.69 ನಿಮಿಷದೊಂದಿಗೆ ಮೂರನೇ ಸ್ಥಾನ ಪಡೆದುಕೊಂಡಿದ್ದಾರೆ.

ಕರ್ನಾಟಕ ತಂಡದ ಅಕ್ಷಿತಾ ಜಿ, ವೈಷ್ಣವಿ ವಿ. ಅವರು ದಿ ಮಾಣಿಕ್ ಪಬ್ಲಿಕ್ ಸ್ಕೂಲ್ ವಿದ್ಯಾರ್ಥಿನಿಯರಾಗಿದ್ದು, ಈಜು ತರಬೇತುದಾರ ಶಂಕರ ಕವಲಗಿ ಅವರ ಮಾರ್ಗದರ್ಶನದಲ್ಲಿ ತರಬೇತಿ ಪಡೆಯುತ್ತಿದ್ದಾರೆ.

ವಿದ್ಯಾರ್ಥಿನಿಯರ ಸಾಧನೆಗೆ ಶಾಲೆಯ ಆಡಳಿತ ಮಂಡಳಿಯ ಅಧ್ಯಕ್ಷರಾದ ಅನಂದರಾಜ ಮಹಾರಾಜ್, ಕಾರ್ಯದರ್ಶಿ ಚಾರುದತ್ತ ಪ್ರಭು, ಪ್ರಾಂಶುಪಾಲರಾದ ಅರುಂಧತಿ ಭಾಗವತ್, ಉಪ ಪ್ರಾಂಶುಪಾಲ ವಿಲಾಸ್ ನಾಯಕ್ ಸೇರಿದಂತೆ ಬೋಧಕ, ಬೋಧಕೇತರ ಸಿಬ್ಬಂದಿಗಳು ಹರ್ಷ ವ್ಯಕ್ತಪಡಿಸಿ, ಅಭಿನಂದಿಸಿದ್ದಾರೆ.

# ಎಲ್ಲರ ಜಿವನದ ದಿಕ್ಕು ಬದಲಾಯಿಸುವ ಪ್ರಾರ್ಥನೆ: ವಾರದ



• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ಪ್ರತಿನಿತ್ಯ ಪ್ರತಿಯೊಬ್ಬರೂ ಶ್ರದ್ಧೆ,ಭಕ್ತಿ,ನಿಷ್ಠೆಯಿಂದ ದೇವರ ನಾಮಸ್ಮರಣೆ ಮಾಡಿದರೆ ನಮ್ಮ ಜೀವನದ ದಿಕ್ಕು ಬದಲಾಯಿಸುತ್ತದೆ ಎಂದು ನ್ಯಾಯವಾದಿ ಉಮಾಕಾಂತ ವಾರದ ಹೇಳಿದರು.

ಪಟ್ಟಣದ ಉಪನ್ಯಾಸಕರ ಬಡಾವಣೆಯ ಮಹಾದೇವ ಮಂದಿರದಲ್ಲಿ 'ಮಹಾದೇವ ಬಾರಸಿ' ನಿಮಿತ್ಯ ಏರ್ಪಡಿಸಿದ ಸಾಮೂಹಿಕ ಪ್ರಾರ್ಥನಾ ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು.

ಯಾಂತ್ರಿಕ,ತಾಂತ್ರಿಕ ಯುಗದಲ್ಲಿ ನಾವುಗಳು ಭಗವಂತನನ್ನು ಸ್ಮರಿಸಬೇಕು.ನಾವು ಮಾಡುವ ಕಾರ್ಯಗಳು ಪರಿಶುದ್ಧತೆಯಿಂದ ಕೂಡಿರಬೇಕು. ಡಾಂಬಿಕ ಭಕ್ತಿ ದೇವರಿಗೆ ಸಲ್ಲುವುದಿಲ್ಲ.ಪ್ರಾರ್ಥನೆ ಮತ್ತು ಪರಿಶ್ರಮ ಜೊತೆಯಾಗಿ ಮಾಡಿದಲ್ಲಿ ಯಾವ ಕಾರ್ಯವು ವಿಫಲ ಆಗುವುದಿಲ್ಲ ಎಂದು ಬಹು ಮಾರ್ಮಿಕವಾಗಿ ನುಡಿದರು. ಈ ಸಂದರ್ಭದಲ್ಲಿ ಪ್ರಮುಖರಾದ ಶರಣಪ್ಪ ಬಸನಾಳೆ,ಪಂಡಿತ ಕುಲಕರ್ಣಿ,ಬಸವರಾಜ ಕುರುಬ ಖೇಳಗಿ,ರಮೇಶ,ಬಾಲರಾಜ,ಗೋವಿಂದರಾವ ಕುರುಮನಾಳೆ,ಕಾಳಿದಾಸ ವೈಜೆ,ಚಂದ್ರಕಾಂತ ಬಿರಾದಾರ, ಗೌರಿ ವಾರದ,ಮಂಗಲಾ,ಕೊಳ್ಳಾ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ವೈಜನಾಥ ರಾಂಪುರೆ ನಿಧನ



• ಮಲ್ಲಮ್ಮ ನುಡಿ ವಾರ್ತೆ ಕಮಲನಗರ

ತಾಲೂಕಿನ ಡಿಗ್ಗಿ ಗ್ರಾಮದ ಹಿರಿಯ ಜೀವಿ ವೈಜನಾಥ ತಂದೆ ಹನಮಂತರಾವ ರಾಂಪುರೆ(72) ಅವರು ವಯೋಸಹಜ ಕಾಯಿಲೆಯಿಂದ ಸೋಮವಾರ ರಾತ್ರಿ ನಿಧನರಾಗಿದ್ದಾರೆ.

ಇವರು ಪತ್ನಿ, ಮೂವರು ಗಂಡ ಮಕ್ಕಳು ಮೂವರು ಸೊಸೆಯಂದರು, ಮಮ್ಮಕ್ಕಳನ್ನು ಹಾಗೂ ರಾಂಪುರೆ ಪರಿವಾರದವರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸೋಮವಾರ ಸಂಜೆ 4 ಗಂಟೆಗೆ ಅವರ ಹೊಲದಲ್ಲಿ ನಡೆಯಿತು ಎಂದು ಕುಟುಂಬ ಮೂಲದವರು ತಿಳಿಸಿದ್ದಾರೆ.



ಭಾಲ್ಕಿ: ತಾಲೂಕಿನ ಡೋಣಗಾಪುರ ಗ್ರಾಮದ ಶ್ರೀ ಡೋಣೇಶ್ವರ ದೇವಸ್ಥಾನದಲ್ಲಿ ನಡೆದ ವಿಶ್ವಶಾಂತಿಗಾಗಿ 44ನೇ ಜಪಯಜ್ಞ ಮತ್ತು ಪ್ರಯೋಗಾತ್ಮಕ ಧರ್ಮಶಿಕ್ಷಣ ಕಾರ್ಯಕ್ರಮದಲ್ಲಿ ಡಾ। ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಮಾತನಾಡಿದರು. ಶ್ರೀ ರಾಜೇಶ್ವರ ಶಿವಾಚಾರ್ಯರು ಉಪಸ್ಥಿತರಿದ್ದರು.

# ಜನರಲ್ಲಿ ಸಾಮರಸ್ಯದ ಭಾವ ಮೂಡಿಸುವ ಜಾತ್ರೆಗಳು



• ಮಲ್ಲಮ್ಮ ನುಡಿ ವಾರ್ತೆ,ಭಾಲ್ಕಿ

ಜಾತ್ರೆಗಳು ಗ್ರಾಮಸ್ಥರಲ್ಲಿ ಸಾಮರಸ್ಯದ ಭಾವ ಮೂಡಿಸಿ ನಾವೆಲ್ಲರೂ ಒಂದೇ ಎಂಬ ಸಂದೇಶವನ್ನು ಸಾರಲು ಸಹಕಾರಿಯಾಗಿವೆ ಎಂದು ಹಲಬರ್ಗಾದ ರಾಚೋಟೇಶ್ವರ ಮಠದ ಪೀಠಾಧಿಪತಿ ಹಾವಗಿಲಿಂಗ ಶಿವಾಚಾರ್ಯರು ಹೇಳಿದರು. ತಾಲ್ಲೂಕಿನ ತೇಗಂಪುರ ಗ್ರಾಮದಲ್ಲಿ ಮಹಾದೇವ ಜಾತ್ರಾ ಮಹೋತ್ಸವ ನಿಮಿತ್ತ ಹಮ್ಮಿಕೊಂಡಿದ್ದ ಪ್ರವಚನ ಕಾರ್ಯಕ್ರಮದಲ್ಲಿ ಗ್ರಾಮಸ್ಥರಿಂದ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ಧರ್ಮ ಮಾನವರನ್ನು ಸನ್ಮಾರ್ಗದಲ್ಲಿ ನಡೆಸುತ್ತದೆ. ಸತ್ಯದ ದಾರಿಯಲ್ಲಿ ನಡೆಯುವುದೇ ಧರ್ಮ ಆಗಿದೆ. ಅಸತ್ಯ, ಅನ್ಯಾಯ,

ದಬ್ಬಾಳಿಕೆ ಇವೆಲ್ಲವೂ ಅಧರ್ಮಗಳಾಗಿವೆ. ಹಾಗಾಗಿ ಎಲ್ಲರೂ ಸತ್ಕಾರ್ಯಗಳನ್ನು ಮಾಡಿ ಭಗವಂತನ ಕೃಪೆಗೆ ಪಾತ್ರರಾಗಬೇಕು ಎಂದು ತಿಳಿಸಿದರು.

ಯುವಕರು ದುಶ್ಚಟ,ದುರ್ಗುಣಗಳಿಂದ ದೂರ ಇರಬೇಕು. ತಮ್ಮಲ್ಲಿರುವ ಕೌಶಲಗಳಿಂದ ದೇಶಕ್ಕೆ ತಮ್ಮದೇ ಆದ ರೀತಿಯಲ್ಲಿ ಕೊಡುಗೆ ನೀಡಬೇಕು ಎಂದು ಹೇಳಿದರು.

ಶ್ರೀ ಸಿದ್ದಗಂಗಾ ಮಠದ ಹಳೇ ವಿದ್ಯಾರ್ಥಿಗಳ ಹಾಗೂ ಹಿತೈಷಿಗಳ ಸಂಘದ ಜಿಲ್ಲಾಧ್ಯಕ್ಷ ಶಿವಕುಮಾರ ಪಾಟೀಲ ತೇಗಂಪುರ, ಹಾಸ್ಯ ಚಲನಚಿತ್ರ ನಟ ವೈಜಿನಾಥ ಬಿರಾದಾರ, ಅನಿಲ್ ಕುಮಾರ ಪಾಟೀಲ,

ರೇವಣು ಪಾಟೀಲ,ಪ್ರೇಮಕುಮಾರ ಪ್ರಬಾ, ಸಂತೋಷ ಅಮೃತರಾವ್ ಪಾಟೀಲ, ಗಣಪತಿ ಬಿರಾದಾರ, ಸಿದ್ದು ಪಾಟೀಲ, ಸುಭಾಷ ಪಾಟೀಲ, ಜಗನ್ನಾಥ ಬಿರಾದಾರ, ಬಸಯ್ಯ ಸ್ವಾಮಿ, ಪುಂಡಲೀಕ ಬಿರಾದಾರ, ನರಸಿಂಗ ಬಿರಾದಾರ, ದತ್ತಾತ್ರಿ ಪೊಲೀಸ್ ಪಾಟೀಲ ಇದ್ದರು.

# ಶಿವಶರಣ ಹರಳಯ್ಯ ಜಯಂತಿ



• ಮಲ್ಲಮ್ಮ ನುಡಿ ವಾರ್ತೆ ಮುಚಳಂಬ

ನಾವು ನಮ್ಮ ಜೀವನದಲ್ಲಿ ಶಿವಶರಣ ಹರಳಯ್ಯನವರ ತತ್ವಾದರ್ಶಗಳು ಹಾಗೂ ಉಪದೇಶಗಳನ್ನು ಅಳವಡಿಸಿಕೊಳ್ಳಬೇಕು' ಎಂದು ಕರ್ನಾಟಕ ರಾಜ್ಯ ಶಿವಶರಣ ಹರಳಯ್ಯ ಸಮಿತಿಯ ಬಸವಕಲ್ಯಾಣ ತಾಲ್ಲೂಕು ಅಧ್ಯಕ್ಷ ಶಿವಾಜಿ ಕಾಂಬಳೆ ಹೇಳಿದರು

ಹುಲಸೂರು ತಾಲ್ಲೂಕಿನ ಮುಚಳಂಬ ಗ್ರಾಮದಲ್ಲಿ ಕರ್ನಾಟಕ ರಾಜ್ಯ ಶಿವಶರಣ ಹರಳಯ್ಯ ಸಮಿತಿ ವತಿಯಿಂದ ಭಾನುವಾರ 'ಶಿವಶರಣ ಹರಳಯ್ಯ ಜಯಂತಿ' ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಹರಳಯ್ಯ ಸಮಿತಿ ವತಿಯಿಂದ ಇದೇ ಮೊದಲ ಬಾರಿಗೆ ಮುಚಳಂಬನಲ್ಲಿ ಶಿವಶರಣ ಹರಳಯ್ಯ ಜಯಂತಿ ಆಚರಣೆ ಮಾಡಿರುವುದು ತುಂಬಾ ಸಂತೋಷದ ವಿಷಯ. ಮುಂದಿನ ದಿನಗಳಲ್ಲಿ ಸಮುದಾಯದ ಶ್ರೇಯೋಭಿವೃದ್ಧಿಗಾಗಿ ದೊಡ್ಡ ಮಟ್ಟದಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸಬೇಕು' ಎಂದು ಹೇಳಿದರು.

ಕಾರ್ಯಕ್ರಮದ ನೇತೃತ್ವವನ್ನು ಸಮಿತಿಯ ಅಧ್ಯಕ್ಷ ಬಾಲಾಜಿ ಶಿವಾಜಿ ಕಾಂಬಳೆ ಅವರು ವಹಿಸಿದ್ದರು. ಈ ವೇಳೆ ಸಮಿತಿಯ ಸದಸ್ಯರು ಹಾಗೂ ಹಿರಿಯರು ಭಾಗವಹಿಸಿ ಸಮುದಾಯದ ಅಭಿವೃದ್ಧಿಗೆ ಸಂಬಂಧಿಸಿದ ಹಲವು ವಿಷಯಗಳ ಕುರಿತು ಚರ್ಚೆ ನಡೆಸಿದರು.

ನಂತರ ಸಮಿತಿಯ ರಾಜ್ಯಾಧ್ಯಕ್ಷರಾದ ಗೋಪಾಲ್ ಸೂರ್ಯವಂಶಿ, ರಾಜ್ಯ ಪ್ರಚಾರಕ ಸೂರ್ಯಕಾಂತ್, ಬೀದರ್ ಜಿಲ್ಲಾಧ್ಯಕ್ಷರಾದ ಸತ್ತೇವಾನ್ ಕಾಂಬಳೆ ಹಾಗೂ ಮಹಿಳಾ ಮಂಡಳಿಯ ಪದಾಧಿಕಾರಿಗಳು ಮಾತನಾಡಿ, 'ಸಮುದಾಯದ ಮುಖಂಡರು ಸಮುದಾಯದ ಜನರ ಅಭಿವೃದ್ಧಿಗೆ ಶ್ರಮಿಸಲು ಸಲಹೆ ನೀಡಿ ಶುಭಕೋರಿದರು.

ಕಾರ್ಯಕ್ರಮದಲ್ಲಿ ತಾಲ್ಲೂಕು ಉಪಾಧ್ಯಕ್ಷ ಗೌತಮ್ ಜಾಧವ್, ಮುಖಂಡರಾದ ಸಂಜು ಜಾಧವ್, ಮೀನಾ ಜಾಧವ್, ನಿವೃತ್ತ ಮುಖ್ಯಶಿಕ್ಷಕಿ ಅವನಿ ರಿಷಿಕೇಶ್ ಜಾಧವ್,

ಮೆಹಕರ್ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಶೀತಲ್ ಸತ್ತೇವಾನ್ ಕಾಂಬಳೆ, ರವಿದಾಸ್ ಧರ್ಮ ಸಂಘಟನೆಯ ಬೀದರ್ ಜಿಲ್ಲಾಧ್ಯಕ್ಷರಾದ ಜೋತಿರಾವ್ ಕಾಂಬಳೆ, ಸಮಿತಿಯ ಸದಸ್ಯರಾದ ಶಿವಕುಮಾರ್ ಕಾಂಬಳೆ, ದತ್ತು ದೋಣಗಾಪ್ರೆ, ಅಂಕೋಶ್ ಕಾಂಬಳೆ, ಶರಣು ಕಾಂಬಳೆ, ಮಹಾದೇವ್ ಕಾಂಬಳೆ, ಧರ್ಮು ದೋಣಗಾಪ್ರೆ ಸೇರಿದಂತೆ ಅನೇಕರು ಹಾಜರಿದ್ದರು.

# ಭಗವಾನ್ ಮಹಾವೀರ ಜಯಂತಿ



• ಮಲ್ಲಮ್ಮ ನುಡಿ ವಾರ್ತೆ, ಬೀದರ

ಅಪರ ಜಿಲ್ಲಾಧಿಕಾರಿಗಳಾದ ಶಿವಾನಂದ ಬಿ.ಕರಾಳೆ ಅವರು ಸೋಮವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶ್ರೀ ಭಗವಾನ್ ಮಹಾವೀರ ಜಯಂತಿ ಅಂಗವಾಗಿ ಭಗವಾನ್ ಮಹಾವೀರರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಪುಷ್ಪನಮನ ಸಲ್ಲಿಸಿದರು.

ಈ ಸಂದರ್ಭದಲ್ಲಿ ಸಮಾಜದ ಮುಖಂಡರಾದ ನರಸಿಂಹರಾಜ ಟಿಕ್ಕೆ, ಸಂತೋಷ ಹೊನ್ನಕುದುರೆ, ಅಶೋಕಕುಮಾರ ಬೊಗಾರ, ಸತ್ಯವಾನ ಬೋಗಾರ, ಸಭಾಷ ಬೋಗಾರ, ನೇಮಿನಾಥ ಕಾಸರ್, ವೆಂಕಟರಾವ ಬೆಳಕೋಟಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಸಿದ್ರಾಮ ಸಿಂಧೆ ಸೇರಿದಂತೆ ಇತರರು ಉಪಸ್ಥಿತರಿದ್ದರು

# ಆನ್‌ಲೈನ್ ಗೇಮ್ ಚಟ: ಮಕ್ಕಳ ಭವಿಷ್ಯಕ್ಕೆ ವಿನಾಶದ ಹಾದಿ




## ಮೊಬೈಲ್ ಬ್ಯಾನ್‌ಗೆ ಸಾರ್ವಜನಿಕರಿಂದ ಸ್ವಾಗತ ಕಟ್ಟುನಿಟ್ಟಿನ ಕಾನೂನು ಅಗತ್ಯವೆಂದ ಜನರ ಕೂಗು

ಡಿಜಿಟಲ್ ಯುಗದಲ್ಲಿ ತಂತ್ರಜ್ಞಾನ ಮಾನವನ ಜೀವನವನ್ನು ಸುಲಭಗೊಳಿಸಿದರೂ, ಅದರ ಅತಿಯಾದ ಬಳಕೆ ಸಮಾಜದಲ್ಲಿ ಹೊಸಹೊಸ ಸಮಸ್ಯೆಗಳನ್ನು ಹುಟ್ಟಿಸುತ್ತಿದೆ. ವಿಶೇಷವಾಗಿ ಆನ್‌ಲೈನ್ ಗೇಮ್‌ಗಳ ಹೆಚ್ಚುತ್ತಿರುವ ಚಟ ಮಕ್ಕಳ ಭವಿಷ್ಯಕ್ಕೆ ದೊಡ್ಡ ಅಪಾಯವಾಗಿ ಪರಿಣಮಿಸುತ್ತಿದೆ. ಒಂದು ಕಾಲದಲ್ಲಿ ಆಟವಾಡುವುದು ಎಂದರೆ ಮೈದಾನದಲ್ಲಿ ಸ್ನೇಹಿತರ ಜೊತೆ ಓಡಿ ಆಡಿ ದೈಹಿಕ ಚಟುವಟಿಕೆಯಲ್ಲಿ ತೊಡಗುವುದು. ಆದರೆ ಈಗ ಪರಿಸ್ಥಿತಿ ಸಂಪೂರ್ಣ ಬದಲಾಗಿದೆ. ಮಕ್ಕಳು ಮೊಬೈಲ್ ಪರದೆಗೆ ಸೀಮಿತವಾಗಿದ್ದು, ಗಂಟೆಗಟ್ಟಲೆ ಆನ್‌ಲೈನ್ ಗೇಮ್‌ಗಳಲ್ಲಿ ತೊಡಗಿಕೊಂಡಿರುವುದು ಪೋಷಕರಲ್ಲಿ ಆತಂಕ ಹೆಚ್ಚಿಸಿದೆ ಎನ್ನುತ್ತಾರೆ ಪರಿಸರ ಪ್ರೇಮಿಯೊಬ್ಬರು.

ಆನ್‌ಲೈನ್ ಗೇಮ್‌ಗಳು ಆರಂಭದಲ್ಲಿ ಮನರಂಜನೆಗಾಗಿ ಬಂದಿದ್ದರೂ, ಇಂದು ಅವು ಮಕ್ಕಳಿಗೆ ಚಟವಾಗುತ್ತಿವೆ. ಹಲವಾರು ಮಕ್ಕಳು ಓದಿನ ಸಮಯದಲ್ಲಿಯೇ ಗೇಮ್‌ಗಳಲ್ಲಿ ಮುಳುಗಿ, ಶಿಕ್ಷಣದಿಂದ ದೂರವಾಗುತ್ತಿರುವುದು ವಿಷಾದನೀಯ ಸಂಗತಿಯಾಗಿದೆ. ಪೋಷಕರು ತಮ್ಮ ಮಕ್ಕಳ ಭವಿಷ್ಯದ ಬಗ್ಗೆ ದೊಡ್ಡ ದೊಡ್ಡ ಕನಸುಗಳನ್ನು ಕಟ್ಟಿಕೊಂಡಿರುತ್ತಾರೆ. ಮಕ್ಕಳು ಉತ್ತಮ ಶಿಕ್ಷಣ ಪಡೆದು ಸಮಾಜದಲ್ಲಿ ಉನ್ನತ ಮಟ್ಟಕ್ಕೆ ಬೆಳೆಯಬೇಕು ಎಂಬುದು ಪ್ರತಿಯೊಬ್ಬ ಪೋಷಕರ ಆಶಯ. ಆದರೆ ಮಕ್ಕಳು ಶಿಕ್ಷಣ ಕಲಿಯುವ ಹಂತದಲ್ಲಿಯೇ ಆನ್‌ಲೈನ್ ಗೇಮ್ ಚಟಕ್ಕೆ ಬಲಿಯಾಗುತ್ತಿರುವುದು ಪೋಷಕರಿಗೆ ದೊಡ್ಡ ಚಿಂತೆಯಾಗಿದೆ ಎಂದು ಜನರು ಅಲ್ಲಲ್ಲಿ ಮಾತಾಡಿಕೊಳ್ಳುತ್ತಿದ್ದಾರೆ.

ಇತ್ತೀಚಿನ ವರ್ಷಗಳಲ್ಲಿ ಆನ್‌ಲೈನ್ ಗೇಮ್‌ಗಳಿಗೆ ಸಂಬಂಧಿಸಿದ ದುಃಖಕರ ಘಟನೆಗಳು ಹೆಚ್ಚುತ್ತಿರುವುದು ಸಮಾಜದಲ್ಲಿ ಆತಂಕ ಮೂಡಿಸಿದೆ. ಕೆಲ ಮಕ್ಕಳು ಗೇಮ್‌ಗಳ ಅತಿಯಾದ ಪ್ರಭಾವದಿಂದ ಮಾನಸಿಕ ಒತ್ತಡಕ್ಕೆ ಒಳಗಾಗುತ್ತಿರುವುದು ಕಂಡುಬರುತ್ತಿದೆ. ಇದ-ರಿಂದ ಪೋಷಕರು ಮತ್ತು ಶಿಕ್ಷಕರು ಮಕ್ಕಳ ಮೇಲೆ ಹೆಚ್ಚಿನ ಗಮನ ಹರಿಸಬೇಕಾದ ಅಗತ್ಯತೆ ಎದುರಾಗಿದೆ.

ಇಂತಹ ಪರಿಸ್ಥಿತಿಯಲ್ಲಿ ಮೊನ್ನೆ ಸರ್ಕಾರ 18 ವರ್ಷ ವಯಸ್ಸಿನೊಳಗಿನ ವಿದ್ಯಾರ್ಥಿಗಳಿಗೆ ಶಾಲೆ ಹಾಗೂ ಕಾಲೇಜುಗಳಲ್ಲಿ ಮೊಬೈಲ್ ಬಳಕೆಗೆ ನಿಬರ್ಂಧ ಹೇರಿರುವುದು ಸ್ವಾಗತಾರ್ಹ ಕ್ರಮವೆಂದು ಹಲವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಈ ನಿರ್ಧಾರವನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದರೆ ವಿದ್ಯಾರ್ಥಿಗಳ ಓದಿನ ಮೇಲೆ ಗಮನ ಹೆಚ್ಚಲಿದೆ ಎಂಬ ಅಭಿಪ್ರಾಯ ಸಾರ್ವಜನಿಕ ವಲಯದಲ್ಲಿ ಕೇಳಿಬರುತ್ತಿದೆ.

ಕೆಲ ಸಂಘಟನೆಗಳ ಪ್ರಮುಖರ ಅಭಿಪ್ರಾಯದಂತೆ ಮಕ್ಕಳ ಭವಿಷ್ಯವನ್ನು ಉಳಿಸಲು ಇಂತಹ ನಿರ್ಧಾರಗಳು ಅತ್ಯಂತ ಅಗತ್ಯ. ಶಾಲೆ ಮತ್ತು ಕಾಲೇಜುಗಳಲ್ಲಿ ಮೊಬೈಲ್ ಬ್ಯಾನ್ ಮಾಡಿದರೆ ವಿದ್ಯಾರ್ಥಿಗಳು ಓದಿನ ಕಡೆ ಹೆಚ್ಚು ಗಮನ ಹರಿಸಲಿದ್ದಾರೆ. ಜೊತೆಗೆ ಪೋಷಕರೂ ತಮ್ಮ ಮಕ್ಕಳ ಮೇಲೆ ಗಮನ ಹರಿಸಬೇಕು ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಸಾರ್ವಜನಿಕ ವಲಯದಲ್ಲಿಯೂ ಈ ವಿಷಯದ ಕುರಿತು ಚರ್ಚೆಗಳು ಹೆಚ್ಚಾಗಿವೆ. ಕೆಲ ಪೋಷಕರು ಹೇಳುವಂತೆ, ಮಕ್ಕಳು ಮೊಬೈಲ್‌ಗೆ ಅಂಟಿಕೊಂಡಿರುವುದರಿಂದ ಕುಟುಂಬ ಸದಸ್ಯರ ಜೊತೆ ಮಾತನಾಡುವುದೂ ಕಡಿಮೆಯಾಗಿದೆ. ಹೊರಾಂಗಣ ಆಟಗಳನ್ನೂ ಮರೆತುಬಿಟ್ಟಿದ್ದಾರೆ. ಸರ್ಕಾರದ ನಿರ್ಧಾರ ಉತ್ತಮವಾದರೂ, ಅದನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕು ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಪ್ರತಿಪರ ಚಿಂತಕರು ಸಹ ಈ ವಿಷಯದಲ್ಲಿ ಸರ್ಕಾರ ಇನ್ನಷ್ಟು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದ್ದಾರೆ. ಆನ್‌ಲೈನ್ ಗೇಮ್‌ಗಳ ಮೇಲೆ ನಿಯಂತ್ರಣ ತರಬೇಕು. ಮಕ್ಕಳನ್ನು ಗುರಿಯಾಗಿಸಿಕೊಂಡು ತಯಾರಾಗುವ ಕೆಲವು ಗೇಮ್‌ಗಳ ಮೇಲೆ ನಿಯಂತ್ರಣ ಅಗತ್ಯವಾಗಿದೆ. ಪೋಷಕರು, ಶಿಕ್ಷಕರು ಮತ್ತು ಸರ್ಕಾರ ಒಟ್ಟಾಗಿ ಕೆಲಸ ಮಾಡಿದರೆ ಮಾತ್ರ ಈ ಸಮಸ್ಯೆಗೆ ಪರಿಹಾರ ಸಿಗುತ್ತದೆ ಎಂದು ಅಭಿಪ್ರಾಯ ವ್ಯಕ್ತವಾಗಿದೆ.

ಶಿಕ್ಷಕರೂ ಸಹ ಇದೇ ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದಾರೆ. ಮಕ್ಕಳು ಮೊಬೈಲ್ ಬಳಕೆಯಿಂದ ಓದಿನ ಮೇಲೆ ಗಮನ ಕಳೆದುಕೊಳ್ಳುತ್ತಿದ್ದಾರೆ. ಶಾಲೆಗಳಲ್ಲಿ ಮೊಬೈಲ್ ಬ್ಯಾನ್ ಮಾಡಿದರೆ ವಿದ್ಯಾರ್ಥಿಗಳಲ್ಲಿ ಶಿಸ್ತಿನ ಬೆಳವಣಿಗೆಗೆ ಸಹಕಾರಿಯಾಗುತ್ತದೆ ಎಂದು ಕೆಲವು ಶಿಕ್ಷಕರು ತಿಳಿಸಿದ್ದಾರೆ.

ಮಕ್ಕಳ ಭವಿಷ್ಯ ರಾಷ್ಟ್ರದ ಭವಿಷ್ಯವಾಗಿದೆ. ಆದ್ದರಿಂದ ಆನ್‌ಲೈನ್ ಗೇಮ್ ಚಟವನ್ನು ತಡೆಯಲು ಪೋಷಕರು, ಶಿಕ್ಷಕರು ಹಾಗೂ ಸರ್ಕಾರ ಒಟ್ಟಾಗಿ ಕಾರ್ಯನಿರ್ವಹಿಸುವುದು ಅನಿವಾರ್ಯವಾಗಿದೆ. ಮಕ್ಕಳ ಕೈಯಲ್ಲಿ ಮೊಬೈಲ್ ನೀಡುವ ಮೊದಲು ಅವರ ಭವಿಷ್ಯವನ್ನು ನೆನಪಿಸಿಕೊಳ್ಳುವುದು ಪ್ರತಿಯೊಬ್ಬ ಪೋಷಕರ ಕರ್ತವ್ಯವಾಗಿದೆ.

ಇಂದು ಮನರಂಜನೆ ಎನ್ನುವ ಹೆಸರಿನಲ್ಲಿ ಆರಂಭವಾಗುತ್ತಿರುವ ಈ ಆನ್‌ಲೈನ್ ಗೇಮ್ ಚಟ ನಾಳೆ ಮಕ್ಕಳ ಭವಿಷ್ಯಕ್ಕೆ ಮಾರಕವಾಗದಂತೆ ಈಗಲೇ ಎಚ್ಚರಗೊಳ್ಳಬೇಕಾಗಿದೆ. ಸರ್ಕಾರದ ಕ್ರಮಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವುದರ ಜೊತೆಗೆ ಸಮಾಜವೂ ಜಾಗೃತಿಯಾಗಬೇಕು ಎಂಬುದು ಸಾರ್ವಜನಿಕರ ಒಕ್ಕೊರಲಿನ ಕೂಗಾಗಿದೆ.


ಚಂದ್ರಕಾಂತ ಹಳ್ಳಿಖೇಡಕರ್

## ಕುಡಿತಿನಿಯಲ್ಲಿ 1200ನೇ ದಿನಕ್ಕೆ ಕಾಲಿಟ್ಟ ಭೂ-ಸಂತ್ರಸ್ಥರ ಹೋರಾಟ

ಮಲ್ಲಮ್ಮ ನುಡಿ ವಾರ್ತೆ ಕುರುಗೋಡು

ಸಮೀಪದ ಕುಡುತಿನಿಯಲ್ಲಿ ನಡೆಯುವ ಭೂ-ಸಂತ್ರಸ್ಥರ ಅನಿರ್ಧಿಷ್ಟ ಹೋರಾಟ ಸೋಮವಾರಕ್ಕೆ 1200ನೇ ದಿನಕ್ಕೆ ಕಾಲಿಟ್ಟಿದೆ. ಇನ್ನಾದರೂ ನಮ್ಮನ್ನಾಳುವ ಸರ್ಕಾರವು ರೈತರ ನ್ಯಾಯಯೋಚಿತ ಬೇಡಿಕೆಗಳನ್ನು ಈಡೇರಿಸಿ ರೈತರಿಗೆ ಆಸರೆಯಾಗಬೇಕೆಂದು ಒತ್ತಾಯಿಸಿದ್ದಾರೆ. ಮಾತ್ರವಲ್ಲದೆ ರಾಜ್ಯದ ಮುಖ್ಯಮಂತ್ರಿಗಳು, ಮಂತ್ರಿಗಳು, ಸಂಸದರು, ಶಾಸಕರು ಕೂಡಲೇ ರೈತರ ಸಭೆ ಕರೆದು ಅವರ ಬೇಡಿಕೆಗಳನ್ನು ಕೂಡಲೇ ಈಡೇರಿಸಬೇಕೆಂದು ಬಿಗಿಪಟ್ಟು ಹಿಡಿದಿದ್ದಾರೆ. ಈ ಹೋರಾಟಕ್ಕೆ ಪ್ರಾಂತರೈತಸಂಘ, ಸಿಐಟಿಯುಸಂಘಟನೆ, ಕನ್ನಡಪರಸಂಘಟನೆಗಳು, ದಲಿತಪರಸಂಘಟನೆಗಳು ವಿವಿದ ಕಾರ್ಮಿಕಮುಖಂಡರು, ರೈತರ ಹೋರಾಟಕ್ಕೆ ಬೆಂಬಲಸೂಚಿಸಿದ್ದಾರೆ. ಈ ಅನಿರ್ಧಿಷ್ಟಾವಧಿ ದರಿಣಿಯಲ್ಲಿ ಕುಡುತಿನಿ, ವೇಣಿವೀರಾಪುರ, ಸಿದ್ದಮ್ಮನಹಳ್ಳಿ, ತಿಮ್ಮಲಾಪುರ, ರ್ರಂಗಳಿಗಿ, ಕೊಳಗಲ್ಲು, ಹರಗಿನಡೋಣಿ ಒಟ್ಟು 7 ಗ್ರಾಮಗಳ ರೈತರು ದರಿಣಿಯಲ್ಲಿ ಭಾಗವಹಿಸಿದ್ದರು.





ಹುಣಸಗಿ : ಸಮೀಪ ಕೊಡೇಕಲ್ ಗ್ರಾಮದ ಪ. ಪೂ. ಶ್ರೀ ಶ್ರೀ ವೃಷಬೆಂದ್ರಅಪ್ಪನವರು ಬಸವ ಪೀಠಧಿಪತಿಗಳು ದಾಸೋಹ ಮಹಾಮನೆ ಕೊಡೇಕಲ್ ಶ್ರೀ ಕಲ್ಲಪ್ಪ ಜಂಜಿನಗಡ್ಡಿ ಉಪತಹಶೀಲದಾರರು ನಾಡ ಕಚೇರಿ ಕೊಡೇಕಲ್ ಅವರಿಂದ ನಮ್ಮ ಮಲ್ಲಮ್ಮ ನುಡಿ ಯುಗಾದಿ ವಿಶೇಷ ಸಂಚಿಕೆ ಬಿಡುಗಡೆ ಮಾಡಲಾಯಿತು ಈ ಸಂದರ್ಭದಲ್ಲಿ ಪ್ರಾಚಾರ್ಯರು ಸೋಮಶೇಖರ ಪಂಚಗಲ್ ಹಾಗೂ ಮಲ್ಲಮ್ಮ ನುಡಿ ಹುಣಸಗಿ ತಾಲೂಕು ವರದಿಗಾರರು ರವಿಕುಮಾರ ಬಂಟನೂರು ಉಪಸ್ಥಿತರಿದ್ದರು.

(ಮಲ್ಲಮ್ಮ ನುಡಿ ಚಿತ್ರ)

## ವಿಧಾನಸಭಾ ಕ್ಷೇತ್ರದಾದ್ಯಂತ ಸ್ವಚ್ಛತಾ ಕಾರ್ಯಕ್ಕೆ ಚಾಲನೆ ಆರ್. ವಿ. ದೇಶಪಾಂಡೆ.

ಮಲ್ಲಮ್ಮ ನುಡಿ ವಾರ್ತೆ ಕಾರವಾರ

ಹಳಿಯಾಳ ವಿಧಾನ ಸಭಾ ಕ್ಷೇತ್ರದಾದ್ಯಂತ ಮಾರ್ಚ್ 30 ರಿಂದ ಏಪ್ರಿಲ್ 1 ರ ವರೆಗೆ ನಿರಂತರವಾಗಿ 3 ದಿನಗಳ ಕಾಲ ಸಂಪೂರ್ಣ ಸ್ವಚ್ಛತಾ ಕಾರ್ಯ ಆಯೋಜಿಸುವ ಮೂಲಕ ದೇಶದಲ್ಲೇ ವಿನೂತನ ಕಾರ್ಯಕ್ಕೆ ಚಾಲನೆ ನೀಡಲಾಗಿದೆ ಎಂದು ಶಾಸಕ ಆರ್.ವಿ.ದೇಶಪಾಂಡೆ ಹೇಳಿದರು. ಅವರು ಸೋಮವಾರ ಹಳಿಯಾಳ ದಲ್ಲಿ ಸ್ವಚ್ಛತಾ ಅಭಿಯಾನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರು ಹಾಕಿಕೊಟ್ಟ ಸ್ವಚ್ಛತೆಯ ಹಾದಿಯಲ್ಲಿ ನಾವು ಸಾಗಬೇಕು. ಸ್ವಚ್ಛತೆಯ ಕೆಲಸಕ್ಕೆ ಪೂರ್ಣವಿರಾಮ ಇರಬಾರದು. ಸಾರ್ವಜನಿಕರ ಸಹಕಾರದೊಂದಿಗೆ ಪ್ರತಿ ಹಳ್ಳಿ, ಪಟ್ಟಣ, ಶೌಚಾಲಯ ಹಾಗೂ ಉದ್ಯಾನವನಗಳು ಸ್ವಚ್ಛವಾಗಿರಬೇಕು ಎಂದರು. ಹಳಿಯಾಳ ವಿಧಾನ ಸಭಾ ಕ್ಷೇತ್ರದ ಹಳಿಯಾಳ ದಾಂಡೇಲಿ, ಜೋಯಿಡಾ ತಾಲೂಕುಗಳ ನಗರ, ಗ್ರಾಮ ಮತ್ತು ಪಟ್ಟಣ ಪ್ರದೇಶಗಳಲ್ಲಿ ಸಂಪೂರ್ಣ ಸ್ವಚ್ಛತಾ ಕಾರ್ಯ ನಡೆಯಲಿದ್ದು, ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳ ಸಹಕಾರದೊಂದಿಗೆ ಈ ಸ್ವಚ್ಛತಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದರು.

## ಕೊಟ್ಟೂರುಸ್ವಾಮಿ ಶಾಖಾಮಠದಲ್ಲಿ ಶಿವಾನುಭವಗೋಷ್ಟಿ ಕಾರ್ಯಕ್ರಮದ ಪೂರ್ವ ಸಿದ್ದತಾಸಭೆ



ಮಲ್ಲಮ್ಮ ನುಡಿ ವಾರ್ತೆ ಕುರುಗೋಡು

ಪಟ್ಟಣದ ಬಳ್ಳಾರಿರಸ್ತೆಯಲ್ಲಿರುವ ಕೊಟ್ಟೂರುಸ್ವಾಮಿ ಶಾಖಾಮಠದಲ್ಲಿ ಪ್ರತಿಹುಣ್ಣಿಮೆಯ ದಿನದಂದು ನಡೆಯುವ ಶಿವಾನುಭವ ಗೋಷ್ಟಿಯಲ್ಲಿ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಗೋಷ್ಟಿಯನ್ನು ಯಶಸ್ವಿಗೊಳಿಸಬೇಕೆಂದು ಕೊಟ್ಟೂರುಶಾಖಾಮಠದ ಪೀಠಾಧಿಪತಿ ಶ್ರೀನಿರಂಜನಪ್ರಭುದೇವರು ಭಕ್ತರಲ್ಲಿ ಮನವಿಮಾಡಿದರು.

ಅವರು ಪಟ್ಟಣದ ಬಳ್ಳಾರಿರಸ್ತೆಯಲ್ಲಿ ಕೊಟ್ಟೂರುಸ್ವಾಮಿ ಶಾಖಾಮಠದಲ್ಲಿ ಹಮ್ಮಿಕೊಳ್ಳಲಾಗಿದ್ದ ಶಿವಾನುಭವಗೋಷ್ಟಿಯಲ್ಲಿ ಅಧ್ಯಕ್ಷತೆವಹಿಸಿ ಮಾತನಾಡಿದ ಅವರು, ಶಿವಾನುಭವಗೋಷ್ಟಿಯನ್ನು ಪ್ರತಿಹುಣ್ಣಿಮೆದಿನದಂದು ಶ್ರೀಮಠದಲ್ಲಿ ಹಮ್ಮಿಕೊಳ್ಳಲಾಗುವುದು. ಈ ಕಾರ್ಯಕ್ರಮಕ್ಕೆ ನೀವುಬನ್ನಿ, ಇತರೆ ಭಕ್ತರನ್ನು ಕರೆತನ್ನಿ ಎಂದು ಭಕ್ತರಿಗೆ ಸಲಹೆ ನೀಡಿದರು. ಶಿವಾನುಭಗೋಷ್ಟಿಯಿಂದ ನೆರೆದ ಭಕ್ತರಿಗೆ ವಿಚಾರವಿನಿಮಯ ಸೇರಿದಂತೆ ಇಂದಿನ ವಿದ್ಯಾಮಾನದ ಬಗ್ಗೆ ಚರ್ಚೆಯಾಗಲಿದೆ. ಇಂಥಹ ಗೋಷ್ಟಿಯಲ್ಲಿ ಭಾಗವಹಿಸುವದರಿಂದ ಪ್ರಪಂಚ ಜ್ಞಾನ ಹೆಚ್ಚಿಸುತ್ತಿದೆ. ಆದ್ದರಿಂದ ಈ ಗೋಷ್ಟಿಯು ಪ್ರತಿಹುಣ್ಣಿಮೆದಿನ ನಡೆಯುತ್ತಿದೆ ಎಂದು ತಿಳಿಸಿದರು.

ಪೂರ್ವಸಿದ್ದತಾಸಭೆಯಲ್ಲಿ ಅಕ್ಕಮಹಾದೇವಿಮಹಿಳಾಬಳಗದ ಮಹಿಳೆಯರು, ನೇಕಾರಒಕ್ಕೂಟದ ಮಹಿಳೆಯರು, ಪಟ್ಟಣದ ಎಲ್ಲಾ ಸಮಾಜದ ಶ್ರೀಮಠದ ಭಕ್ತರು, ಭಾಗವಹಿಸಿದ್ದರು.

## ಧರ್ಮಸ್ಥಳ: ಮನೆ ಹಸ್ತಾಂತರ

• ಮಲ್ಲಮ್ಮ ನುಡಿ ವಾರ್ತೆ, ಬಸವನಬಾಗೇವಾಡಿ

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಭಿವೃದ್ಧಿ ಯೋಜನೆ ಬಿ ಸಿ ಟ್ರಸ್ಟ್ (ರಿ ವತಿಯಿಂದ ತಾಲೂಕಿನ ಹೂವಿನ ಹಿಪ್ಪರಗಿ ವಲಯದ ಬ್ಯಾಕೋಡ ಕಾರ್ಯಕ್ಷೇತ್ರದಲ್ಲಿ ಜ್ಞಾನವಿಕಾಸ ಕಾರ್ಯಕ್ರಮದಡಿಯಲ್ಲಿ ವಾತ್ಸಲ್ಯ ಸದಸ್ಯರಾದ ಅಮೀನ್ ಹುಸೈನ್ ಮಾಗಿ ರವರಿಗೆ ವಾತ್ಸಲ್ಯ ಮನೆ ಹಸ್ತಾಂತರ ಮಾಡಲಾಯಿತು. ಜಿಲ್ಲಾ ನಿರ್ದೇಶಕರಾದ ಮೋಹನ ನಾಯಕ ದೀಪ ಪ್ರಜ್ವಲನೆ ಮಾಡಿ ಮನೆ ಹಸ್ತಾಂತರ ಕಾರ್ಯಕ್ರಮ ನೆರವೇರಿಸಿ ಶುಭ ಹಾರೈಕೆ ಮಾಡಿದರು. ಈ ಸಂದರ್ಭದಲ್ಲಿ ಮತ್ತು ಜ್ಞಾನ ವಿಕಾಸಾದ ಅಡಿಯಲ್ಲಿ ನಡೆಯುವ ಕಾರ್ಯಕ್ರಮಗಳ ಬಗ್ಗೆ ಸವಿಸ್ತಾರವಾಗಿ ಮಾಹಿತಿಯನ್ನು ನೀಡಿದರು. ಜಿಲ್ಲಾ ನಿರ್ದೇಶಕ ಮೋಹನ ನಾಯಕ್ ಪ್ರಾಸ್ತಾವಿಕವಾಗಿ ಮಾತನಾಡಿ, ಮಾಶಾಸನ, ಕೆರೆ ಹಾಗೂ ಮನೆ ಹಸ್ತಾಂತರ ಕುರಿತು ಮಾತನಾಡಿದರು. ಜೆಡಿಪಿ ಮಹಮ್ಮದಸಾಬ್ ಮಾತನಾಡಿ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಯಾವುದೇ ಒಂದು ರೂಪಾಯಿ ಹಣ ತೆಗೆದು ಕೊಳ್ಳಲಾರದೇ, ಮನೆ ಮಂಜೂರಾತಿ ಮಾಡಿ ಕಟ್ಟಿಸಿ ಹಸ್ತಾಂತರ ಮಾಡುತ್ತಾರೆ. ಧರ್ಮಸ್ಥಳ ಸಂಸ್ಥೆಯ ಪೂಜ್ಯರು ಅಮ್ಮನವರ ನಡೆದಾಡುವ ದೇವರು. ಕಣ್ಣಿಗೆ ಕಾಣುವ ದೇವರು ಎಂದರು. ಪದೇಪದೇ ಹೇಳುತ್ತಾ ನಮ್ಮ ಮುದ್ದಾಪುರ ಗ್ರಾಮದಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿಯಿಂದ ಮನೆ ಆಗಿದ್ದು ನಮ್ಮ ಗ್ರಾಮಕ್ಕೆ ಖುಷಿ ಕೊಟ್ಟಿದೆ ಎಂದರು. ಈ ಸಂದರ್ಭದಲ್ಲಿ ತಾಲೂಕು ಯೋಜನಾ ಅಧಿಕಾರಿ ಪ್ರಸನ್ನ, ರಾಜು ಪಾಟೀಲ, ಮಲ್ಲನಗೌಡ ಬಿರಾದಾರ, ಸಂಗೀತಾ, ಶ್ರೀದೇವಿ ಹಾಜರಿದ್ದರು.



ಬಸವನಬಾಗೇವಾಡಿ : ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಸೋಮವಾರ ಮಹಾವೀರ ಜಯಂತಿ ಆಚರಿಸಲಾಯಿತು. ಪ್ರಾಂ ಡಾ.ಪಿ ಬಿ ಹೊಸಮನಿ ಸೇರಿದಂತೆ ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

## ವಿಠಲಾಪುರ ಗ್ರಾಮದಲ್ಲಿ 'ಎಂಥಮಹಿಮನೀತ ಗೂಳ್ಯದ ಗಾದಿಲಿಂಗಪ್ಪತಾತ' ನಾಟಕ



ಮಲ್ಲಮ್ಮ ನುಡಿ ವಾರ್ತೆ ಕುರುಗೋಡು

ಇಂಧಿನ ಆಧುನಿಕ ಯುಗದಲ್ಲಿ ಮೊಬೈಲ್, ಟಿವಿ, ಧಾರಾವಾಹಿಗಳ ವ್ಯಾಮೋಹದಿಂದ ಬಯಲುನಾಟಕಗಳು ಕಣ್ಮರೆಯಾಗುತ್ತಿವೆ ಎಂದು ರುಷಿಕುಮಾರಸ್ವಾಮಿಯವರು ವಿಷಾದವ್ಯಕ್ತಪಡಿಸಿದರು.

ಅವರು ಸಮೀಪದ ವಿಠಲಾಪುರ ಗ್ರಾಮದಲ್ಲಿ ಶ್ರೀರೇವಣಸಿದ್ದೇಶ್ವರಸ್ವಾಮಿಯವರ 15ನೇ ವರ್ಷದ ರಥೋತ್ಸವದ ಪ್ರಯುಕ್ತ ಶ್ರೀಹಂಪಿವಿರುಪಾಕ್ಷ ಬಯಲಾಟ ನಾಟಕಪ್ರೋತ್ಸಾಹ ಟ್ರಸ್ಟ್ ವತಿಯಿಂದ 'ಎಂಥಮಹಮನೀತ ಗೂಳ್ಯದಗಾದಿಲಿಂಗಪ್ಪತಾತ' ಎಂಬ ಶರಣಮಹಿಮರ ಭಕ್ತಿಪ್ರಧಾನ ನಾಟಕದಲ್ಲಿ ದಿವ್ಯಸಾನಿಧ್ಯವಹಿಸಿ ಮಾತನಾಡಿದ ಅವರು, ಕಲೆಗೆ ಪ್ರತಿಯೊಬ್ಬನಾಗಕರಿಕರು ಪ್ರೋತ್ಸಾಹ ನೀಡಬೇಕೆಂದು ನುಡಿದರು.

ಬಿಜೆಪಿಪಕ್ಷದ ಒಬಿಸಿ ವಿಭಾಗದ ಜಿಲ್ಲಾಧ್ಯಕ್ಷ ಎಂ, ತಿರುಮಲ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಹಳ್ಳಿಗಳಲ್ಲಿ ನಡೆಯುವ ಜಾತ್ರೆ, ಉತ್ಸವ ಸೇರಿದಂತೆ ಇತರೆ ಕಾರ್ಯಕ್ರಮಗಳಲ್ಲಿ ಸಾಂಸ್ಕೃತಿಕಕಾರ್ಯಕ್ರಮಗಳು ನಡೆಯುವುದು ಸಹಜ. ಆದರೆ ಇಂತಹ ಸಂದರ್ಭದಲ್ಲಿ ನಮ್ಮ ಊರಿನ ಕಲಾವಿದ ಹಾಗು ಟ್ರಸ್ಟ್ ಅಧ್ಯಕ್ಷ ಜಿಕೆ.ತಿಪ್ಪೇಸ್ವಾಮಿಯವರು ನಾಟಕಗಳಉಳಿವಿಗೆಶ್ರಮಿಸುತ್ತಿರುವುದು ನಿಜಕ್ಕೂ ಹೆಮ್ಮೆಯಸಂಗತಿ. ಇಂತಹ ಕಲಾವಿದರನ್ನು ಎಲ್ಲರೂ ಬೆಳೆಸಿ, ಪ್ರೋತ್ಸಾಹಿಸಿರಿ ಎಂದು ನುಡಿದರು. ಅತಿಥಿಗಳಾದ ಕೋರಿತಿಮ್ಮಾರೆಡ್ಡಿ, ನಾಟಕದ ರಚನೆ ಮತ್ತು ನಿರ್ದೇಶಕ ಕೆ.ಜಗದೀಶ ಅವರು ಮಾತನಾಡಿ, ಗ್ರಾಮೀಣ ಪ್ರದೇಶಗಳಲ್ಲಿ ಅದೆಷ್ಟೋ ಬಯಲಾಟ, ನಾಟಕ ಕಲಾವಿದರು ನಿಶ್ವಾರ್ಥವಾಗಿ ತಮ್ಮ ಅಭಿನಯವನ್ನು ಪ್ರದರ್ಶಿಸುತ್ತಾರೆ. ಅಂಥಹ ಕಲಾವಿದರೆ ಸರ್ಕಾರ ಮಾಸಾಷನ, ಉಚಿತನಿವೇಶನ ಸೇರಿದಂತೆ ಇತರೆ ಮೂಲಭೂತ ಸೌಕರ್ಯಗಳನ್ನು ಒದಗಿಸಿ ಅವರ ಜೀವನಕ್ಕೆ ಆಸರೆಯಾಗಬೇಕೆಂದು ಒತ್ತಾಯಿಸಿದರು.

ಶ್ರೀಹಂಪಿ ವಿರುಪಾಕ್ಷಬಯಲಾಟ ನಾಟಕಪ್ರೋತ್ಸಾಹ ಟ್ರಸ್ಟ್ ಅಧ್ಯಕ್ಷ ಜಿಕೆ. ತಿಪ್ಪೇಸ್ವಾಮಿಯವರು ಪ್ರಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಮುಖಂಡ ಬನ್ನಿರಾಜ, ಬಿ.ಗವಿಸಿದ್ದಪ್ಪ, ಹೊಸಗೇರಪ್ಪ, ತಿಪ್ಪಣ್ಣಬನ್ನಿಹಟ್ಟಿ, ಡಿ.ಗಂಗಾಧರ, ಡಿ.ಹಿರೇಹಾಳುತಿಪ್ಪೇಸ್ವಾಮಿ, ಸರಪಂಚ್‌ಬೋರ್ ಮಿಲ್‌ಸ್ವಾಮಿ, ಡಿಸ್‌ಸಿದ್ದಪ್ಪ, ಕಾರಪುಡಿಸ್ವಾಮಿ, ಕಮಲಾಂಕರ, ಚಿಕ್ಕಂತಾಪುರಲೋಕೇಶ, ರಾಜಶೇಖರಗೌಡ, ಡಿ.ದಮ್ಮೂರಪ್ಪ, ಜಿ.ವೆಂಕಟೇಶ, ಡಿ.ವಾಸುದೇವ, ಗುರುಮೂರ್ತಿ, ಹೊನ್ನೂರುಸ್ವಾಮಿ, ಅಂತಾಪುರಬುಶ್ಯಪ್ಪನವರಮಲೆಪ್ಪ, ಎ.ಮರಿಯಪ್ಪ, ಟ್ರಸ್ಟ ಸದಸ್ಯ ಎಂ.ಉಮಾಶಂಕರ, ಕೆ.ಹೇಮಣ್ಣ, ಸೇರಿದಂತೆ ಇತರೆ ಊರಿನ ಮುಖಂಡರು ಇದ್ದರು. ಕೊನೆಯಲ್ಲಿ 'ಎಂತಮಹಮನೀತ ಗೂಳ್ಯದಗಾದಿಲಿಂಗಪ್ಪತಾತ' ಎಂಬ ಭಕ್ತಿಪ್ರಧಾನ ನಾಟಕವನ್ನು ನೋಡಿ ಪ್ರೇಕ್ಷಕರು ಕಣ್ತುಂಬಿಕೊಂಡರು.

## ಆಹಾರ ಸುರಕ್ಷತಾ ತರಬೇತಿ

ಮಲ್ಲಮ್ಮ ನುಡಿ ವಾರ್ತೆ ಕಾರವಾರ

ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಹಾಗೂ ಆಹಾರ ಸುರಕ್ಷತಾ ತರಬೇತಿ ಪ್ರಮಾಣ ಪತ್ರ ಕೇಂದ್ರದ ವತಿಯಿಂದ ಗೋಕರ್ಣದ ಆಹಾರ ವಹಿವಾಟುದಾರರಿಗೆ ಮೊದಲ ಹಂತದ ಒಂದು ದಿನದ ಆಹಾರ ಸುರಕ್ಷತಾ ತರಬೇತಿ ಮತ್ತು ಪ್ರಮಾಣಪತ್ರ ಕಾರ್ಯಕ್ರಮವು ಗೋಕರ್ಣದ ವೀರಶೈವ ಮಠ ಸಭಾಭವನದಲ್ಲಿ ಶನಿವಾರ ನಡೆಯಿತು.

ಗೋಕರ್ಣ ಪಂಚಾಯತ ಅಭಿವೃದ್ಧಿ ಅಧಿಕಾರಿ ವ್ಹಿ.ಎ ಪಟಗಾರ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ ಸಮಾಜದಲ್ಲಿ ಆರೋಗ್ಯ ಹಾಗೂ ಸ್ವಚ್ಛತೆಗಳನ್ನು ತಾವು ಹೆಚ್ಚಿನ ರೀತಿಯಲ್ಲಿ ಅಳವಡಿಸಿಕೊಳ್ಳಲು ಸೂಚಿಸಿದರು. ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ದಿನೇಶ ನಾಯ್ಕ ಮಾತನಾಡಿ, ಆಹಾರೋದ್ಯಮಿಗಳಿಗೆ ಆಹಾರದ ಗುಣಮಟ್ಟದ ಜೊತೆ ಶುಚಿತ್ವ ಹಾಗೂ ಪರಿಸರ ನೈರ್ಮಲ್ಯತೆ ಬಗ್ಗೆ ಹೆಚ್ಚಿನ ನಿಗಾ ವಹಿಸುವಂತೆ ಹಾಗೂ ಈ ತರಬೇತಿ ಕಾರ್ಯಕ್ರಮದ ಮಹತ್ವವನ್ನು ತಾಲೂಕಿನ ಎಲ್ಲ ಆಹಾರ ವಹಿವಾಟುದಾರರು ತಮ್ಮಲ್ಲಿ ಅಳವಡಿಸಿಕೊಂಡು ಕಾರ್ಯ ನಿರ್ವಹಿಸುವಂತೆ ಸಲಹೆ ನೀಡಿದರು.

## ಸಮಗ್ರ ಅಭಿವೃದ್ಧಿಗೆ ಬದ್ಧ: ಶಾಸಕ ಪ್ರಭು ಚವ್ಹಾಣ

• ಮಲ್ಲಮ್ಮ ನುಡಿ ವಾರ್ತೆ ಕಮಲನಗರ



ತಾಲ್ಲೂಕಿನ ಮುಧೋಳ(ಬಿ) ಗ್ರಾಮದಲ್ಲಿ ನಡೆದ ಮಹಾದೇವ ಮಂದಿರದ ಜಾತ್ರಾಮಹೋತ್ಸವದಲ್ಲಿ ಮಾಜಿ ಸಚಿವರು ಹಾಗೂ ಔರಾದ(ಬಿ) ಕ್ಷೇತ್ರದ ಶಾಸಕರಾದ ಪ್ರಭು ಬಿ. ಚವ್ಹಾಣ ಅವರು ಮಾ.29 ರಂದು ಭಾಗವಹಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಮಹಾದೇವ ಜಾತ್ರೆ ನಮ್ಮ ಸಾಂಸ್ಕೃತಿಕ ಪರಂಪರೆಯ ಪ್ರತೀಕವಾಗಿದ್ದು, ಗ್ರಾಮೀಣ ಪ್ರದೇಶದ ಜನರಲ್ಲಿ ಭಕ್ತಿ, ಏಕತೆ ಮತ್ತು ಸಂಸ್ಕೃತಿ ಬೆಳೆಸುವಲ್ಲಿ ಮಹತ್ವದ ಪಾತ್ರವಹಿಸುತ್ತದೆ. ಇಂತಹ ಜಾತ್ರೆಗಳು ಸಮಾಜದ ಎಲ್ಲ ವರ್ಗದ ಜನರನ್ನು ಒಗ್ಗೂಡಿಸುವ ಪವಿತ್ರ ವೇದಿಕೆಗಳಾಗಿವೆ ಎಂದು ಅವರು ತಿಳಿಸಿದರು.

ಮಹಾದೇವನ ಮಹಿಮೆ ಅಪಾರವಾಗಿದ್ದು, ಭಕ್ತರ ಕಷ್ಟಗಳನ್ನು ಪರಿಹರಿಸುವ ಕರುಣಾಮಯ ದೇವರು. ಒಂದು ಬಿಲ್ವಪತ್ರದಿಂದಲೇ ತೃಪ್ತಿಗೊಳ್ಳುವ ಭೋಳೇನಾಥನು ಭಕ್ತರ ಪ್ರಾರ್ಥನೆಗೆ ಸದಾ ಸ್ಪಂದಿಸುತ್ತಾನೆ. ಸತ್ಯ, ಧರ್ಮ ಮತ್ತು ಶಾಂತಿಯ ಮಾರ್ಗದಲ್ಲಿ ನಡೆಯುವವರಿಗೆ ಮಹಾದೇವನು ಸದಾ ಆಶೀರ್ವಾದ ನೀಡುತ್ತಾನೆ. ಮಹಾದೇವನ ಆರಾಧನೆಯಿಂದ ಮನಸ್ಸಿಗೆ ಶಾಂತಿ ಹಾಗೂ ಜೀವನದಲ್ಲಿ ಧೈರ್ಯ ಸಿಗುತ್ತದೆ ಎಂದು ಅವರು ಹೇಳಿದರು.

ಮುಧೋಳ(ಬಿ) ಗ್ರಾಮದ ಗ್ರಾಮಸ್ಥರು ಕಲೆ, ಸಂಸ್ಕೃತಿ ಮತ್ತು ಪರಂಪರೆಯ ಬಗ್ಗೆ ಅಪಾರ ಕಾಳಜಿ ಹೊಂದಿದ್ದು, ಜಾತ್ರೆಯನ್ನು ಅಚ್ಚುಕಟ್ಟಾಗಿ ಹಾಗೂ ವೈಭವದಿಂದ ನಡೆಸುತ್ತಿರುವುದು ಸಂತೋಷದ ವಿಚಾರವಾಗಿದೆ. ನಾನು ಕೂಡ 17 ವರ್ಷಗಳಿಂದ ನಿರಂತರವಾಗಿ ತಪ್ಪದೇ ಭಾಗವಹಿಸುತ್ತಿದ್ದೇನೆ. ಗ್ರಾಮಸ್ಥರು ನಮ್ಮ ಸನಾತನ ಸಂಪ್ರದಾಯವನ್ನು ಮುಂದುವರೆಸಿಕೊಂಡು ಹೋಗುತ್ತಿರುವುದು ನಿಜಕ್ಕೂ ಮಾದರಿಯಾಗಿದೆ ಎಂದು ಶ್ಲಾಘನೆ ವ್ಯಕ್ತಪಡಿಸಿದರು.

ಮುಧೋಳ(ಬಿ) ಗ್ರಾಮದ ಜನತೆ ನನಗೆ ಅಪಾರ ಪ್ರೀತಿ ನೀಡಿದ್ದಾರೆ. ನನಗೂ ಈ ಗ್ರಾಮದ ಮೇಲೆ ಬಹಳಷ್ಟು ಕಾಳಜಿಯಿದೆ. ಆದ್ದರಿಂದಲೇ ಗ್ರಾಮದ ಅಭಿವೃದ್ಧಿಗಾಗಿ ಸಾಕಷ್ಟು ಕೆಲಸಗಳನ್ನು ಮಾಡಿದ್ದೇನೆ. ಗ್ರಾಮಸ್ಥರು ಹೇಳಿದ ಎಲ್ಲ ಕೆಲಸಗಳನ್ನು ಆದ್ಯತೆಯಂತೆ ಮಾಡುತ್ತಿದ್ದೇನೆ. ಗ್ರಾಮಕ್ಕೆ ಕೋಟ್ಯಂತರ ಅನುದಾನ ನೀಡಲಾಗಿದೆ. ಮಂದಿರ ಜೀರ್ಣೋದ್ಧಾರ, ಸಮುದಾಯ ಭವನ ನಿರ್ಮಾಣದಿಂದ ಗ್ರಾಮಸ್ಥರಿಗೆ ವಿವಾಹ ಸೇರಿದಂತೆ ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಕ್ರಮಗಳಿಗೆ ಅನುಕೂಲವಾಗಿದೆ. ವಿದ್ಯುತ್ ಉಪ ಕೇಂದ್ರ, ಡಿವೈಡರ್ ಸಹಿತ ಉತ್ತಮ ರಸ್ತೆ, ಶಾಲೆ, ಅಂಗನವಾಡಿ, ಭವ್ಯ ಪಂಚಾಯತ್ ಕಟ್ಟಡ ಸೇರಿದಂತೆ ಹತ್ತುಹಲವು ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದೇನೆ. ಕೆರೆಯ ಅಭಿವೃದ್ಧಿಗೂ ಅನುದಾನ ಒದಗಿಸಿದ್ದು, ಮುಂದಿನ ದಿನಗಳಲ್ಲಿ ಗ್ರಾಮಸ್ಥರ ಎಲ್ಲ ಬೇಡಿಕೆಗಳನ್ನು ಹಂತ ಹಂತವಾಗಿ ಈಡೇರಿಸಲಾಗುವುದು ಎಂದು ಭರವಸೆ ನೀಡಿದರು.

ಇದಕ್ಕೂ ಮುನ್ನ ಅವರು ದೇವರ ದರ್ಶನ ಪಡೆದು, ಕ್ಷೇತ್ರದ ಜನತೆಯ ಸುಖ, ಶಾಂತಿ, ಸಮೃದ್ಧಿಗಾಗಿ ಪಾರ್ಥನೆ ಸಲ್ಲಿಸಿದರು. ಮುಧೋಳ(ಬಿ) ಮಠದ ಪೂಜ್ಯ ಡಾ.ವೈಜಿನಾಥ ಶಿವಲಿಂಗ ಶಿವಾಚಾರ್ಯರು ದಿವ್ಯ ಸಾನಿಧ್ಯ ವಹಿಸಿದ್ದರು. ಹೆಡಗಾಪೂರ ಮಠದ ಪೂಜ್ಯ ದಾರುಕಲಿಂಗ ಶಿವಾಚಾರ್ಯರು, ಮುಖಂಡರಾದ ಮೀನಾಕ್ಷಿ ಸಂಗ್ರಾಮ, ಅಮೃತರಾವ ವಟಗೆ, ಗಜಾನಂದ ವಟಗೆ, ಧನರಾಜ ಗುಡ್ಡಾ, ಉದಯ ಸೋಲಾಪೂರೆ, ಪಿಡಿಓ ದತ್ತಾತ್ರಿ ಪೂಜಾರಿ ಹಾಗೂ ಸ್ಥಳೀಯ ಮುಖಂಡರು, ಗ್ರಾಮಸ್ಥರು ಹಾಗೂ ಭಕ್ತರು ಉಪಸ್ಥಿತರಿದ್ದರು.

# ಸರಳವಾಗಿ ರಾಜಶೇಖರ ಪಾಟೀಲರವರ ಹುಟ್ಟುಹಬ್ಬ



• ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ

ಪಟ್ಟಣದಲ್ಲಿ ಮಾಜಿ ಸಚಿವ ರಾಜಶೇಖರ ಬಿ.ಪಾಟೀಲರವರ ಹುಟ್ಟು ಹಬ್ಬವನ್ನು ಅಭಿಮಾನಿ ಬಳಗದಿಂದ ಏ.1ರಂದು ಅತಿ ಸರಳವಾಗಿ ಆಚರಿಸಲಾಗುತ್ತಿದೆ ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಓಂಕಾರ ತುಂಬಾ ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತಾ ತಿಳಿಸಿದರು. ರಾಜಶೇಖರ ಪಾಟೀಲರವರು ಏ.1 ರಂದು ಬೆಳಿಗ್ಗೆ 11 ಗಂಟೆಗೆ ಶ್ರೀ ವೀರಭದ್ರೇಶ್ವರ ದೇವಸ್ಥಾನಕ್ಕೆ ಪಾಟೀಲ ಪರಿವಾರ ಸಮೇತ ತೆರಳಿ ವಿಶೇಷ ಪೂಜೆ ಸಲ್ಲಿಸಿ ದರ್ಶನ ಪಡೆಯುವರು, ರಾಜರಾಜೇಶ್ವರಿ ತಾಯಿಯ ದರ್ಶನ ಪಡೆಯುವರು. ತದನಂತರ ಲಿಂಗೈಕ್ಯ ಬಸವರಾಜ ಪಾಟೀಲರವರ ಸಮಾಧಿಗೆ ತೆರಳಿ ದರ್ಶನ ಪಡಡದುಕೊಂಡು ಮತ್ತೆ ವಾಪಸ್ ಅವರ ನಿವಾಸಕ್ಕೆ ತೆರಳಿದ ನಂತರ ಅವರ ಅಭಿಮಾನಿಗಳು ಹಾಗೂ ಕಾರ್ಯಕರ್ತರು ರಾಜಶೇಖರ ಪಾಟಿಲರವರಿಗೆ ಹುಗುಚ್ಛ ನೀಡಿ ಹುಟ್ಟುಹಬ್ಬದ ಶುಭಾಶಯಗಳು ಕೋರುವರು. ಹಾಗೂ ಜೇರಪೇಟ್ ಬಡಾವಣೆಯಲ್ಲಿಯು ಕೂಡ ಸಾಯಂಕಾಲ 6 ಗಂಟೆಗೆ ಕೇಕ್ ಕಟ್ ಮಾಡುವ ಮೂಲಕ ಹುಟ್ಟುಹಬ್ಬವನ್ನು ಕಾರ್ಯಕ್ರಮವನ್ನು ಆಚರಿಸಲಾಗಿದೆ ಎಂದು ಶ್ರೀಕಾಂತ ದೇವಣಿ ತಿಳಿದ್ದಾರೆ. ಈ ಸಂದರ್ಭದಲ್ಲಿ ಊಟದ ವ್ಯವಸ್ಥೆ ಕಲ್ಪಿಸಲಾಗಿದೆ ಎಂದರು. ಈ ಸಂದರ್ಭದಲ್ಲಿ ಮಲ್ಲಿಕಾರ್ಜುನ ಮಾಶೆಟ್ಟಿ, ಅಫ್ಸರ್ ಮಿಯ್ಯಾ, ಉಮೇಶ ಜಮಗಿ ಉಪಸ್ಥಿತರಿದ್ದರು.

# ಶಿವ ಶರಣ ಹರಳಯ್ಯ ರವಿ ದಾಸ್ ಮಹಾರಾಜರ ಜಯಂತಿ



• ಮಲ್ಲಮ್ಮ ನುಡಿ ವಾರ್ತೆ.ಬಸವಕಲ್ಯಾಣ

ಹುಲಸೂರು ತಾಲೂಕಿನ ಮುಚಳಂಬ ಗ್ರಾಮದಲ್ಲಿ ರವಿವಾರ ನಡೆದ ಶಿವ ಶರಣ ಹರಳಯ್ಯ ಹಾಗೂ ರವಿ ದಾಸ್ ಮಹಾರಾಜರ ಜಯಂತಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಹರಳಯ್ಯ ಸಮಾಜದ ತಾಲೂಕ ಅಧ್ಯಕ್ಷರಾದ ಶಿವಾಜಿ ಕಾಂಬಳೆ ಹಾಗೂ ಉಪಾಧ್ಯಕ್ಷರಾದ ಗೌತಮ ಜಾಧವ. ಸುರೇಕಾಂತ ಟಿಕೇಕರ. ಮೀನಾ ಬಾಯಿ ಜಾಧವ. ಸಂಜು ಜಾಧವ. ಗೋಪಾಲ್ ಸೂರ್ಯವಂಶಿ. ಅವನಿ ರೂಪಿಕೆಶ ಜಾಧವ ಉತಮಬಾಯಿ. ಶಿಂದೆ ಸಿತಲ ಸತ್ಯಾವಾನ ಕಾಂಬಳೆ. ಜೋತಿರಾಮ ಕಾಂಬಳೆ, ಶಿವಕುಮಾರ ಬಾಬುರಾವ್ ಕಾಂಬಳೆ ಯವರ ನೇತೃತ್ವದಲ್ಲಿ ನಡೆಯಿತು.

ಸದಸ್ಯರಾದ ಬಾಲಾಜಿ ಕಾಂಬಳೆ. ದತ್ತಾ ಡೋಣಗಪೂರೆ. ಧರ್ಮು ಡೋಣಗಪೂರೆ. ಧೂಂಡಿಬಾ ಟಿಳಕರ. ಡಿಗಂಬರ ಡೋಣಪೂರೆ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಹೊಸ ಜಾಹೀರಾತು ನೀತಿ ಬಗ್ಗೆ ಮಾತ್ರ ಚರ್ಚೆ ಅಡ್ಡಿಪಡಿಸುವ ವಿಚಾರ ಚರ್ಚೆಯಾಗಿಲ್ಲ

• ಮಲ್ಲಮ್ಮ ನುಡಿ ವಾರ್ತೆ ಬೀದರ

ಇತ್ತಿಚಿಗೆ ಕೆಲವು ಪತ್ರಿಕೆಗಳಲ್ಲಿ ಕರ್ನಾಟಕ ಕಾರ್ಯನಿರತ ಕಾರ್ಯನಿರತ ದಿನ ಪತ್ರಿಕೆಗಳ ಸಂಪಾದಕರ ಸಂಘ ಸಭೆಯನ್ನು ಆಯೋಜನೆ ಮಾಡಲಾಗಿದ್ದು, ಸಭೆಯಲ್ಲಿ ಸರಕಾರ ತಂದಿರುವ ಹೊಸ ಜಾಹಿರಾತು ನೀತಿ 2026ರ ಕೆಲವು ಅಂಶಗಳ ಬಗ್ಗೆ ಆಕ್ಷೇಪ ವ್ಯಕ್ತಪಡಿಸಲಾಗಿದೆ.

ಬರುವ ಏಪ್ರಿಲ್ 11 ಹಾಗೂ 12ರಂದು 40ನೇ ರಾಜ್ಯ ಪತ್ರಕರ್ತರ ಸಮ್ಮೇಳನವನ್ನು ಬೀದರ ನಗರದಲ್ಲಿ ಆಯೋಜನೆ ಮಾಡಲಾಗಿದೆ. ರಾಜ್ಯ ಸಮ್ಮೇಳನವನ್ನು ಈ ಹಿಂದೆ ನಿಗದಿಯಾಗಿದ್ದು ರಾಯಚೂರಿನಲ್ಲಿ ನಾವು ರಾಜ್ಯ ಸಂಘದ ರಾಜ್ಯ ಅಧ್ಯಕ್ಷರಿಗೆ ವಿನಂತಿಸಿ ಬೀದರ ನಗರದಲ್ಲಿಯೇ ರಾಜ್ಯ ಸಮ್ಮೇಳನ ಮಾಡಬೇಕೆಂದು ವಿನಂತಿಸಿದಾಗ ಬೀದರ ನಗರದಲ್ಲಿ ರಾಜ್ಯ ಸಮ್ಮೇಳನ ಆಯೋಜನೆ ಮಾಡಲಾಗಿದೆ.

ಈ ಸಮ್ಮೇಳನಕ್ಕೆ ರಾಜ್ಯದ ಮುಖ್ಯ ಮಂತ್ರಿಗಳು, ಉಪ ಮುಖ್ಯ ಮಂತ್ರಿಗಳು ಸೇರಿದಂತೆ ಅನೇಕ ಗಣ್ಯರು ಈ ಕಾರ್ಯಕ್ರಮಕ್ಕೆ ಆಗಮಿಸುತ್ತಿದ್ದಾರೆ. ಬೀದರ ನಗರದಲ್ಲಿ ಸಮ್ಮೇಳನವನ್ನು ಅದ್ದೂರಿ ಮತ್ತು ಅರ್ಥಪೂರ್ಣವಾಗಿ ನಡೆಸಲು ತಿರ್ಮಾನಿಸಿ ಕಾರ್ಯಪ್ರವೃತ್ತರಾಗಿದ್ದೇವೆ. ದಿನಾಂಕ 27ರಂದು ನಡೆದ ಸಭೆಯಲ್ಲಿ ಸಮ್ಮೇಳನಕ್ಕೆ ಅಡ್ಡಿ ಪಡಿಸುವ ಯಾವುದೇ ನಿರ್ಧಾರವಾಗಿಲ್ಲ ಇದು ಸತ್ಯಕ್ಕೆ ದೂರವಾಗಿದೆ. ರಾಜ್ಯದ ಪತ್ರಕರ್ತರು ಸಮ್ಮೇಳನಕ್ಕೆ ಆಹ್ವಾನಿಸುತ್ತೇವೆ ಎಂದು ಕರ್ನಾಟಕ ಕಾರ್ಯನಿರತ ದಿನ ಪತ್ರಿಕೆಗಳ ಸಂಪಾದಕರ ಸಂಘದ ರಾಜ್ಯ ಪ್ರತಿನಿಧಿ ಶ್ರೀ ಅಶೋಕ ಕುಮಾರ ಕರಂಜೆ, ಮಾಳಪ್ಪ ಅಡಸಾರೆ ಮತ್ತು ಪೃಥ್ವಿರಾಜ ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮಟಕಾ ಬುಕ್ಕಿಗಳ ಬಂಧನ 19.44 ಲಕ್ಷ ರೂ ವಶ



• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ನಗರದ ಎ.ಪಿ.ಎಂ.ಸಿ. ಪೊಲೀಸ್ ಠಾಣಾ ವ್ಯಾಪ್ತಿಯ ಕಾಕರ್ಲತೋಟದ ಹನುಮಾನ್ ನಗರದ ಕೋಳಿ ಫಾರಂ ಮುಂದುಗಡೆ ಮಟ್ಕಾ ಬುಕ್ಕಿಗಳನ್ನು ಸ್ಥಳದಲ್ಲಿ ಪೊಲೀಸರು ಇಬ್ಬರನ್ನು ಬಂಧಿಸಿ ಅವರಿಂದ 19 ಲಕ್ಷದ 44 ಸಾವಿರ ರೂ ನಗದು, ಒಂದು ಮೋಬೈಲ್ , ಒಂದು ಮೋಟಾರ್ ಸೈಕಲ್ಲು ವಶಪಡಿಸಿಕೊಂಡಿದ್ದಾರೆ.

ನಗರದ ರೂಪನಗುಡಿ ರಸ್ತೆಯ ಜಿ.ವಿ. ರಾಮಾಂಜಿನೇಯಲು, ಮಿಲ್ಲರ್ ಪೇಟೆಯ ನೂರ ಅಲಿಯಾಸ್ ನೂರ್ ಮ್ಮದ್ ಬುಕ್ಕಿಗಳಾಗಿದ್ದಾರೆ. ಇವರ ಬಳಿ ಹಣ ಪಡೆಯಲು ಬಂದಿದ್ದ ಉರವ ಕೊಂಡ ತಾಲೂಕಿನ ಚೋಳ ಸಮುದ್ರಂ ಗ್ರಾಮದ ಜನ್ನೆ ಲಕ್ಷ್ಮಣ ಎಂಬಾತನನ್ನು ಸಹ ಬಂಧಿಸಲಾಗಿದೆ

# ಕಸಾಪಯಿಂದ ಜಾಕಾಮಠ ಅವರ ಅಗಲಿಕೆಗೆ ನುಡಿನಮನ




• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಹುಟ್ಟು ಮತ್ತು ಸಾವು ನಿಸರ್ಗದ ನಿಯಮ ಇವುಗಳ ಮಧ್ಯೆ ಇರತಕ್ಕಂತ ಸಮಯವನ್ನು ಜನ ಉಪಕಾರಿಯಾಗಿ ಬದುಕಬೇಕು ಎಂದು ಹಿರಿಯ ಸಾಹಿತಿ ಅಯ್ಯಣ್ಣ ಹುಂಡೇಕಾರ ನುಡಿದರು. ನಗರದ ಹಿಂದಿ ಪ್ರಚಾರ ಸಭಾಂಗಣದಲ್ಲಿ ಜಿಲ್ಲಾ ಹಾಗೂ ತಾಲೂಕು ಕಸಾಪ ವತಿಯಿಂದ ಹಮ್ಮಿಕೊಂಡಿದ ನುಡಿನಮನ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. ತಾಲೂಕು ಕಸಾಪ ಅಧ್ಯಕ್ಷ ವೆಂಕಟೇಶ ಕಲಕಂಭ ಮಾತನಾಡಿ ಜೀವನ ಅತ್ಯಮೂಲ್ಯವಾದದ್ದು ಅದು ಸಾಮಾಜಿಕವಾಗಿ ಸಂಘಜೀವಿಯಾಗಿ ರೂಪಿಸಿಕೊಳ್ಳುವುದರ ಮೂಲಕ ಮತ್ತೊಬ್ಬರಿಗೆ ಆದರ್ಶ ಪ್ರಾಯರಾದವರು ಸರಳ ಸಜ್ಜನಿಕೆಯ ವ್ಯಕ್ತಿತ್ವ ಮತ್ತು ಸ್ನೇಹಮಯ ಜೀವವನ್ನು ರೂಡಿಸಿಕೊಂಡವರು ಎಂದರು

ಈ ಸಂದರ್ಭದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಸಿದ್ದಪ್ಪ ಹೊಟ್ಟಿ ಅವರ ಅಧ್ಯಕ್ಷತೆಯಲ್ಲಿ ಗುರುವಾರದಂದು ಹಿಂದಿ ಪ್ರಚಾರ ಸಭಾ ಕಾರ್ಯಾಲಯದಲ್ಲಿ ವೀರಭದ್ರಯ್ಯ ಸ್ವಾಮಿ ಜಾಕಮಠ ಅವರಿಗಾಗಿ ಏರ್ಪಡಿಸಿದ ನುಡಿ ನಮನ ಕಾರ್ಯಕ್ರಮದಲ್ಲಿ ಡಾ. ಭೀಮರಾಯ ಲಿಂಗೇರಿ ಡಾ. ಎಸ್ ಎಸ್ ನಾಯಕ. ಬಸವರಾಜ ಮೋಟ್ನಳ್ಳಿ ದೇವರಾಜಗೌಡ ಬೆಳಗೇರಿ ಜಾಕಮಠ ಅವರ ಸೇವೆಯನ್ನು ಕುರಿತು ಕೊಂಡಾಡಿದರು.

ವೀರಭದ್ರಯ್ಯ ಜಾಕಮಠ ಅವರ ನಿಧನದಿಂದ ಪರಿಷತ್ತಿಗೆ ಹಾಗೂ ಸಮಾಜಕ್ಕೆ ತುಂಬಲಾಗದ ನಷ್ಟವಾಗಿದೆ ಎಂದು ಹಾಗೂ ಅವರ ಕುಟುಂಬಕ್ಕೆ ದುಃಖ ಭರಿಸುವ ಶಕ್ತಿ ಕೊಡಲೆಂದು ಎರಡು ನಿಮಿಷಗಳ ಕಾಲ ಮೌನ ಆಚರಣೆ ಮಾಡಿ ನುಡಿ ನಮನ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಸೋಮಶೇಖರ್ ಮಣ್ಣೂರು. ಬಸವಂತ್ರಾಯಗೌಡ ಮಾಲಿ ಪಾಟೀಲ. ಮಹೇಶ ಹೀರೆಮಠ. ಮಹೇಶ ಪಾಟೀಲ. ಸ್ವಾಮಿದೇವ ದಾಸನಕೇರಿ. ಬಸನಗೌಡ ಪಾಟೀಲ ಸುಭಾಷರೆಡ್ಡಿ ಬೀರನೂರ. ರಮೇಶ ಈಟೆ. ಸ್ವಪ್ನ ಲೇವಡಿ. ನಾಗೇಂದ್ರ ಜಾಜಿ. ದೇವಿಂದ್ರ ರೆಡ್ಡಿ ಯಡ್ಡಳ್ಳಿ. ಸೂರ್ಯಕಾಂತ ಕರದಳ್ಳಿ. ನೂರಂದಪ್ಪ ಲೇವಡಿ. ಚಂದ್ರಶೇಖರ್ ಅರಳಿ. ಚೆನ್ನಪ್ಪ ಸಾಹು ಠಾಣಗುಂದಿ. ಶರಣಪ್ಪ ಗುಳಗಿ. ಮಲ್ಲಿನಾಥ ಆಯರಕರ್. ನಿರಂಜನ ಸಜ್ಜನ ಇನ್ನಿತರರು ಇದ್ದರು.

# ಏ, 5ಕ್ಕೆ ಬೃಹತ್ ಉದ್ಯೋಗ ಮೇಳ: ಮಲ್ಲಿಕಾರ್ಜುನ ಮೇಟಿ




• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಡಾ. ಭೀಮಣ್ಣ ಮೇಟಿ ಫೌಂಡೇಶನ್ ಹಾಗೂ ಡಿಡಿಯು ಸಮೂಹ ಶಿಕ್ಷಣ ಸಂಸ್ಥೆ (ಯಾದಗಿರಿ, ಕಲಬುರಗಿ, ಶಹಾಪೂರ, ದೋರನಹಳ್ಳಿ, ಸೈದಾಪೂರ, ವಡಗೇರಾ) ಆಶ್ರಯದಲ್ಲಿ

ರಾಜ್ಯ ಮಟ್ಟದ ಬೃಹತ್ ಖಾಸಗಿ ಪ್ರಾಥಮಿಕ, ಪ್ರೌಢ ಹಾಗೂ ಕಾಲೇಜು ಶಿಕ್ಷಕರ ಹುದ್ದೆಗಳ ನೇಮಕಾತಿ ಉದ್ಯೋಗ ಮೇಳ ಏಪ್ರಿಲ್ 5ರಂದು ಆಯೋಜಿಸಲಾಗಿದೆ ಎಂದು ಡಿಡಿಯು ಶಿಕ್ಷಣ ಸಂಸ್ಥೆ ಆಡಳಿತಾಧಿಕಾರಿ ಮಲ್ಲಿಕಾರ್ಜುನ ಮೇಟಿ ಹೇಳಿದರು.

ಜಿಲ್ಲಾ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚಿತ್ತಾಪುರ ರೋಡ್ ಬಳಿಯಿರುವ ಡಿಡಿಯು ಸಿ.ಬಿ.ಎಸ್.ಸಿ ಶಾಲೆಯಲ್ಲಿ ಬೆಳಿಗ್ಗೆ 9ರಿಂದ ಸಂಜೆ 4ರ ವರೆಗೆ ಉದ್ಯೋಗ ಮೇಳ ನಡೆಯಲಿದೆ ಎಂದರು, ಪ್ರಾಚಾರ್ಯರು, ಉಪನ್ಯಾಸಕರು, ಮುಖ್ಯೋಪಾದ್ಯಯರು, ಸಹ ಶಿಕ್ಷಕರು ವಾರ್ಡನ್, ಗುಮಾಸ್ತ ಸಿಪಾಯಿ, ಆಯಾಗಳು ಡ್ರೈವರ್‌ಗಳು, ಸೆಕ್ಯೂರಿಟಿ ಗಾರ್ಡ್ ಮುಂತಾದವುಗಳ ಹುದ್ದೆಗೆ ನೇಮಕಾತಿ ಉದ್ಯೋಗ ಮೇಳ ನಡೆಯಲಿದೆ ಎಂದರು. ವಿದ್ಯಾರ್ಹತೆ ಆ.ಜಜ, ಃ.ಜಜ, ಒ.ಜಜ, ಅ.ಿಜಜ, ಃ.ಕಜಜ, ಒ,ಕಜಜ, ಒ.ಂ, ಒ.ಛಿ, ಒ.ಛಿಂಟ, ಓಖಿಅ, ಃ.ಂ, ಃ.ಛಿ, ಃ.ಛಿಂಟ, ಃಅಂ, ಃಃಒ, ಃಃಂ, ಒಃಂ, ಒಖಫ, ಒ.ಟುಛ, ಕಗಅ, ಖಖಐಅ ವಿದ್ಯಾರ್ಹತೆ ಪೂರ್ಣಗೊಳಿಸಿದವರು ಭಾಗವಹಿಸಬಹುದು ಎಂದು ತಿಳಿಸಿದರು. ಉದ್ಯೋಗ ಮೇಳದಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳು, ಶಾಲೆಗಳು, ಕಾಲೇಜುಗಳು ಮುಖ್ಯಸ್ಥರು ಹಾಗೂ ನಿರುದ್ಯೋಗಿ ಯುವಕರು ಶಿಕ್ಷಕರು, ಉಪನ್ಯಾಸಕರು ಭಾಗವಹಿಸಬಹುದು ಎಂದರು. ಉದ್ಯೋಗ ಮೇಳದಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಹಾಗೂ ಭಾಗವಹಿಸುವ ಅಭ್ಯರ್ಥಿಗಳಿಗೆ ಯಾವುದೇ ಶುಲ್ಕವಿರುವದಿಲ್ಲ. ಪೂರ್ಣಗೊಳಿಸಿದ ವಿದ್ಯಾರ್ಥಿಗಳು ಉದ್ಯೋಗ ಮೇಳದಲ್ಲಿ ಭಾಗವಹಿಸಬಹುದಾಗಿದೆ. ಈ ವಿದ್ಯಾರ್ಥಿಗಳಿಗೆ ಗಣಿತ, ವಿಜ್ಞಾನ, ಕಂಪ್ಯೂಟರ್ ಶಿಕ್ಷಕರ ಹುದ್ದೆಗೆ ಆಯ್ಕೆ ಮಾಡಲಾಗುವುದು ಆಯ್ಕೆಯಾದ ವಿದ್ಯಾರ್ಥಿಗಳಿಗೆ ಬೋಧನೆ ಕುರಿತು ತರಬೇತಿ ನೀಡಲಾಗುವುದು ಎಂದರು. ಉದ್ಯೋಗ ಮೇಳದಲ್ಲಿ ಭಾಗವಹಿಸುವ ಅಭ್ಯರ್ಥಿಗಳು ವಿವರದೊಂದಿಗೆ ಭಾಗವಹಿಸಬೇಕು ಎಂದರು ಸುದ್ದಿಗೋಷ್ಠಿಯಲ್ಲಿ ಗೋಪಾಲ ಕೃಷ್ಣ, ರಾಜೇಶ್, ವೆಂಕಟೇಶ್ ಪೂಜಾರಿ ಇದ್ದರು.

# ಬದಲಾವಣೆ ಶೂನ್ಯ: ಪಶು ಸಂತೆಯಲ್ಲಿ ರೈತರ ಆಕ್ರೋಶ



• ಮಲ್ಲಮ್ಮ ನುಡಿ ವಾರ್ತೆ, ಗುರುಮಠಕಲ್


ಕಳೆದ ವಾರದ ಪಶು ಸಂತೆ ಅವ್ಯವಸ್ಥೆ ಕುರಿತು ಸುದ್ದಿ ಪ್ರಕಟವಾಗಿತ್ತು, ಸುದ್ದಿಗೆ ಸ್ಪಂದನೆ ಇಲ್ಲದೇ ಅವ್ಯವಸ್ಥೆ ಯಥಾಸ್ಥಿತಿಯಲ್ಲೇ ಮುಂದುವರಿದಿದೆ.

ಸ್ಥಳದ ಕೊರತೆ, ಜಾನುವಾರು ಇಳಿಸುವ ವ್ಯವಸ್ಥೆಯ ಅಭಾವ, ವಾಹನಗಳ ಅಸ್ತವ್ಯಸ್ತ ನಿಲುಗಡೆ, ನೀರಿನ ತೊಟ್ಟಿಗಳಲ್ಲಿ ಸ್ವಚ್ಛ ನೀರಿನ ಕೊರತೆ ಸೇರಿದಂತೆ ಪ್ರಮುಖ ಸಮಸ್ಯೆಗಳು ಹಾಗೆಯೇ ಉಳಿದಿವೆ. ಇದರಿಂದ ರೈತರು ಮತ್ತು ವ್ಯಾಪಾರಿಗಳು ತೀವ್ರ ಸಂಕಷ್ಟ ಅನುಭವಿಸುತ್ತಿದ್ದಾರೆ.

ಮಾರುಕಟ್ಟೆಯಲ್ಲಿ ಸ್ವಚ್ಛತೆ ಹದಗೆಟ್ಟಿದ್ದು, ಕಸದ ರಾಶಿಗಳು ಎಲ್ಲೆಂದರಲ್ಲಿ ಕಾಣಿಸುತ್ತಿವೆ. ಅಲೆಮಾರಿ ಸಮುದಾಯದವರ ವಾಸವೂ ಪರಿಸ್ಥಿತಿಯನ್ನು ಮತ್ತಷ್ಟು ಗಂಭೀರಗೊಳಿಸಿದೆ ಎಂಬ ಆರೋಪ ಕೇಳಿಬಂದಿದೆ.

ಪ್ರತಿ ಸೋಮವಾರವೂ ಇದೇ ಸಮಸ್ಯೆಗಳು ಮರುಕಳಿಸುತ್ತಿದ್ದರೂ ಅಧಿಕಾರಿಗಳ ನಿರ್ಲಕ್ಷ್ಯ ಮುಂದುವರಿದಿದೆ ಎಂದು ರೈತರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ತಕ್ಷಣ ಕ್ರಮ ಕೈಗೊಂಡು ಮೂಲಭೂತ ಸೌಲಭ್ಯ ಒದಗಿಸಿ, ಕೃಷಿ ಮಾರುಕಟ್ಟೆಯಲ್ಲಿ ಶಿಸ್ತು ತರಬೇಕು ಎಂದು ರೈತರು ಆಗ್ರಹಿಸಿದ್ದಾರೆ.

# ಮಾನೇಗಾರ ಯರಗೋಳಗೆ ಕರ್ನಾಟಕ ಸಾರ್ವಭೌಮ ಪ್ರಶಸ್ತಿ



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಕರ್ನಾಟಕ ರಕ್ಷಣಾ ವೇದಿಕೆ ವತಿಯಿಂದ ಬೆಂಗಳೂರಿನ ಪ್ರೆಸ್ಟೀಜ್ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಹಿಂದುಳಿದ ವರ್ಗಗಳ ಆಯೋಗದ ಮಾಜಿ ಸದಸ್ಯ ಶರಣಪ್ಪ ಡಿ ಮಾನೇಗಾರ ಅವರಿಗೆ ಕರ್ನಾಟಕ ಸಾರ್ವಭೌಮ ಪ್ರಶಸ್ತಿಯನ್ನು ವಿತರಿಸಿದರು. ಸಮಾಜ ಸೇವೆ ಹಾಗೂ ರಾಜಕೀಯ ಕ್ಷೇತ್ರದಲ್ಲಿ ವಿಶೇಷ ಸೇವೆ ಸಲ್ಲಿಸಿರುವ ಶ್ರೀ ಶರಣಪ್ಪ ಮಾನೇಗಾರ ಇವರಿಗೆ ಕರ್ನಾಟಕ ರಕ್ಷಣಾ ವೇದಿಕೆಯ ರಾಜ್ಯಾಧ್ಯಕ್ಷರಾದ ಟಿ.ಎ. ನಾರಾಯಣಗೌಡ, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷರಾದ ನಟಿ ಶ್ರೀಮತಿ ಜಯಮಾಲಾ ಅವರು ಪ್ರಶಸ್ತಿ ಪ್ರಧಾನ ಮಾಡಿದರು.

ಈ ಸಂದರ್ಭವು ಕೇವಲ ಪ್ರಶಸ್ತಿ ಪ್ರಶಸ್ತಿ ಪ್ರದಾನವಾಗಿರದೇ, ಸಮಾಜ ಸೇವೆಯ ಮಹತ್ವವನ್ನು ಸಾರುವ ಒಂದು ಪ್ರೇರಣಾದಾಯಕ ಕ್ಷಣವಾಗಿದೆ. ಶ್ರೀ ಶರಣಪ್ಪ ಮಾನೇಗಾರರ ಸೇವಾ ಮನೋಭಾವ, ಜನಪರ ಕೆಲಸಗಳು ಮತ್ತು ನಾಯಕತ್ವ ಗುಣಗಳನ್ನು ಗುರುತಿಸಿ ಈ ಗೌರವವನ್ನು ನೀಡಲಾಗಿದೆ. ಇದು ಅವರ ಸಾಧನೆಗೆ ಒಂದು ಮಾನ್ಯತೆ ಮಾತ್ರವಲ್ಲ, ಮುಂದಿನ ದಿನಗಳಲ್ಲಿ ಇನ್ನಷ್ಟು ಸಮಾಜಮುಖಿ ಕಾರ್ಯಗಳಿಗೆ ಪ್ರೇರಣೆಯೂ ಆಗಿದೆ. ಈ ಸಮಾರಂಭವು ರಾಜ್ಯದ ಅಭಿವೃದ್ಧಿಗೆ ಕೊಡುಗೆ ನೀಡುವ ವ್ಯಕ್ತಿಗಳ ಸೇವೆಯನ್ನು ಗೌರವಿಸುವ ಮಹತ್ವದ ವೇದಿಕೆಯಾಗಿದೆ ಎಂದು ನಾರಾಯಣ ಗೌಡರು ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಕರವೇ ಯಾದಗಿರಿ ಜಿಲ್ಲಾಧ್ಯಕ್ಷ ಟಿ.ಎನ್. ಭೀಮುನಾಯಕ ತಾಲ್ಲೂಕು ಅಧ್ಯಕ್ಷ ಮಲ್ಲು ಮಾಳಿಕೇರಿ ಮಾಜಿ ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷರು ಸುಧರ್ಶನ್ ಪಾಟೀಲ್ ಜೈಗ್ರಾಮ್, ಹಣಮಂತ ದೊಡ್ಡಮನಿ, ಜಗದೀಶ್ ಸಜ್ಜನ, ಯಂಕಾರೆಡ್ಡಿ ಮಾನೆಗಾರ, ಸೈದಾಪುರ ಬ್ಲಾಕ್ ಯುವ ಕಾಂಗ್ರೆಸ್ ಅಧ್ಯಕ್ಷರು ಆಂಜನೇಯ ಕಟ್ಟಿಮನಿ, ವೀರೇಶ್ ಸಜ್ಜನ್ ಕೋಲಿ ಸಮಾಜದ ವಲಯ ಅಧ್ಯಕ್ಷರು ರಮೇಶ್ ಭೀಮನಳ್ಳಿ, ಗುರುಮಿಠಕಲ್ ಅಸೆಂಬ್ಲಿಯ ಯುವ ಕಾಂಗ್ರೆಸ್ ಉಪಾಧ್ಯಕ್ಷರು ಮಂಜುನಾಥ್ ಮೇತ್ರಿ, ಪುಂಡಲೀಕ್ ಗೊಂದೆಡಗಿ, ಜುಬೇರ ಕಡೇಚೂರು, ಹುಸೇನಪ್ಪ ಕಡೇಚೂರು, ಚಂದ್ರಪ್ಪ ಕಡೇಚೂರು, ರಾಘವೇಂದ್ರ ಕೊಂಕಲ್ ಇನ್ನೂ ಅನೇಕ ಮುಖಂಡರು ಹಾಗೂ ಶರಣಪ್ಪ ಮಾನೇಗಾರ ಅಭಿಮಾನಿಗಳು ಉಪಸ್ಥಿತರಿದ್ದರು.

# ವಿಬಿಆರ್ ಆಸ್ಪತ್ರೆಯಲ್ಲಿ ಕ್ಲಿಷ್ಟಕರ, ತುರ್ತು ಚಿಕಿತ್ಸೆಯಲ್ಲಿ ಗಮನಾರ್ಹ ಸಾಧನೆ


• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಜಿಲ್ಲೆಯಲ್ಲಿ ಆರೋಗ್ಯ ಸೇವೆಗಳ ಗುಣಮಟ್ಟವನ್ನು ಮತ್ತೊಂದು ಹಂತಕ್ಕೆ ಏರಿಸುವ ರೀತಿಯಲ್ಲಿ, ನಗರದ ವಿಬಿಆರ್ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಅಪರೂಪದ ಹಾಗೂ ಅತೀ ಸಂಕೀರ್ಣ ವೈದ್ಯಕೀಯ ಚಿಕಿತ್ಸೆಗಳ ಮೂಲಕ ಗಮನ ಸೆಳೆಯುತ್ತಿದೆ. ಇತ್ತೀಚೆಗೆ ನಡೆದ ಕ್ಲಿಷ್ಟಕರ ಶಸ್ತ್ರಚಿಕಿತ್ಸೆ ಹಾಗೂ ತುರ್ತು ಚಿಕಿತ್ಸಾ ಸೇವೆಗಳ ಯಶಸ್ವಿ ನಿರ್ವಹಣೆ ಆಸ್ಪತ್ರೆಯ ಸಾಮರ್ಥ್ಯವನ್ನು ಮತ್ತೊಮ್ಮೆ ಸಾಬೀತುಪಡಿಸಿದೆ. ಈ ಕುರಿತು ನಡೆದ ಸುದ್ದಿಗೋಷ್ಠಿಯಲ್ಲಿ ವೈದ್ಯರು ಮಾತನಾಡಿ, ಅಪಘಾತಗಳಿಂದ ಉಂಟಾಗುವ ಗಂಭೀರ ಅಂತರಂಗ ಮೂಳೆ ಗಾಯಗಳಿಗೆ ಅತ್ಯಾಧುನಿಕ ವಿಧಾನಗಳಲ್ಲಿ ಚಿಕಿತ್ಸೆ ನೀಡಲಾಗುತ್ತಿದ್ದು, ಇಂತಹ ಪ್ರಕರಣಗಳನ್ನು ಸಮರ್ಥವಾಗಿ ನಿಭಾಯಿಸುವಲ್ಲಿ ವೈದ್ಯಕೀಯ ತಂಡ ತಜ್ಞತೆ ಪ್ರದರ್ಶಿಸಿದೆ ಎಂದು ತಿಳಿಸಿದರು. ವಿಶೇಷವಾಗಿ, ತುರ್ತು ಪರಿಸ್ಥಿತಿಗಳಲ್ಲಿ ರೋಗಿಗಳನ್ನು ತಕ್ಷಣ ಆಸ್ಪತ್ರೆಗೆ ದಾಖಲಿಸುವುದು ಜೀವ ಉಳಿಸುವಲ್ಲಿ ಮಹತ್ತರ ಪಾತ್ರ ವಹಿಸುತ್ತಿದ್ದು, 'ಗೋಲ್ಡನ್ ಅವರ್' ಒಳಗೆ ಚಿಕಿತ್ಸೆ ದೊರೆತರೆ ಅಪಾಯದ ಮಟ್ಟವು ಗಣನೀಯವಾಗಿ ಕಡಿಮೆಯಾಗುತ್ತದೆ ಎಂದು ವೈದ್ಯರು ಸ್ಪಷ್ಟಪಡಿಸಿದರು.


ಇತ್ತೀಚೆಗೆ ಆಸ್ಪತ್ರೆಗೆ ದಾಖಲಾಗಿದ್ದ ಹಲವು ಗಂಭೀರ ಪ್ರಕರಣಗಳಲ್ಲಿ ವೈದ್ಯಕೀಯ ತಂಡ ಸಮಯೋಚಿತ ಕ್ರಮ ಕೈಗೊಂಡು ರೋಗಿಗಳನ್ನು ಸುರಕ್ಷಿತವಾಗಿ ಗುಣಮುಖಗೊಳಿಸಿರುವುದಾಗಿ ಅವರು ವಿವರಿಸಿದರು. ತಡವಾಗಿ ದಾಖಲಾಗಿದ್ದ ಪ್ರಕರಣಗಳನ್ನೂ ಸಹ ನಿಪುಣತೆಯಿಂದ ನಿರ್ವಹಿಸಿ ರೋಗಿಗಳ ಪ್ರಾಣ ಉಳಿಸಿರುವುದು ಗಮನಾರ್ಹ ಸಾಧನೆ ಎಂದು ಹೇಳಿದರು. ಇದಕ್ಕುಪರಿ,

ಜಿಲ್ಲೆಯಲ್ಲಿನ ಎಲುಬು ಹಾಗೂ ಸಂಧಿ ಸಮಸ್ಯೆಗಳ ಪ್ರಮಾಣ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ, ನುರಿತ ತಜ್ಞರನ್ನು ಆಹ್ವಾನಿಸಿ ಉನ್ನತ ಮಟ್ಟದ ಶಸ್ತ್ರಚಿಕಿತ್ಸಾ ಸೇವೆಗಳನ್ನು ಸ್ಥಳೀಯ ಮಟ್ಟದಲ್ಲೇ ಒದಗಿಸುವ ಯೋಜನೆಯನ್ನು ರೂಪಿಸಲಾಗಿದೆ. ಇದರಿಂದ ಗ್ರಾಮೀಣ ಹಾಗೂ ಆರ್ಥಿಕವಾಗಿ ಹಿಂದುಳಿದ ವರ್ಗದ ರೋಗಿಗಳಿಗೆ ದೂರದ ನಗರಗಳಿಗೆ ತೆರಳುವ ಅಗತ್ಯ ಕಡಿಮೆಯಾಗಲಿದೆ.

ಸಂಪೂರ್ಣ ವೈದ್ಯಕೀಯ ಸೌಲಭ್ಯಗಳು, ಅನುಭವಸಂಪನ್ನ ವೈದ್ಯಕೀಯ ಸಿಬ್ಬಂದಿ ಹಾಗೂ ಆಧುನಿಕ ತಂತ್ರಜ್ಞಾನಗಳ ಸಮನ್ವಯದ ಮೂಲಕ ವಿಬಿಆರ್ ಆಸ್ಪತ್ರೆ ಜಿಲ್ಲೆಯಲ್ಲಿ ವಿಶ್ವಾಸಾರ್ಹ ಆರೋಗ್ಯ ಕೇಂದ್ರವಾಗಿ ರೂಪುಗೊಳ್ಳುತ್ತಿದೆ ಎಂದು ವೈದ್ಯರು ಅಭಿಪ್ರಾಯಪಟ್ಟರು. ಸುದ್ದಿಗೋಷ್ಠಿಯಲ್ಲಿ ಆಸ್ಪತ್ರೆಯ ಸಿಬ್ಬಂದಿ ಹಾಗೂ ಚಿಕಿತ್ಸೆಯಿಂದ ಗುಣಮುಖರಾದ ರೋಗಿಗಳು ಉಪಸ್ಥಿತರಿದ್ದು, ವೈದ್ಯಕೀಯ ಸೇವೆಗಳ ಕುರಿತು ತಮ್ಮ ಅನುಭವ ಹಂಚಿಕೊಂಡರು.




# ಅದ್ದೂರಿಯಾಗಿ ಪೂಜಾರಿ ಪರಿವಾರದ ಶಾಲು ಕಿರುಗುಣಿ ಕಾರ್ಯಕ್ರಮ




• ಮಲ್ಲಮ್ಮ ನುಡಿ ವಾರ್ತೆ,ಚಿಟಗುಪ್ಪ

ಪಟ್ಟಣದ ಫಾತಿಮಾಪುರನಲ್ಲಿ ಅಂಬಿಕಾ ದತ್ತಾತ್ರೇಯ ಪೂಜಾರಿ ಇವರ ಮಕ್ಕಳಾದ ಕುಮಾರಿ ಸಾನ್ವಿ, ಕುಮಾರ ಸಂಗಮೇಶ ಇವರ ಶಾಲು ಕಿರುಗುಣಿ ಕಾರ್ಯಕ್ರಮ ಸೋಮವಾರ ಅದ್ದೂರಿಯಾಗಿ ಜರುಗಿತ್ತು. ಕಲ್ಬುರ್ಗಿ ಜಿಲ್ಲೆಯ ಕಮಲಾಪುರ್ ತಾಲೂಕಿನ ಸೊಂತ (ಮುಲ್ಲಾಮಾರಿ)

ತೀರ ಕ್ಷೇತ್ರದ ಶರಣ ಶಂಕರಲಿಂಗ ಆಶ್ರಮದ ಪೀಠಾಧಿಪತಿಗಳಾದ ಶ್ರೀಶ್ರೀಶ್ರೀ ಬಾಲಯೋಗಿ ಅಭಿನವ ಶರಣ ಶಂಕರಲಿಂಗ ಅಪ್ಪಾಜಿ ಅವರು ಮಕ್ಕಳಿಗೆ ಶಾಲು ಹೊದಿಸಿ ಸನ್ಮಾನಿಸಿ ಆಶೀರ್ವದಿಸಿದರು. ಕ್ಷೇತ್ರದ ಶಾಸಕ ಡಾ. ಸಿದ್ದು ಪಾಟೀಲ್, ಡಿಸಿಸಿ ಬ್ಯಾಂಕ ಜಿಲ್ಲಾ ಉಪಾಧ್ಯಕ್ಷ ಅಭಿಷೇಕ ಆರ್. ಪಾಟೀಲ್ ಆಗಮಿಸಿ ಮಕ್ಕಳಿಗೆ ಶುಭ ಕೋರಿದರು. ಈ ಸಂದರ್ಭದಲ್ಲಿ ಅಶೋಕ ಸ್ವಾಮಿ, ನರಸಪ್ಪ, ನರನಾಳ,

ವೆಂಕಟ ಪೂಜಾರಿ, ದೇವಿಂದ್ರ ಸೀತಾಳಗೇರಾ, ಮಾಣಿಕರೆಡ್ಡಿ ರಾಂಪುರ, ಮಾಣಿಕರಾವ ಪೂಜಾರಿ, ಸರಸ್ವತಿ ಪೂಜಾರಿ, ರಾಜಕುಮಾರ ಹಡಪದ, ರಾಜು ಪೂಜಾರಿ, ಶೇಖರ್ ಸಿಂಧನಕೇರಾ ಸೇರಿದಂತೆ ಅಪಾರ ಬಂಧು ಬಳಗದವರು ಶುಭ ಕೋರಿದರು.

# ರಾಜ್ಯದ ಪ್ರವಾಸೋದ್ಯಮಕ್ಕೆ ಹೆಚ್ಚಿನ ಆದ್ಯತೆ

• ಮಲ್ಲಮ್ಮ ನುಡಿ ವಾರ್ತೆ
ಹಳಿಯಾಳ



ರಾಜ್ಯದ ಕರಾವಳಿ ಜಿಲ್ಲೆಗಳಾದ ಉತ್ತರ ಕನ್ನಡ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿನ ಪ್ರವಾಸಿ ತಾಣಗಳು ರಾಜ್ಯದ ಪ್ರವಾಸೋದ್ಯಮ ಅಭಿವೃದ್ಧಿಗೆ ಹೆಚ್ಚಿನ ಬಲ ತುಂಬಿದೆ ಎಂದು ಕಾನೂನು ಸಂಸದೀಯ ವ್ಯವಹಾರಗಳ ಶಾಸನ ಮತ್ತು ಪ್ರವಾಸೋದ್ಯಮ ಇಲಾಖೆ ಸಚಿವರಾದ ಮಾನ್ಯ ಎಚ್ ಕೆ ಪಾಟೀಲರು ಹೇಳಿದರು.

ಭಾನುವಾರ ಹಳಿಯಾಳದಲ್ಲಿ ಲೋಕೋಪಯೋಗಿ ಇಲಾಖೆ ಹಾಗೂ ಪ್ರವಾಸೋದ್ಯಮ ಇಲಾಖೆ ವತಿಯಿಂದ ರೂ 798 ಲಕ್ಷ ವೆಚ್ಚದಲ್ಲಿ ನಿರ್ಮಿಸಿದ ಸಮಾವೇಶ ಕೇಂದ್ರ ಕಟ್ಟಡದ ಉದ್ಘಾಟಿಸಿ ಮಾತನಾಡಿದ ಸಚಿವರು ಪ್ರವಾಸೋದ್ಯಮವು ರಾಜ್ಯದ ಕಲೆ ಸಂಸ್ಕೃತಿ ಇತಿಹಾಸ ಹಾಗೂ ನಾಡಿನ ಜನರಲ್ಲಿ ಜ್ಞಾನ ಬೆಳೆಸುವ ಕ್ಷೇತ್ರವಾಗಿದೆ ಹಾಗೂ ಉತ್ತರ ಕನ್ನಡ ಜಿಲ್ಲೆ ಗುಡ್ಡಗಾಡು ಪ್ರದೇಶಗಳು ಜಲಪಾತಗಳು ಕಡಲ ತೀರಗಳು ಹಾಗೂ ದ್ವೀಪಗಳನ್ನು ಹೊಂದಿದ್ದು ಪ್ರವಾಸೋದ್ಯಮ ಅಭಿವೃದ್ಧಿಗೆ ಅಪಾರ ಸಾಧ್ಯತೆಗಳಿವೆ ಈ ಹಿನ್ನೆಲೆಯಲ್ಲಿ ಮುರುಡೇಶ್ವರ ಗೋಕರ್ಣ ಹಾಗೂ ಕಾರವಾರ ಕಡಲ ತೀರಗಳಲ್ಲಿ ಜಲಪಾತ ಕ್ರೀಡೆಗಳನ್ನು ಆರಂಭಿಸಲು ಟೆಂಡರಗಳನ್ನು ಕರೆಯಲಾಗಿದ್ದು .

ಅರಣ್ಯ ಪ್ರದೇಶಗಳಲ್ಲಿಯೂ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುತ್ತಿದ್ದು ಇದರ ಮೂಲಕ ಪ್ರವಾಸೋದ್ಯಮವನ್ನು ಮತ್ತಷ್ಟು ಉತ್ತೇಜಿಸಲಗುವುದು ಎಂದು ಹೇಳಿದರು. ಈ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ ಶಾಸಕ ಆರ್ ವಿ ದೇಶಪಾಂಡೆ ಅವರು ಮಾತನಾಡಿ ರಾಜ್ಯದಲ್ಲಿ ಪ್ರವಾಸೋದ್ಯಮವು ಮತ್ತು ಕೈಗಾರಿಕೆಗಳು ಅಭಿವೃದ್ಧಿ ಹೊಂದಿದರೆ ಉದ್ಯೋಗ ಸೃಷ್ಟಿ ಆಗಲಿದೆ ಜೊತೆಗೆ ಸರ್ಕಾರವು ಈ ಇಲಾಖೆಗಳಿಗೆ ಪ್ರಾಧಾನ್ಯತೆ ನೀಡಬೇಕು ನಿರುದ್ಯೋಗ ಮತ್ತು ಬೆಲೆ ಏರಿಕೆ ಸಮಸ್ಯೆ ಹಾಗೂ ಎರಡು ಕ್ಷೇತ್ರಗಳ ಅಭಿವೃದ್ಧಿಯ ಸೂಕ್ತ ಪರಿಹಾರ ನೀಡಲಿದೆ ಹಾಗೂ ಹಳಿಯಾಳದಲ್ಲಿ ನಿರ್ಮಾಣಗೊಂಡ ಈ ಸಮಾವೇಶ ಕೇಂದ್ರ ಕಟ್ಟಡವು ನಿರಂತರವಾಗಿ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಬಳಕೆಯ ಾಗುವಂತಾಗಲಿ ಎಂದರು. ಜಿಲ್ಲಾಧಿಕಾರಿ ಲಕ್ಷ್ಮೀಪ್ರಿಯಾ, ಪ್ರವಾಸೋದ್ಯಮ ಇಲಾಖೆಯ ಉಪನಿರ್ದೇಶಕಿ ಮಂಗಳ ಗೌರಿ ಭಟ್, ಲೋಕೋಪಯೋಗಿ ಕಾರ್ಯನಿರ್ವಾಹಕ ಇಂಜಿನಿಯರ್ ಎಸ್ ಎಸ್ ಸಿದ್ದಾಪುರ, ವಿ ಎಸ್ ಅಥಣಿ ತಹಸಿಲ್ದಾರ್ ಫಿರೋಜ್ ಷಾ ಸೋಮನಕಟ್ಟಿ ತಾ. ಪಂ. ಕಾರ್ಯನಿರ್ವಾಹಕ ಅಧಿಕಾರಿ ವಿಲಾಸ್ ರಾಜ್ ದಾಂಡೇಲಿ ಡಿ ವೈ ಎಸ್ ಪಿ ಶಿವಾನಂದ್ ಮದರ್ ಖಂಡಿ ಮತ್ತಿತರರು ಉಪಸ್ಥಿತರಿದ್ದರು

ಈ ಸಭಾ ಕಾರ್ಯಕ್ರಮದಲ್ಲಿ ಕುದ್ರೋಳ್ಳಿ ಗಣೇಶ್ ಜಾದು ತಂಡದವರಿಂದ ಮ್ಯಾಜಿಕ್ ಮೈಂಡ್ ಮಿಸ್ಟರಿ ಕಾರ್ಯಕ್ರಮ ನಡೆಯಿತು.

# ಬೈಪಾಸ್ ರಸ್ತೆ ಇಲ್ಲದೇ ಟ್ರಾಫಿಕ್ ಜಾಮ್ ಅಪಘಾತಕ್ಕೆ ಕಾರಣ

• ಮಲ್ಲಮ್ಮ ನುಡಿ ವಾರ್ತೆ
ಸಿಂಧನೂರು




ಇಡೀ ರಾಜಧಾನಿ ದೆಹಲಿಯ ವರೆಗೂ ಹೆಸರು ಮಾಡಿರುವ (ತಾಲೂಕು ಮಟ್ಟದಲ್ಲಿ) ಯಾವುದಾದರೂ ತಾಲೂಕು ಇದ್ದರೆ ಅದು ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕು ಎಂದರೆ ತಪ್ಪಾಗಲಾರದು. ರಾಜಕೀಯ ರಣರಂಗದಲ್ಲಿ ಸಹ ಜನಪ್ರತಿನಿಧಿಗಳು ತಮ್ಮದೇ ಆದಂತಹ ಛಾಪನ್ನು ಮೂಡಿಸಿ. ಶಾಸಕರು. ಸಂಸದರು. ಎಂಎಲ್ಸಿ. ಹಾಗೂ ಸಚಿವರಾಗಿದ್ದು ಸಿಂಧನೂರು ತಾಲೂಕಿನ ಒಂದು ಇತಿಹಾಸದ ಪುಟಗಳಲ್ಲಿ ದಾಖಲಾಗಿದೆ

ಇಷ್ಟೆಲ್ಲಾ ಪಡೆದುಕೊಂಡು ಸ್ಥಳೀಯ ಜನಪ್ರತಿನಿಧಿಗಳು ನಗರದಲ್ಲಿ ಗ್ರಾಮೀಣ ಪ್ರದೇಶ ರಸ್ತೆಗಳಲ್ಲಿ (ಮೂರು ಕಡೆ )ರಸ್ತೆಗಳನ್ನು ಟ್ರಾಫಿಕ್ ಜಾಮ್ ಮುಕ್ತ ಮಾಡದೇ ಇರುವುದರಿಂದ. ಬೈಪಾಸ್ ರಸ್ತೆ ಇಲ್ಲದೇ...? ನಗರದ ರಸ್ತೆಯಲ್ಲಿ ಅಪಘಾತಗಳು ಹೆಚ್ಚಾಗುತ್ತಿರುವುದು ಅದರಲ್ಲಿ ಅಮಾಯಕರ ಯುವಕರು ಪ್ರಾಣಗಳೇ ಬಲಿಯಾಗುತ್ತಿರುವುದು ಎಂದು ಸಾರ್ವಜನಿಕರು ದೂರವಾಗಿದೆ ಸಿಂಧನೂರು ತಾಲೂಕ ದೊಡ್ಡ ವಾಣಿಜ್ಯ ನಗರವಾಗಿ ಬೆಳೆದಿದೆ ಆದರೆ ನಗರದ ರಸ್ತೆಗಳು ಮಾತ್ರ ಅಭಿವೃದ್ಧಿ ಆಗುತ್ತಿಲ್ಲ. ಓದು ವಾರ ದಿನದಂದು ಬಸ್ ನಿಲ್ದಾಣದ ಬಳಿ ಬಿದಿ ವ್ಯಾಪಾರಸ್ಥರು ಬಂಡೆಗಳ ಆಟೋ ರಿಕ್ಷಾ ಬೈಕ್ ಸವಾರರು ಹೆಚ್ಚಾಯಾಗಿ ಇದ್ದುದರಿಂದ ಟ್ರಾಫಿಕ್ ಜಾಮ್ ಯಾಗಿ ಕಾರಟಗಿ ಪಟ್ಟಣದ ಬೇವಿನಾಳ ಗ್ರಾಮದ ಮಹಿಳಾ ಮೇಲೆ ಬಸ್ ಹರಿದು ಸ್ಥಳದಲ್ಲಿ ಸಾವನ್ನಪ್ಪಿದ್ದು ಎಷ್ಟೆಷ್ಟೋ ಉದಾಹರಣೆಗಳು ನಮ್ಮ ಕಣ್ಣು ಮುಂದೆಯೇ ಅಪಘಾತಗಳು ಸಂಭವಿಸಿವೆ ಎಂದು ಸಾರ್ವಜನಿಕರು ಹೋಟೆಲ್ ನಲ್ಲಿ ಕುಳಿತು ಮಹತ್ವದ ವಿಷಯಗಳ ಮಾತನಾಡುತ್ತಿರುವುದು

ಅಪಘಾತಕ್ಕೆ ಕಾರಣಗಳು*. ತಾಲೂಕಿನಲ್ಲಿ ಯಾವುದೇ ಬೈಪಾಸ್ ರಸ್ತೆ ಇಲ್ಲದೇ. ದೊಡ್ಡ ದೊಡ್ಡ ವಾಹನಗಳು ರಸ್ತೆಯಲ್ಲಿ ಸುರಕ್ಷಿತ ಇಲ್ಲದೆ... ವಾಹನಗಳು ನಗರದ ಒಳಗೆ ಬರುವುದರಿಂದ ರಸ್ತೆಯಲ್ಲಿ ಟ್ರಾಫಿಕ್ ಜಾಮ್ ಯಾಗಿ ಅಪಘಾತಗಳು ಸಂಭವಿಸುತ್ತಿವೆ ಕಾರಣ ಮತ್ತು ಕುಷ್ಟಗಿ ಮಾರ್ಗ ಬಸ್ ನಿಲ್ದಾಣ ಬಳಿ ನಾಲ್ಕು ರಸ್ತೆಯಲ್ಲಿ ಯಾವುದೇ ಹಂಸ ಇಲ್ಲದೆ ನಾಲ್ಕು ಕಡೆ ಒಂದು ಬಾರಿ ವಾಹನಗಳು ಚಲಿಸುವ ಸಂದರ್ಭದಲ್ಲಿ ಕಾರಟಗಿ ಪಟ್ಟಣದ ಬೇವಿನಾಳ ಗ್ರಾಮದ ಮಹಿಳಾ ಗೆ ಬಸ್ ಡಿಕ್ಕಿ ಓಡಿದು ಸ್ಥಳದಲ್ಲಿ ಸಾವನ್ನಪ್ಪಿದ್ದು.

ಅಪಘಾತಕ್ಕೆ ಅವಸರವೇ ಕಾರಣ!

ಆದರೆ ಆಫಘಾತಕ್ಕೆ ಅದರದೇ ನೂರಾರು ಕಾರಣಗಳಿವೆ* ಮಸ್ಕಿ ರಸ್ತೆ ಹಾಗೂ ಗಂಗಾವತಿ. ಕುಷ್ಟಗಿ ಎಲ್ಲಾ ರಸ್ತೆಯಲ್ಲಿ ಟ್ರಾಫಿಕ್ ಸಿಗ್ನಲ್ ಇಲ್ಲದೆ...? ಸಿಸಿ ಕ್ಯಾಮೆರಾ ಇಲ್ಲದೇ.? ಇಂತಹ ಅನಾಹುತಗಳು. ಮಸ್ಕಿ ರಸ್ತೆಯಲ್ಲಿ ನಿನ್ನೆ ಐದು ಯುವಕರು ಅಪಘಾತದಲ್ಲಿ ಮೃತಪಟ್ಟರು. ಒಂದು ತಿಂಗಳ ಹಿಂದೆ ಡಿಎಸ್ ಮುಖಂಡ ಸಾವನ್ನಪ್ಪಿದ್ದು ಮಾಸಿಲ್ಲ.

ಯುವಕರು ಮದ್ಯಪಾನ ಮತ್ತು ಮಾದಕ ವಸ್ತುಗಳನ್ನು ಸೇವನೆ ಮಾಡುವುದು, ಸರಿಯಾದ ಚಾಲನೆ ಬರಲಾರದೆ ವಾಹನ ಓಡಿಸುವುದು. ಆರ್ ಟಿಓ ಸೂಕ್ತ ಪರಿಶೀಲನೆ ನಡಿಸದೆ ಇರುವುದು ಕಾರಣವಿರಬಹುದು. ಹಾಗೆಯೇ ರಸ್ತೆಯಲ್ಲಿ ಲೈಸೆನ್ಸ್ ಇಲ್ಲದೆ ಅಡ್ಡಾದಿಡ್ಡಿ ವಾಹನಗಳು ಚಲಾಯಿಸುವುದು. ಅಪಘಾತಕ್ಕೆ ಕಾರಣ. ಸಿಂಧನೂರಿನಲ್ಲಿ ಯುವಕರು ಮಾದಕ ವಸ್ತುಗಳನ್ನು ಸೇವನೆ ಸಿಂಧನೂರಲ್ಲಿ ಮೀತಿ ಮೀರಿದೆ. ತಡೆಯುವ ಅಧಿಕಾರಿಗಳೇ ಮೌನಕ್ಕೆ ಜಾರಿದಾಗ ತಡೆಯುವವರು ಯಾರು? ಪ್ರಶ್ನೆ..ಎಂದು ಎಂ. ಗಂಗಾಧರ್ ರಾಜ್ಯ ಸಮಿತಿ ಸದಸ್ಯರು ಸಿಪಿಐ(ಎಂಎಲ್) ರೆಡ್ ಸ್ಟಾರ್ ಹೇಳಿದ್ದರು.



ಕೇರಳ ಪ್ರವಾಸ ದಲ್ಲಿರುವ ಸಚಿವ ಜಮೀರ್ ಅಹಮದ್ ಖಾನ್ ಅವರು ಮಲ್ಲಪುರಂ ನಲ್ಲಿ ಮದಿ ನಾ ಶಿಕ್ಷಣ ಸಂಸ್ಥೆಗೆ ಭೇಟಿ ನೀಡಿ ಸೈಯದ್ ಖಲೀಲ್ ತಂಗಳ್ ಅವರನ್ನು ಭೇಟಿ ಮಾಡಿ ಸಮಾಲೋಚನೆ ನಡೆಸಿ ಅಲ್ಲಿನ ವಿದ್ಯಾರ್ಥಿಗಳ ಜತೆ ಸಂವಾದ ನಡೆಸಿ ತಂಗಳ್ ಅವರ ನೇತೃತ್ವದಲ್ಲಿ ಸಂಸ್ಥೆಯ ಸೇವೆ ಬಗ್ಗೆ ಮೆಚ್ಚುಗೆ ವ್ಯಕ್ತ ಪಡಿಸಿದರು. ಇದೇ ಸಂದರ್ಭದಲ್ಲಿ ಸಚಿವರನ್ನು ತಂಗಳ್ ಅವರು ಗೌರವಿಸಿದರು



ಕಮಲನಗರ: ಬಗದಲ ಪೊಲೀಸ ಠಾಣೆಯ ವ್ಯಾಪ್ತಿಯಲ್ಲಿ ಕಳೆದುಹೋದ ಮೊಬೈಲ ಫೋನ್ ಅನ್ನು ಸಿಇಐಆರ್ ಪೋರ್ಟಲ ಮೂಲಕ ಪತ್ತೆ ಹಚ್ಚಿ ವಾರಸುದಾರರಿಗೆ ಇಂದು ಉಪ ನಿರೀಕ್ಷಕರಾದ ಕಿರಣ ಧೋತ್ರೆ ಅವರು ಫೋನ್ ವಿತರಿಸಿದರು,



ಕಮಲನಗರ:ತಾಲೂಕಿನ ಮುಧೋಳ(ಬಿ) ಗ್ರಾಮದಲ್ಲಿ ಮಹಾದೇವ ಜಾತ್ರಾ ಮಹೋತ್ಸವ ನಿಮಿತ್ಯ ಮಲ್ಲಮ್ಮ ನುಡಿ ಪತ್ರಿಕೆಯಲ್ಲಿ ವಿಶೇಷ ಲೇಖನ ಮತ್ತು ಯುಗಾದಿ ವಿಶೇಷಾಂಕವನ್ನು ಪಿ.ಕೆ.ಪಿ.ಎಸ್ ಅಧ್ಯಕ್ಷರಾದ ಗುರುನಾಥ ವಟಗೆ ಮತ್ತು ಮಹಾದೇವ ಮಂದಿರ ಆಡಳಿತ ಮಂಡಳಿ ಸದಸ್ಯರ ಸಮ್ಮುಖದಲ್ಲಿ ಬಿಡುಗಡೆ ಮಾಡಲಾಯಿತು.

# ಮೊಬೈಲ್ ಮರೆತು ಪುಸ್ತಕ ಹಿಡಿಯಿರಿ ಅಮರಗನ್ನಡ ಕಾರ್ಯಕ್ರಮದಲ್ಲಿ ಓದು ಜಾಗೃತಿ

• ಮಲ್ಲಮ್ಮ ನುಡಿ ವಾರ್ತೆ
ಹುಣಸಗಿ



ಪಟ್ಟಣದ ವಿಕ್ರಮಪುರ ಓದುಗರ ಬಳಗದ ವತಿಯಿಂದ ಕನ್ನಡಮ್ಮ ಭುವನೇಶ್ವರಿ ದೇವಿಗೆ ಪುಷ್ಪಾರ್ಚನೆ ಸಲ್ಲಿಸಿ 'ಅಮರಗನ್ನಡ' ಕಾರ್ಯಕ್ರಮವನ್ನು ವಿಜೃಂಭಣೆಯಿಂದ ನಡೆಸಲಾಯಿತು.

ಶ್ರೀ ನೀಲಕಂಠೇಶ್ವರ ಪೂರ್ವ ಪ್ರಾಥಮಿಕ ಶಾಲೆಯಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಸಾಹಿತ್ಯಾಸಕ್ತರು, ಶಿಕ್ಷಕರು ಹಾಗೂ ಗಣ್ಯರು ಭಾಗವಹಿಸಿ ಓದು ಸಂಸ್ಕೃತಿಯ ಮಹತ್ವವನ್ನು ಒತ್ತಿಹೇಳಿದರು. ಆರಂಭದಲ್ಲಿ ಇರಸಂಗಮ್ಮ ಅಪ್ಪಗೋಳ ಸ್ವಾಗತ ಗೀತೆ ಹಾಡಿದರೆ, ಬಸನಗೌಡ ಬಿರಾದಾರ ಸ್ವಾಗತ ಭಾಷಣ ಮಾಡಿದರು. ಬಸಣ್ಣ ಗೊಡ್ರಿ, ಬಸನಗೌಡ ಪೊಲೀಸ್ ಪಾಟೀಲ, ವೆಂಕಟಗಿರಿ ದೇಶಪಾಂಡೆ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಬಲಶೆಟ್ಟಿಹಾಳದ ಪರಮ ಪೂಜ್ಯ ಸಿದ್ದಲಿಂಗದೇವರು ಆಶೀರ್ವಚನ ನೀಡಿ 'ಅಮರಗನ್ನಡ' ಕೃತಿಯ ನಾಲ್ಕು ನುಡಿಗಳನ್ನು ವಾಚಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಪ್ರಾಸ್ತಾವಿಕವಾಗಿ ಮಹೇಶ ಸ್ಥಾವರಮಠ ಮಾತನಾಡಿ, ಕನ್ನಡವು ಭಾರತದ ಶ್ರೀಮಂತ ಭಾಷೆಗಳಲ್ಲೊಂದು ಎಂದು ಹೇಳಿ, ಓದುಗರ ಬಳಗದ ಕಾರ್ಯಕ್ರಮಗಳನ್ನು ಪ್ರತಿತಿಂಗಳು ನಡೆಸುವ ಉದ್ದೇಶವಿದೆ ಎಂದರು. ಇಂದಿನ ಪೀಳಿಗೆಗೆ ಮೊಬೈಲ್ ಬದಲು ಪುಸ್ತಕ ನೀಡುವ ಮೂಲಕ ಓದುವ ಹವ್ಯಾಸ ಬೆಳೆಸಬೇಕು ಎಂದು ಕರೆ ನೀಡಿದರು. ಪುಸ್ತಕಗಳು ಮನಸ್ಸಿಗೆ ಶಾಂತಿ ನೀಡುವ ಶಕ್ತಿಯನ್ನು ಹೊಂದಿವೆ ಎಂದರು.

ಈ ವೇಳೆ 'ಅಮರಗನ್ನಡ' ಕೃತಿಯ ಪ್ರಧಾನ ಸಂಪಾದಕರಾದ ಬಸನಗೌಡ ಪೊಲೀಸ್ ಪಾಟೀಲ ದಂಪತಿಗಳನ್ನು ಸನ್ಮಾನಿಸಲಾಯಿತು. ಬಳಿಕ ಮಾತನಾಡಿದ ಅವರು, ಐತಿಹಾಸಿಕ ಮತ್ತು ಸಾಹಿತ್ಯ ಕೃತಿಗಳು ಸಮಾಜದಲ್ಲಿ ಜಾಗೃತಿ ಮೂಡಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ ಎಂದು ಅಭಿಪ್ರಾಯಪಟ್ಟರು.

ಪ್ರಕಾಶ್ ಅಂಗಡಿ ಮಾತನಾಡಿ "ಹಣತೆ ಹಚ್ಚುತ್ತೇನೆ, ಕತ್ತಲೆಯನ್ನು ಗೆಲ್ಲುತ್ತೇನೆ" ಎಂಬ ಸಂದೇಶದ ಮೂಲಕ ಓದಿನ ಅಗತ್ಯತೆಯನ್ನು ಮನವರಿಕೆ ಮಾಡಿಸಿದರು. ಒಂದು ಪ್ರದೇಶದ ಇತಿಹಾಸ ತಿಳಿಯಲು ಪುಸ್ತಕಗಳು ಅತ್ಯಗತ್ಯವೆಂದರು.

ಕನ್ನಡ ಸಾಹಿತ್ಯ ಪರಿಷತ್ ಯಾದಗಿರಿ ಜಿಲ್ಲಾ ಅಧ್ಯಕ್ಷ ಸಿದ್ದಪ್ಪ ಹೊಟ್ಟಿ ಸಾಹಿತ್ಯ ಚಟುವಟಿಕೆಗಳು ಸಮಾಜದ ಅಭಿವೃದ್ಧಿಗೆ ಪೂರಕವೆಂದು ಹೇಳಿದರು. ಯಂಕನಗೌಡ ಶಿಕ್ಷಕರು ಇಂದಿನ ಭೌತಿಕ ಯುಗದಲ್ಲಿ ಓದು ಮತ್ತು ಸಂಶೋಧನೆ ಅತ್ಯವಶ್ಯಕವೆಂದು ತಿಳಿಸಿದರು. ನಮ್ಮ ಸಾಹಿತ್ಯ, ಸಂಸ್ಕೃತಿ ಹಾಗೂ ಪರಂಪರೆಯನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ಜವಾಬ್ದಾರಿ ನಮ್ಮದೆ ಎಂದರು.

ಹುಣಸಗಿ ತಾಲೂಕು ಕಸಾಪ ಅಧ್ಯಕ್ಷ ವೆಂಕಟಗಿರಿ ದೇಶಪಾಂಡೆ ತಾಲೂಕಿನ ವೈಭವ ಹಾಗೂ ಸಾಹಿತ್ಯ ಪರಂಪರೆಯ ಮಹತ್ವವನ್ನು ವಿವರಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬಸವರಾಜ ವೈಲಿ ವಹಿಸಿದ್ದರು. ಕೊಡೇಕಲ್ ವಲಯ ಕಸಾಪ ಅಧ್ಯಕ್ಷರು ಸೇರಿದಂತೆ ಹಲವರು ಉಪಸ್ಥಿತರಿದ್ದರು. ದೇವರಾಜ ಕುಲಕರ್ಣಿ ನಿರೂಪಣೆ ಮಾಡಿದರು. ನಾಗರಾಜ ಸೂಗೂರು ವಂದನಾರ್ಪಣೆ ಸಲ್ಲಿಸಿದರು.

# ಸ್ವಚ್ಛತೆಗೆ ಮೊದಲ ಆದ್ಯತೆ ಕೊಡಿ : ದೇಶಪಾಂಡೆ



• ಮಲ್ಲಮ್ಮ ನುಡಿ ವಾರ್ತೆ ,ಹಳಿಯಾಳ

ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಸ್ವಚ್ಛತಾ ಅಭಿಯಾನ ಕಾರ್ಯಕ್ರಮವು ಯಶಸ್ವಿಯಾಗಿ ನಡೆಯುತ್ತಿದ್ದು ಇದರಲ್ಲಿ ಸಾರ್ವಜನಿಕರ ಸಹಕಾರ ಮತ್ತು ಬೆಂಬಲ ನೀಡಿರುವುದಕ್ಕೆ ಮೊದಲನೆಯದಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಎಂದು ತಿಳಿಸಿದರು.

ಹಳಿಯಾಳ: ಇಂದು ತಮ್ಮ ಸ್ವ ಗೃಹದಲ್ಲಿ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಹಳಿಯಾಳ ದಾಂಡೇಲಿ ಜೋಯಿಡಾ ವಿಧಾನಸಭಾ ಕ್ಷೇತ್ರದ ಶಾಸಕರಾದ ಆರ್ ವಿ ದೇಶಪಾಂಡೆ ಅವರುನನ್ನ ಕ್ಷೇತ್ರದಲ್ಲಿ ಯಾವತ್ತು ಸ್ವಚ್ಛತೆಗೆ ಮೊದಲ ಆದ್ಯತೆ ನೀಡುತ್ತಿದ್ದು ಇದು ಕರ್ನಾಟಕ ರಾಜ್ಯದಲ್ಲಿ ಸ್ವಚ್ಛ ಹಳಿಯಾಳ ಎಂಬ ಹೆಗ್ಗಳಿಕೆಗೂ ಕೂಡ ಪಾತ್ರವಾಗಿದೆ ಇದು ಹೆಮ್ಮೆಯ ವಿಷಯ ನಾಳೆಯಿಂದ ದಾಂಡೇಲಿ ಮತ್ತು ಜೋಳ ತಾಲೂಕುಗಳಲ್ಲಿ ಪಟ್ಟಣ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಕೂಡ ಸ್ವಚ್ಛತಾ ಅಭಿಯಾನ ಕಾರ್ಯಕ್ರಮವು ನಡೆಯಲಿದೆ ಎಂದರು.

ಅದೇ ರೀತಿ ನನ್ನ ಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯವು ಕೂಡ ಗಣನೀಯವಾಗಿದೆ ಎಂದು ಮಾಧ್ಯಮಕ್ಕೆ ತಿಳಿಸುವ ಮುಖಾಂತರ ಹಳಿಯಾಳ ತಾಲೂಕ ಪಂಚಾಯತ್ ಕರ್ನಾಟಕ ರಾಜ್ಯದಲ್ಲಿ 99.18 ರಷ್ಟು ಸಂಗ್ರಹಣೆ ಹೊಂದಿದೆ ಹಾಗೂ ಪ್ರಥಮ ಸ್ಥಾನ ಪಡೆದಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ತಾಲೂಕಿನ ಎಲ್ಲಾ ವಸತಿ ನಿಲಯಗಳು ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸುವ ಉದ್ದೇಶಕ್ಕಾಗಿ ಹಳಿಯಾಳದಲ್ಲಿ ಬಾಲಕಿಯರ ವಸತಿ ನಿಲಯ ಕಟ್ಟಡದ ಮಂಜೂರು ಮಾಡಲು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರಾದ ಮಾನ್ಯ ಶ್ರೀ ಶಿವರಾಜ ತಂಗಡಗಿ ಅವರಿಗೆ ಕೂಡ ವಿನಂತಿ ಮಾಡಲಾಗಿದ್ದು ಅದೇ ರೀತಿ ಪ್ರವಾಸೋದ್ಯಮ ಇಲಾಖೆಯ ಸಚಿವರಾದ ಎಚ್ ಕೆ ಪಾಟೀಲ್ ಅವರಿಗೆ ಪ್ರವಾಸೋದ್ಯಮ ಕ್ಷೇತ್ರಗಳ ಅಭಿವೃದ್ಧಿಗೆ ಅನುದಾನ ಬಿಡುಗಡೆ ಮಾಡಲು ಮನವಿ ಮಾಡಲಾಗಿದ್ದು ಈಗಾಗಲೇ ಹಳಿಯಾಳದ ಮುರಡಿಗುಡ್ಡ ಉದ್ಯಾನವನ ಮತ್ತು ಜ್ವರದಲ್ಲಿ ಜೋಯಿಡಾದಲ್ಲಿ ಜೀಪ್ ಲೈನ್ ಅಳವಡಿಕೆಗಾಗಿ ಒಂದು ಕೋಟಿ ಹಾಗೂ ಸಿಂಥೇರಿ ರಾಕ್ ಪ್ರವಾಸಿ ತಾಣದ ಅಭಿವೃದ್ಧಿಗೆ 50 ಲಕ್ಷ ಜೊಯಿಡಾ ಕ್ಯಾಸರ್ ಲಾಕ್ ನೈಸರ್ಗಿಕ ತಾಣದ ಅಭಿವೃದ್ಧಿಗಾಗಿ 50 ಲಕ್ಷ ಮಂಜೂರಿ ಮಾಡಲಾಗಿದ್ದು ಇದು ನಮ್ಮ ಕ್ಷೇತ್ರದ ಅಭಿವೃದ್ಧಿಗೆ ಮುನ್ನಡೆಯಾಗಿದೆ ಎಂದು ತಿಳಿಸಿದರು.

# ಸಿಡಿಲು ಬಡಿದು ಎಮ್ಮೆ ಸಾವು



• ಮಲ್ಲಮ್ಮ ನುಡಿ ವಾರ್ತೆ, ಬೀದರ

ತಾಲೂಕಿನ ಯದಲಾಪುರ ಗ್ರಾಮದಲ್ಲಿ ಸಿಡಿಲು ಬಡಿದು ಎಮ್ಮೆ ಸಾವು ಸಂಭವಿಸಿದ ದುರ್ಘಟನೆ ನಡೆದಿದೆ. ಇಂದು ಮಧ್ಯಾಹ್ನ ಗುಡುಗು–ಸಿಡಿಲಿನ ಸಂದರ್ಭದಲ್ಲಿ ಹೊಲದಲ್ಲಿ ಕಟ್ಟಿ ಹಾಕಿದ ಎಮ್ಮೆ ಮೇಲೆ ಸಿಡಿಲು ಬಡಿದ ಪರಿಣಾಮ ಅದು ಸ್ಥಳದಲ್ಲೇ ಸಾವನ್ನಪ್ಪಿದೆ, ರೈತನಾದ ಉಮೇಶ್ ಬಸವರಾಜ ಕೊಡುಗೆ ಎಂಬ ರೈತನಿಗೆ ಸೇರಿದ ಎಮ್ಮೆ ಯಾಗಿದೆ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಹಾಗು ಶಾಸಕರ ಆಪ್ತರ ಗಮನಕ್ಕೆ ತರಲಾಗಿದೆ ಎಂದು ಗ್ರಾಮಸ್ಥರು ತಿಳಿಸಿದ್ದಾರೆ,

# ಕಬ್ಬು ಬಿಲ್ಲು ಪಾವತಿಸಬೇಕೆಂದು ಒತ್ತಾಯ




• ಮಲ್ಲಮ್ಮ ನುಡಿ ವಾರ್ತೆ
ಕಮಲನಗರ

ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ತಾಲೂಕ ಘಟಕ ಪದಾಧಿಕಾರಿಗಳ ನೇತೃತ್ವದಲ್ಲಿ ಕಬ್ಬು ಬಿಲ್ಲು ಪಾವತಿಸಬೇಕೆಂದು ಒತ್ತಾಯಿಸಿ ತಹಶೀಲ್ದಾರ್ ಅಮಿತಕುಮಾರ ಕುಲಕರ್ಣಿ ಅವರಿಗೆ ಮನವಿ ಪತ್ರ ಸಲ್ಲಿಸಲಾಯಿತು.

ರೈತ ಸಂಘ ತಾಲೂಕು ಘಟಕ ಅಧ್ಯಕ್ಷ ಪ್ರವೀಣ ಕುಲಕರ್ಣಿ ಮಾತನಾಡಿ, ರೈತ ಬಾಂಧವರೂ ತಮ್ಮ ಕಬ್ಬು ಸಾಗಟ ಮಾಡಿ 2 ತಿಂಗಳಾದ್ರೂ ಕಬ್ಬು ಸಾಗಣೆ ಬಿಲ್ಲು ಪಾವತಿಯಾಗಿಲ್ಲದಿರುವುದು ದುಖ:ಕರದ ಸಂಗತಿಯಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಸರ್ಕಾರ ನಿಯಮ ಪ್ರಕಾರ ಕಬ್ಬು ಪೂರೈಕೆ ಮಾಡಿದ 15 ದಿನಗಳ ಒಳಗಾಗಿ ಬಿಲ್ ಪಾವತಿ ಮಾಡುವ ನಿಯಮವಿದೆ. ಆದರೆ, ಸರ್ಕಾರ ನಿಯಮ ಪಾಲನೆ ಮಾಡದಿರುವುದರಿಂದಾಗಿ ಆಕ್ರೋಶಕ್ಕೆ ಕಾರಣವಾಗಿದೆ ಎಂದರು.

ಮುಂದಿನ 10 ದಿನಗಳ ಒಳಗಾಗಿ ಕಬ್ಬಿನ ಬಿಲ್ ಪಾವತಿ ಮಾಡದೇ ಇದ್ದಲ್ಲಿ ರಸ್ತೆಗಿಳಿದು ಪ್ರತಿಭಟನೆ ನಡೆಸುವುದಾಗಿ ಸಂಘಟನೆ ಪ್ರಮುಖರು ಎಚ್ಚರಿಸಿದ್ದಾರೆ.

ರೈತ ಸಂಘ ಗೌರವಧ್ಯಕ್ಷ ವೈಜನಾಥ ವಡ್ಡೆ, ರೈತ ಸಂಘ ತಾಲ್ಲೂಕು ಘಟಕ ಅಧ್ಯಕ್ಷ ಪ್ರವೀಣ ಕುಲಕರ್ಣಿ,

ಕಾರ್ಯದರ್ಶಿ ವಿಠ್ಠಲರಾವ ಪಾಟೀಲ, ನಗರ ಅಧ್ಯಕ್ಷ ರತಿ–ಕಾಂತ ಶಿವಣಕರ, ಉಪಾಧ್ಯಕ್ಷ ಮನೋಜ ಪೊಲೀಸ್ ಪಾಟೀಲ, ಕಾರ್ಯದರ್ಶಿ ಧನರಾಜ ವರಾ, ವಿಜಯಕುಮಾರ ಪ್ರಭುರಾವ, ರಾಜಕುಮಾರ ವಡಗಾಂವೆ, ನೀಲಾಂಬಿಕಾದೇವಿ ಗಳಗೆ, ಉಮಾಕಾಂತ ಬಚ್ಚಣ್ಣಾ ಸೇರಿದಂತೆ ಇನ್ನಿತರ ಇದ್ದರು.

# ಧರ್ಮಸ್ಥಳ: ವಾತ್ಸಲ್ಯ ಮನೆ ಹಂಚಿಕೆ



• ಮಲ್ಲಮ್ಮ ನುಡಿ ವಾರ್ತೆ
ಕುಕನೂರ

ಶ್ರೀಕ್ಷೇತ್ರಧರ್ಮಸ್ಥಳಗ್ರಾಮಾಭಿವೃದ್ಧಿ ವಿನಯ ವತಿಯಿಂದ ಕುಕನೂರು ತಾಲೂಕಿನ ಇಟಗಿ ವಲಯದ ಸಿದ್ನೆಕೊಪ್ಪ ಗ್ರಾಮದಲ್ಲಿ ಶಿವಪ್ಪ ಅವರಿಗೆ ವಾತ್ಸಲ್ಯ ಮನೆ ಹಸ್ತಾಂತರ ಮಾಡಲಾಯಿತು.


ವಸತಿರಹಿತರಿಗೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮ ಅಭಿವೃದ್ಧಿ ಯೋಜನೆಯ ವತಿಯಿಂದ ಸೂರು ಕಲ್ಪಿಸಿ ಕೊಡುವ ನಿಟ್ಟಿನಲ್ಲಿ ಪ್ರಾರಂಭವಾಗಿರುವ ವಾತ್ಸಲ್ಯ ಯೋಜನೆಯ ಅಡಿಯಲ್ಲಿ ಸಿದ್ನೆಕೊಪ್ಪ ಗ್ರಾಮದ ಶಿವಪ್ಪ ಎಂಬುವರಿಗೆ ನಿರ್ಮಾಣಗೊಂಡಿದ್ದ ವಾತ್ಸಲ್ಯ ಮನೆ ಗ್ರಹಪ್ರವೇಶ ಕಾರ್ಯಕ್ರಮವನ್ನು ಕಲ್ಯಾಣ ಕರ್ನಾಟಕದ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯ ಪ್ರಾದೇಶಿಕ ನಿರ್ದೇಶಕ ಚಂದ್ರಶೇಖರ್ ಉದ್ಘಾಟಿಸಿ ಫಲಾನುಭವಿಗೆ ಮನೆ ಹಸ್ತಾಂತರ ಮಾಡಲಾಯಿತು. ಧರ್ಮಸ್ಥಳ ಸಂಸ್ಥೆಯ ರೂವಾರಿಗಳಾದ ವೀರೇಂದ್ರ ಹೆಗ್ಗಡೆಯವರ ನಿರ್ದೇಶನದಂತೆ ವಸತಿ ರಹಿತರಿಗೆ ಸೂರು ಕಲ್ಪಿಸುವ ಉದ್ದೇಶವನ್ನು ಹೊಂದಿದ್ದು ಅದರಂತೆ ಗ್ರಾಮದ ಫಲಾನುಭವಿಗೆ ಇಂದು ಮನೆಯನ್ನು ಹಸ್ತಾಂತರಿಸಲಾಯಿತು ಅರ್ಹರು ಈ ಯೋಜನೆಯ ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಕರೆ ನೀಡಿದರು.

ಈ ವೇಳೆಯಲ್ಲಿ ತಾಲೂಕ ಯೋಜನಾಧಿಕಾರಿ ಗಣೇಶ್, ಗ್ರಾಮದ ಪ್ರಮುಖರು, ಸ್ವಸಹಾಯ ಸಂಘದ ಸರ್ವ ಸದಸ್ಯರು, ವಲಯದ ಮೇಲ್ವಿಚಾರಕರು, ಜ್ಞಾನವಿಕಾಸ ಮೇಲ್ವಿಚಾರಕರು ಹಾಗೂ ಗ್ರಾಮದ ಗುರು ಹಿರಿಯರು ಯುವಕ ಮಿತ್ರರು ಪಾಲ್ಗೊಂಡಿದ್ದರು

# ಅಧ್ಯಕ್ಷ ಉಪಾಧ್ಯಕ್ಷ ಆಯ್ಕೆ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ನಗರದ ಕೌಲ್ಬಜಾರ್ ನ ಜಗದೀಶ ಮಂದಿರದಲ್ಲಿ ನಿನ್ನೆ ಸಂಜೆ ನಡೆದ ಬಳ್ಳಾರಿ ಜಿಲ್ಲಾ ಮೋಚಿಗಾರ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರ ಸಭೆ ನಡೆಯಿತು. ಸಭೆಯಲ್ಲಿ ಸಂಘಕ್ಕೆ ನೂತನ ಪದಾಧಿಕಾರಗಳ ಆಯ್ಕೆ ಸರ್ವಾನುಮತದಿಂದ ನಡೆಯಿತು.ಗೌರವಾಧ್ಯಕ್ಷರಾಗಿ ಎಸ್.ಮಲ್ಲಿಕಾರ್ಜುನ ಮತ್ತು ಕೆ. ಈರಣ್ಣ, ವಿ. ಅಯಿಲ್ ಕ್ರಿಷ್ಣ ಜಿಲ್ಲಾಧ್ಯಕ್ಷರಾಗಿ, 1ನೇ ವಾರ್ಡ್ ಪಾಲಿಕೆ ಸದಸ್ಯ ಹನುಮಂತ ಗುಡಿಗಂಟಿ ಮತ್ತು ಕೆ.ಶಿವಪ್ರಸಾದ್ ಇವರನ್ನು ಉಪಾಧ್ಯಕ್ಷರುಗಳನ್ನಾಗಿ, ಪಿ. ನಾಗೇಂದ್ರ ಮತ್ತು ಕೆ.ಪ್ರಕಾಶ್ ಇವರನ್ನು ಸಹ ಕಾರ್ಯದರ್ಶಿಗಳನ್ನಾಗಿ, ಕೆ. ರವಿ ರವರನ್ನು ಖಜಾಂಚಿಯಾಗಿ, ಕಾರ್ಯಕಾರಿ ಸಮಿತಿ ಸದಸ್ಯರುಗಳನ್ನಾಗಿ, ಕೆ. ಜಯಣ್ಣ, ಎನ್. ಹರಿ, ವಿ.ಶ್ರೀನಿವಾಸುಲು, ಕೆ.ಶಶಿಧರ್, ವಿ. ಶಿವಪ್ರಸಾದ್, ರಾಮಕೃಷ್ಣ ಎಚ್. ಕಿರಣ್ ಕುಮಾರ್, ವಿ.ಶಾಂತಿಭೂಷಣ, ಕೆ.ಟಿ.ಸುರೇಶ, ಕೆ.ರಾಜೇಶ್, ಕೆ. ರಘು, ವಿ. ರಮೇಶ್, ಇವರನ್ನು ಆಯ್ಕೆ ಮಾಡಲಾಗಿದೆ ಎಂದು ನೂತನ ಕಾರ್ಯದರ್ಶಿ ವಿ.ಸೂರ್ಯ ಪ್ರಕಾಶ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮಕ್ಕಳ ಮನಸ್ಸು ಅರಿತು ಭೋಧೀಸುವುದೇ ಶಿಕ್ಷಣ



• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ನಗರದ ಸಂಗನಕಲ್ಲು ರಸ್ತೆಯಲ್ಲಿರುವ ಶಂಕರ ಮಠದ ಸಭಾಂಗಣದಲ್ಲಿ ಮಾ.28 ರಂದು ಸಂಜೆ ನಡೆದ ಶಿಕ್ಷಣ ತಜ್ಞ ಗುರುರಾಜ್ ಕರಜಗಿ ಅವರ ಪ್ರೇರಣದಾಯಕ ಮಾತುಗಳು ನೆರೆದ ಶಿಕ್ಷಕ ಸಮುದಾಯವನ್ನು ಮನಸೂರೆಗೊಂಡವು.

ಶಿಕ್ಷಕರು ಹೇಗಿರಬೇಕು. ಅವರ ಪಾಠ ಇಂದಿನ ಮಕ್ಕಳ ಮನಸ್ಸನ್ನು ತಿದ್ದುವಲ್ಲಿ ಹೇಗೆ ಪರಿಣಾಮ ಬೀರಬೇಕು ಎಂಬುದನ್ನು ತಿಳಿಸಿಕೊಟ್ಟರು.

ರಾಜ್ಯ ಸಂಚಾಲಕ ಶಂಕರ ತತ್ವ ಪ್ರಚಾರ ಅಭಿಯಾನದ ತೇಜ ಶಂಕರ ಸೋಮಯಾಜೀ, ಶೃಂಗೇರಿ ಶಾರದಾ ಪೀಠದ ಉತ್ತರ ಕರ್ನಾಟಕ ಭಾಗದ ವಿಶೇಷ ಪ್ರತಿನಿಧಿ ದತ್ತಪ್ಪಯ್ಯ ಸ್ವಾಮೀಜಿ ಉಪಸ್ಥಿತರಿದ್ದರು. ಅಹಂ ಬ್ರಹ್ಮಾಸ್ಮಿ ಪ್ರತಿಷ್ಠಾನ ಸಹಕಾರ ನೀಡಿತ್ತು.

# ರಾಜೇಶ್ ನಿರ್ವಾಣೇಶ್ವರ ಯೂನಿವರ್ಸಿಟಿ ಸ್ಟಾರ್

• ಮಲ್ಲಮ್ಮ ನುಡಿ ವಾರ್ತೆ, ಗೋಕರ್ಣ



ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯದ ವತಿಯಿಂದ ತಿಪಟೂರಿನಲ್ಲಿ ನಡೆದ 27ನೇ ಅಂತರ್ರಾಜ್ಯಮಟ್ಟದ ಕಾಲೇಜುಗಳ ಪಂದ್ಯಾವಳಿಯಲ್ಲಿ ಅಂತಿಮ ಸುತ್ತಿನ 1500 ಹಾಗೂ 800 ಮೀಟರ್ ಓಟದಲ್ಲಿ ದಯಾನಂದ ಸಾಗರ ಇಂಜಿನಿಯರಿಂಗ ಕಾಲೇಜಿನ ವಿದ್ಯಾರ್ಥಿ ಗೋಕರ್ಣದ ರಾಜೇಶ ರಾಮಚಂದ್ರ ನಿರ್ವಾಣೇಶ್ವರ ಕ್ರಮವಾಗಿ ಎರಡು ಚಿನ್ನದ ಪದಕ ಪಡೆದಿದ್ದಾರೆ.

# ಗೋಪಾಲಕೃಷ್ಣ ನಾಯಕ ಹತ್ಯೆ ಸಂಚು ಪ್ರಕರಣ: ಸ್ಥಳೀಯ ಕೆಲವರು ನಾಪತ್ತೆ?

• ಮಲ್ಲಮ್ಮ ನುಡಿ ವಾರ್ತೆ, ಅಂಕೋಲಾ




ಕಾಂಗ್ರೆಸ್ ಮುಖಂಡ ಗೋಪಾಲಕೃಷ್ಣ ನಾಯಕ ಅವರ ಮೇಲೆ ಮಾ.25 ರಂದು ನಡೆದ ಕೊಲೆಯತ್ನ ಪ್ರಕರಣ-ಕ್ಕೆ ಸಂಬಂಧಿಸಿದಂತೆ ಇಲ್ಲಿಯವರೆಗೂ ಅನ್ಯ ರಾಜ್ಯದ 9 ಆರೋಪಿಗಳನ್ನು ಪೊಲೀಸರು ವಶಪಡಿಸಿಕೊಂಡು ತನಿಖೆ ಕೈಗೊಂಡಿದ್ದಾರೆ. ಆದರೆ ಸುಪಾರಿ ನೀಡಿದವರು ಅಂಕೋಲಾದವರೇ ಎಂದು ಗೋಪಾಲಕೃಷ್ಣ ನಾಯಕ ಆರೋಪಿಸುತ್ತಿದ್ದು, ಇದಕ್ಕೆ ಕಾಕತಾಳೀಯ ಎನ್ನುವಂತೆ ಅಂಕೋಲಾದ ಕೆಲವರು ನಾಪತ್ತೆಯಾಗಿರುವುದಾಗಿ ಹೇಳಲಾಗುತ್ತಿದೆ.

ಗೋಪಾಲಕೃಷ್ಣ ನಾಯಕರಿಗೆ ಎಚ್ಚರಿಕೆಯನ್ನು ನೀಡುವುದಕ್ಕಾಗಿ ಈ ದಾಳಿ ಮಾಡಿಸಲಾಗಿದೆ. ಇದರ ಹಿಂದೆ ರಿಯಲ್ ಎಸ್ಟೇಟ್ ಹಾಗೂ ಬೇರೆ ಬೇರೆ ಕಾರಣಗಳು ತಾಲೂಕಿನಲ್ಲಿ ಕೇಳಿಬರುತ್ತಿದ್ದವು. ಆದರೆ ಗುಣಮುಖರಾಗಿ ಬಂದನಂತರ ಗೋಪಾಲಕೃಷ್ಣ ನಾಯಕ ಸ್ಥಳೀಯ ಕೆಲವರ ಬಗ್ಗೆ ಅನುಮಾನ ವ್ಯಕ್ತಪಡಿಸಿ ತಮ್ಮ ಹೇಳಿಕೆಯನ್ನು ನೀಡಿದ್ದರು.

ಗೋಪಾಲಕೃಷ್ಣ ನಾಯಕರು ಕೂಡ ಕೆಲವು ಸ್ಥಳೀಯರೊಂದಿಗೆ ವಿರೋಧವನ್ನು ಕಟ್ಟಿಕೊಂಡಿದ್ದರು. ಇದರಿಂದಾಗಿ ಸಹಜವಾಗಿಯೇ ಜನರ ಕೆಂಗಣ್ಣಿಗೆ ಗುರಿಯಾಗಿದ್ದರು. ಕಾಂಗ್ರೆಸ್ ಪಕ್ಷದ ದೊಡ್ಡ ಮಟ್ಟದ ನಾಯಕರೊಂದಿಗೆ ಸಂಪರ್ಕವಿದ್ದರೂ ಸ್ಥಳೀಯ ಮುಖಂಡರೊಂದಿಗೆ ಭಿನ್ನಾಭಿಪ್ರಾಯ ಹೊಂದಿದ್ದರು. ಅವರೇ ಹೇಳಿದಂತೆ ಶಾಸಕ ಸತೀಶ ಸೈಲ್ ಅವರು ಕೂಡ ಸಹಕಾರಿ ಚುನಾವಣೆಯಲ್ಲಿ ಬಿಜೆಪಿಯವರಿಗೆ ಬೆಂಬಲಿಸಿದ್ದರು. ಇದರ ವಿರುದ್ಧವೂ ನಾನು ಧ್ವನಿ ಎತ್ತಿದ್ದ. ಇದು ಎಲ್ಲರಿಗೂ ತಿಳಿದ ವಿಚಾರ ಎಂದು ಮಾಧ್ಯಮಗಳಿಗೆ ನೇರವಾಗಿಯೇ ಹೇಳಿಕೆ ನೀಡಿದ್ದರು.

ರಾಜಕೀಯ ಕಾರಣಕ್ಕಾಗಿ ನನ್ನನ್ನು ಮುಗಿಸಲು ಸಂಚು ರೂಪಿಸಲಾಗಿದೆ ಎಂದು ಹೇಳಿಕೆ ನೀಡಿದ್ದರು. ಆದರೆ ಇವರ ಹೇಳಿಕೆ ಆರಂಭದಲ್ಲಿ ಹಲವರು ನಂಬಿರಲಿಲ್ಲ. ಆದರೆ ಕೆಲವರು ನಾಪತ್ತೆಯಾಗಿದ್ದಾರೆ ಎನ್ನುವ ಸಂಗತಿ ತಿಳಿದುಬರುತ್ತಲೇ ಈಗ ಅನುಮಾನಗಳ ಹುತ್ತ ಎಲ್ಲೆಡೆ ಪಸರಿಸುವಂತಾಗಿದೆ. ಒಟ್ಟಿನಲ್ಲಿ ಅಂಕೋಲಾದಲ್ಲಿ ನಡೆದ ಈ ಹತ್ಯೆ ಯತ್ನ ಪ್ರಕರಣ ಜನರಲ್ಲಿ ಆತಂಕಕ್ಕೂ ಕಾರಣವಾಗಿದೆ. ಒಟ್ಟಿನಲ್ಲಿ ಪೊಲೀಸರು ತನಿಖೆ ನಡೆದು ನಿಜವಾದ ಆರೋಪಿಗಳು ಯಾರು ಎನ್ನುವುದನ್ನು ಬಯಲಿಗೆಳೆಯಬೇಕಿದೆ ಎನ್ನುವುದು ಸ್ಥಳೀಯರ ಅಭಿಪ್ರಾಯವಾಗಿದೆ.

# ಡಿವೈಎಸ್ಪಿಗೆ ಜಾತ್ರೆಗೆ ಆಹ್ವಾನ ನೀಡಿದ ಸಮಾಜದ ಮುಖಂಡ ಮೋಹನ್



• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಜಿಲ್ಲೆ ಕಕ್ಕಬೇವಿನಹಳ್ಳಿ ಗ್ರಾಮದಲ್ಲಿ ದಿನಾಂಕ 31-03-2026 ಹಾಗೂ 01-04-2026 ರಂದು ನಡೆಯಲಿರುವ ಸಾಂಪ್ರದಾಯಿಕ ಊರಿನ ಜಾತ್ರೆಯನ್ನು ಅದ್ದೂ-ರಿಯಾಗಿ ನಡೆಸಲು ಗ್ರಾಮಸ್ಥರು ಸಜ್ಜಾಗುತ್ತಿದ್ದಾರೆ. ಈ ಹಿನ್ನಲೆಯಲ್ಲಿ ಗ್ರಾಮದ ಕುರುಬ ಸಮಾಜದ ಮುಖಂಡರು ಹಾಗೂ ಬಳ್ಳಾರಿ ಜಿಲ್ಲಾ ಕುರುಬರ ಸಂಘದ ಮಹಾ ಪ್ರಧಾನ ಕಾರ್ಯದರ್ಶಿಗಳಾದ ಕೆ. ಮೋಹನ್ ಅವರು ಬಳ್ಳಾರಿ ಗ್ರಾಮಾಂತರ ವಿಭಾಗದ ಡಿವೈಎಸ್ಪಿ ಅವರನ್ನು ಭೇಟಿಯಾಗಿ ಜಾತ್ರೆಗೆ ಅಧಿಕೃತವಾಗಿ ಆಹ್ವಾನಿಸಿದರು.

ಈ ವೇಳೆ ಕೆ. ಮೋಹನ್ ಅವರು ಜಾತ್ರೆಯ ಮಹತ್ವ, ಅದರ ಇತಿಹಾಸ ಹಾಗೂ ಗ್ರಾಮೀಣ ಜನಜೀವನದಲ್ಲಿ ಇದರ ಸ್ಥಾನವನ್ನು ವಿವರಿಸಿದರು. ಜಾತ್ರೆಯ ಸಂದರ್ಭದಲ್ಲಿ ಸಾವಿರಾರು ಭಕ್ತರು ಹಾಗೂ ಸಾರ್ವಜನಿಕರು ಭಾಗವಹಿಸುವ ನಿರೀಕ್ಷೆ ಇರುವುದರಿಂದ, ಕಾನೂನು ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಪೊಲೀಸ್ ಇಲಾಖೆಯ ಸಹಕಾರ ಅತ್ಯಗತ್ಯವೆಂದು ತಿಳಿಸಿದರು.

ಡಿವೈಎಸ್ಪಿ ಅವರು ಆಹ್ವಾನವನ್ನು ಸಂತೋಷದಿಂದ ಸ್ವೀಕರಿಸಿ, ಜಾತ್ರೆ ಯಶಸ್ವಿಯಾಗಿ ನಡೆಯಲು ಅಗತ್ಯ ಭದ್ರತಾ ಕ್ರಮಗಳನ್ನು ಕೈಗೊಳ್ಳುವುದಾಗಿ ಭರವಸೆ ನೀಡಿದರು. ಸಾರ್ವಜನಿಕರ ಸುರಕ್ಷತೆ ಹಾಗೂ ಶಾಂತಿಯುತ ವಾತಾವರಣ ಕಾಪಾಡಲು ಪೊಲೀಸ್ ಇಲಾಖೆ ಸದಾ ಬದ್ಧವಾಗಿದೆ ಎಂದು ಅವರು ತಿಳಿಸಿದರು.

ಗ್ರಾಮದ ಜಾತ್ರೆ ಸಮಾರಂಭದಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಜನಪದ ಸಂಭ್ರಮಗಳು ನಡೆಯಲಿದ್ದು, ಸುತ್ತಮುತ್ತಲಿನ ಗ್ರಾಮಗಳಿಂದಲೂ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಆಗಮಿಸುವ ನಿರೀಕ್ಷೆಯಿದೆ.

ಈ ಸಂದರ್ಭ ಸ್ಥಳೀಯ ಮುಖಂಡರು, ಕುರುಬ ಸಮಾಜದ ಸದಸ್ಯರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದು, ಜಾತ್ರೆಯನ್ನು ಯಶಸ್ವಿಯಾಗಿ ಆಚರಿಸಲು ಎಲ್ಲರೂ ಒಗ್ಗೂಡಿದರು.

## ರಾಜ್ಯದ ಅನೇಕ ಗಣ್ಯರಿಗೆ ಹುಲಿಕುಂಟೆ ಶ್ರೀ ಪ್ರಶಸ್ತಿ

# ತೊಗಲುಗೊಂಬೆ ಮನುಷ್ಯ ಜೀವನದ ಒತ್ತಡ ನಿವಾರಿಸುತ್ತದೆ: ಮಧುಸೂಧನ



• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ತೊಗಲುಗೊಂಬೆ ಕಲಾವಿದ ದಿ.ಶ್ರೀ ಹುಲೆಪ್ಪನವರ ಸ್ಮರಣಾರ್ಥ ರಾಜ್ಯಮಟ್ಟದ "ಹುಲಿಕುಂಟೆ ಶ್ರೀ" ಪ್ರಶಸ್ತಿ ಪ್ರಧಾನ ಸಮಾರಂಭ ನಿನ್ನೆ ಸಂಜೆ ನಗರದ ಡಾ. ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ಜರುಗಿತು.

ಸಮಾರಂಭವನ್ನು ಉದ್ಘಾಟಿಸಿದ ಭಾರತೀಯ ವೈದ್ಯಕೀಯ ಸಂಘದ ಮಾಜಿ ರಾಜ್ಯಾಧ್ಯಕ್ಷ ಡಾ ಮಧುಸೂಧನ ಕಾರಿಗನೂರು, ತೊಗಲುಗೊಂಬೆ ಮನುಷ್ಯ ಜೀವನದ ಒತ್ತಡಗಳನ್ನ ನಿವಾರಿಸುತ್ತದೆ ಎಂದರು.

ದೇಶ ವಿದೇಶದಲ್ಲಿ ತೊಗಲುಗೊಂಬೆ ನಾಟಕ ಪ್ರದರ್ಶನಕ್ಕೆ ತುಂಬಾ ಬೇಡಿಕೆ ಇದೆ ಎಲೆ ಮರ ಕಾಯಿ ಅಂತಿರುವ ಕಲಾವಿದರನ್ನು ಹುಡುಕಿ ಪ್ರಶಸ್ತಿ ನೀಡುತ್ತಿರುವುದು ಸಂತೋಷದ ವಿಷಯ ಎಂದು ಅಧ್ಯಕ್ಷತೆಯನ್ನು ವಹಿಸಿದ್ದ ಜೆ. ಟಿ.ಫೌಂಡೇಶನ್ ಅಧ್ಯಕ್ಷ ತಿಮ್ಮಪ್ಪ ಜೋಳದ ರಾಶಿ ಹೇಳಿದರು.

ಪ್ರಶಸ್ತಿಯನ್ನು ಸ್ವೀಕರಿಸಿದ ಎಲ್ಲಾ ಗಣ್ಯರ ಜವಾಬ್ದಾರಿ ಮತ್ತಷ್ಟು ಹೆಚ್ಚಾಗಿದೆ ತೊಗಲುಗೊಂಬೆ ಆಟ ರಾಜರ ಆಶ್ರಯಕ್ಕಿಂತ ಜನರ ಆಶ್ರಯದಲ್ಲಿ ಬೆಳೆಯಿತು. ಬಳ್ಳಾರಿಯಲ್ಲಿ ನುರಿತ ಕಲಾವಿದರನ್ನು ಗುರುತಿಸುವ ಕೆಲಸ ಈ ಸಂಸ್ಥೆ ಮಾಡುತ್ತಿರುವುದು ಶ್ಲಾಘನೀಯ ಎಂದು ಸಂಡೂರಿನ ಪ್ರಭುದೇವರ ಮಠದ ಪ್ರಭು ಮಹಾಸ್ವಾಮಿ ಹೇಳಿದರು.

ಮೇಧಾ ಕಾಲೇಜಿ ಮುಖ್ಯಸ್ಥ ಡಾ. ರಾಮ್ ಕಿರಣ್ , ನೃತ್ಯ ಜಿಲಾನಿ ಭಾಷಾ, ದೊಡ್ಡಬಸಪ್ಪ ಯಾಟಿ ಉಪಸ್ಥಿತರಿದ್ದರು. "ಹುಲಿಕುಂಟೆ ಶ್ರೀ" ಪ್ರಶಸ್ತಿಯನ್ನು ವಿವಿಧ ಕ್ಷೇತ್ರದಲ್ಲಿ ಸಾಧನೆ ಗೈದ 27 ಗಣ್ಯರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ನಂತರ ಸುಗಮ ಸಂಗೀತ ಮಲ್ಲಿಕಾರ್ಜುನ ತೂರನೂರು, ಸಮೂಹ ನೃತ್ಯವನ್ನು ಎಸ್ ಕೆ ಆರ್ ಜಿಲಾನಿ ಭಾಷಾ ಮತ್ತು ತಂಡ. ಮಲ್ಲಿಕಾರ್ಜುನ ಸ್ವಾಮಿ ಮತ್ತು ತಂಡದವರು ರೇಣುಕಾ ಮಹಾತ್ಮೆ ಎನ್ನುವ ಬಯಲಾಟವನ್ನು ಪ್ರದರ್ಶಿಸಿದರು

ಸಂಸ್ಥೆಯ ಅಧ್ಯಕ್ಷರ ಹೊನ್ನೂರಸ್ವಾಮ ಸ್ವಾಗತ ಮತ್ತು ಪ್ರಾಸ್ತಾವಿಕ ನುಡಿಗಳನ್ನಾಡಿದರು. ಪ್ರಾರ್ಥನೆ ಜಡೆಣಟಿಜಜಜಿಟಿಜಜಶ ಎಮ್ಮಿಗನೂರು ವಂದನಾರ್ಪಣೆ, ಸಂಸ್ಥೆಯ ಕಾರ್ಯದರ್ಶಿ ಲಕ್ಷ್ಮಿದೇವಿ, ಕಾರ್ಯಕ್ರಮದ ನಿರೂಪಣೆ ಬಸವರಾಜ ಅಮಾತಿ ಮತ್ತು ವಿಷ್ಣು ಹಡಪದ ನೆರವೇರಿಸಿಕೊಟ್ಟರು.

# ಜೈನ ತೀರ್ಥಂಕರ ಮಹಾವೀರ ಜಯಂತಿ ಆಚರಿಸಿದ ಬಲ್ಡೋಟ ವಿರೋಧಿ ವೇದಿಕೆ




• ಮಲ್ಲಮ್ಮ ನುಡಿವಾರ್ತೆ ಕೊಪ್ಪಳ

ಅಹಿಂಸೆ ಪರಮಧರ್ಮ ಎಂದ ಜೈನ ಸಮುದಾಯದ ಬಲ್ಡೋಟ ಮನುಷ್ಯರ ಕೊಲೆ ಮಾಡಲು ಹೊರಟಿರುವದು ಅತ್ಯಂತ ಖೇದಕರ ಮತ್ತು ವಿಷಾಧದ ಸಂಗತಿ ಎಂದು ನಿವೃತ್ತ ಪ್ರಾಂಶುಪಾಲರಾದ ಅಲ್ಲಮಪ್ರಭು ಬೆಟ್ಟದೂರು ಹೇಳಿದರು.

ಅವರು ನಗರಸಭೆ ಮುಂಭಾಗದಲ್ಲಿ ಜಿಲ್ಲಾ ಬಚಾವೋ ಆಂದೋಲನ ಸಮಿತಿ ಮತ್ತು ಪರಿಸರ ಹಿತರಕ್ಷಣಾ ವೇದಿಕೆಯ ಜಂಟಿ ಕ್ರಿಯಾ ವೇದಿಕೆ ಮೂಲಕ ನಡೆಸುತ್ತಿರುವ ಬಲ್ಡೋಟ ಇತರೆ ಕಾರ್ಖಾನೆಗಳ ಸ್ಥಾಪನೆ ಮತ್ತು ವಿಸ್ತರಣಾ ವಿರೋಧಿಸಿ ನಡೆಸಿರುವ ಅನಿರ್ಧಿಷ್ಟ ಧರಣಿಯ 151ನೇ ದಿನದ ಹೋರಾಟದ ವೇದಿಕೆಯಲ್ಲಿ ಜೈನ ತೀರ್ಥಂಕರ ಮಹಾವೀರರ ಜಯಂತಿ ಆಚರಿಸಿ ಮಾತನಾಡಿದರು.

ಬಲ್ಡೋಟ ಜೈನ ಸಮುದಾಯಕ್ಕೆ ಸೇರಿದವರಾಗಿದ್ದಾರೆ, ಅವರು ಇಲ್ಲಿನ ಲಕ್ಷಾಂತರ ಜನರ ಬದುಕಿಗೆ ಕೊಳ್ಳಿ ಇಡಲು ಹೊರಟಿರುವದು ನೋವಿನ ಸಂಗತಿ. ಜಗತ್ತಿನ ಇತಿಹಾಸದಲ್ಲಿ ಸತ್ಯ, ಅಹಿಂಸೆ, ಸಂಯಮ, ತ್ಯಾಗವನ್ನು ಮನುಷ್ಯ ಅಳವಡಿಸಿಕೊಳ್ಳಬೇಕು ಎಂದು ಹೇಳಿದವರು. ಆದರೆ ನಾವು ಐದು ತಿಂಗಳಿನಿಂದ ನಿರಂತರ ಧರಣಿ ಮಾಡುತ್ತಿರುವದನ್ನು ನೋಡಿಯೂ ಆ ರೀತಿ ನಡೆದುಕೊಳ್ಳುತ್ತಿರುವದು ಅತ್ಯಂತ ಸೋಜಿಗದ ಸಂಗತಿ. ಭಾರತದ ನಾಗರಿಕತೆ ಒಂದೇ ಸಮನೆ ಬಂದಿಲ್ಲ, ಅದು ಸುಧೀರ್ಘ ಇತಿಹಾಸ. ಎಲ್ಲರನ್ನು ಹತ್ತಿರ ತರುವ ಕೆಲಸ ಮಾಡಿದ ತೀರ್ಥಂಕರರು ಬೇಗ ಬುದ್ಧಿ ಕೊಡಲಿ ಎಂದು ಕರೆ ನೀಡಿದರು.

ಮಹಾವೀರ ಜಯಂತಿಯ ಮುಖ್ಯ ಅತಿಥಿಗಳಾಗಿ ಡಾ.ಮಂಜುನಾಥ ಸಜ್ಜನ್ ಮಾತನಾಡಿದರು. ಸಂಚಾಲಕರಾದ ಮಲ್ಲಿಕಾರ್ಜುನ ಬಿ. ಗೋನಾಳ, ಮಂಜುನಾಥ ಜಿ. ಗೊಂಡಬಾಳ, ನಿವೃತ್ತ ಪ್ರಾಚಾರ್ಯ ಎಸ್.ಬಿ. ರಾಜೂರು, ಬಿ.ಜಿ. ಕರಿಗಾರ, ಮಹಿಳಾ ನಾಯಕಿಯರಾದ ಜ್ಯೋತಿ ಎಂ. ಗೊಂಡಬಾಳ, ಸರೋಜಾ ಬಾಕಳೆ, ಕಾವ್ಯಾ ಗಡಾದ, ರತ್ನಮ್ಮ ದೊಡ್ಡಮನಿ, ಗಾಳೆಪ್ಪ ಎಸ್.ಕಡೆಮನಿ, ರವಿ ಕಾಂತನವರ, ಮೂಕಪ್ಪ ಮೇಸ್ತ್ರಿ ಬಸಾಪುರ, ವಿಜಯ ಮಹಾಂತೇಶ ಹಟ್ಟಿ, ಬಸವರಾಜಪ್ಪ ಶೆಟ್ಟರ್, ಪಂಪಣ್ಣ ಚಿಂತಪಲ್ಲಿ, ವೈ. ಸತ್ಯನಾರಾಯಣ, ಮಹಾದೇವಪ್ಪ ಮಾವಿನಮಡು, ನಾಗರಾಜ ಕುಷ್ಟಗಿ, ರೇವಣಸಿದ್ದಯ್ಯ ಚಿತ್ರಗಾರ, ಎಸ್.ಎಸ್.ಕೆ. ಮಹಿಳಾ ಸಂಘದ ಮಂಜುಳಾ ಕಾಟವೆ ಭಾಗವಹಿಸಿದ್ದರು.

# ಧರ್ಮದ ತಿರುಳು ಅರಿತರೆ ಸಂಘರ್ಷಕ್ಕೆ ಅವಕಾಶವಿಲ್ಲ: ಸಿದ್ಧಲಿಂಗಸ್ವಾಮಿ




• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಜಮಾತೆ ಇಸ್ಲಾಮಿ ಹಿಂದ್ ನ ಬಳ್ಳಾರಿ ಜಿಲ್ಲಾ ಘಟಕದಿಂದ ಈದ್ ಮಿಲನ್ ಸೌಹಾರ್ದ ಕೂಟ ನಿನ್ನೆ ಸಂಜೆ ನಗರದ ಗಾಂಧಿ ಭವನದಲ್ಲಿ ನಡೆಯಿತು.

ಕುರುಗೋಡು ತಾಲೂಕಿನ ಸೋಮಸಮುದ್ರ ಗ್ರಾಮದ ಕೊಟ್ಟೂರು ಸ್ವಾಮಿ ಶಾಖಾ ಮಠದ ಸಿದ್ಧಲಿಂಗಸ್ವಾಮಿಗಳು ಮಾತನಾಡಿ ಪರಸ್ಪರರು ಧರ್ಮದ ತಿರುಳನ್ನು ಅರಿತು ಬಾಳಿದಾಗ ಸಂಘರ್ಷ ಸೃಷ್ಟಿಯಾಗದೆಂದರು

ಭಾರತದಲ್ಲಿ ನಾವೆಲ್ಲರೂ ಸಂವಿಧಾನ ಚೌಕಟ್ಟಿನೊಳಗೆ ಮತ್ತೊಬ್ಬರಿಗೆ ತೊಂದರೆಯಾಗದ ರೀತಿ ನಮ್ಮ ಮತ ಧರ್ಮಗಳನ್ನು ಪಾಲಿಸಿದಾಗ ಮಾತ್ರ ಶಾಂತಿ ನಿಲ್ಲಿಸಲು ಸಾಧ್ಯವೆಂದು ಕ್ರೈಸ್ತ ಧರ್ಮ ಗುರು ಐವಾನ್ ಪಿಂಟೋ ಹೇಳಿದರು.

ಕಸಾಪ ಜಿಲ್ಲಾ ಅಧ್ಯಕ್ಷ ಡಾ. ನಿಷ್ಠಿರುದ್ರಪ್ಪ ಮಾತನಾಡಿ ಜಗತ್ತಿನ ಎಲ್ಲಾ ಧರ್ಮಗಳು ಬೋಧಿಸಿರುವುದು ಮಾನವ ಜನಾಂಗದ ಉದ್ಧಾರವನ್ನೇ, ನಾವು ಶ್ರೇಷ್ಠತೆಯ ಭ್ರಮೆ ಬಿಟ್ಟು ಎಲ್ಲರೊಳಗೆ ಒಂದಾಗಿ ಬಾಳಿದಾಗ ಮಾತ್ರ ಸೌಹಾರ್ದತೆಯ ಸಮಾಜ ನಿರ್ಮಾಣ ಸಾಧ್ಯವೆಂದರು.

ಸೈಯದ್ ಮಿಸಾಜುದ್ದೀನ್ ಖಾದ್ರಿ ರಂಜಾನ್ ಮಾಸಾಚರಣೆಯ ಮಹತ್ವವನ್ನು ತಿಳಿಸಿಕೊಟ್ಟರು.

ಜಮಾತೆ ಇಸ್ಲಾಂ ಹಿಂದ್ ನ ಮುಖ್ಯಸ್ಥ ಡಾ. ಜೈನುಲ್ ಅಬಿದ್ದೀನ್ ಖಾದ್ರಿ, ನಿಜಾಮುದ್ದೀನ್ ವೇದಿಕೆಯಲ್ಲಿದ್ದರು. ಗುಲ್ಪಂ ಅಲಿ ಕುರಾನ್ ಪಠಣ ಮಾಡಿದರು, ಸೈಯದ್ ನಾಸೀರ್ ಅಲಿ ಪ್ರಸ್ತಾವಿಕವಾಗಿ ಮಾತನಾಡಿದರು. ಸಿರಾಜ್ ಅಹಮದ್ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.

# ಸದ್ಭಾವವಿರುವಲ್ಲಿ ಶ್ರೀಹರಿಯ ವಾಸ



• ಮಲ್ಲಮ್ಮ ನುಡಿ ವಾರ್ತೆ. ಬಸವಕಲ್ಯಾಣ

ಸದ್ಭಾವ, ಸಮಷ್ಟಿಭಾವ ಇರುವಲ್ಲಿ ಶ್ರೀಹರಿಯು ವಾಸವಾಗಿರುತ್ತಾನೆ ಎಂದು ಹಾರಕೂಡದ ಪೂಜ್ಯ ಶ್ರೀ ಡಾ. ಚನ್ನವೀರ ಶಿವಾಚಾರ್ಯರು ನುಡಿದರು.

ತಾಲೂಕಿನ ಸರಜವಳಗಾ ಗ್ರಾಮದಲ್ಲಿ ಅಖಂಡ ಹರಿನಾಮ ಸಪ್ತಾಹ ನಿಮಿತ್ಯವಾಗಿ ಆಯೋಜಿಸಿದ ಧರ್ಮಸಭೆಯ ಸಾನಿಧ್ಯ ವಹಿಸಿ ಮಾತನಾಡಿದ ಶ್ರೀಗಳು ಧರ್ಮ ಮತ್ತು ಧಾರ್ಮಿಕ ಆಚರಣೆಗಳು ಭಿನ್ನವಾಗಿದ್ದರೂ ಧರ್ಮದ ಸಾರ ಯಾವತ್ತಿಗೂ ಒಂದೇ ಆಗಿರುತ್ತದೆ.

ಸಂಕಷ್ಟದಲ್ಲಿದ್ದವರಿಗೆ ನಿಸ್ವಾರ್ಥವಾಗಿ ಸಹಾಯ ಮಾಡುವುದೇ ನಿಜವಾದ ಧರ್ಮ, ಎಂತಹ ಸಂದರ್ಭದಲ್ಲೂ ಲೋಕಹಿತ ಬಯಸುವುದೇ ಧರ್ಮ, ಲೋಕಕಲ್ಯಾಣದಲ್ಲಿಯೇ ಸ್ವಹಿತ ಅಡಗಿದೆ ಎನ್ನುವುದನ್ನು ಅರಿತುಕೊಳ್ಳುವುದೇ ಧರ್ಮಪ್ರಜ್ಞೆ ಎಂದು ನುಡಿದರು.

ಮಿತಿಗಳನ್ನು ಮೀರಿ ಬದುಕುವ ಕಲೆಯನ್ನು ಗುರುವಿನಿಂದ ತಿಳಿದು ಆ ನಿಟ್ಟಿನಲ್ಲಿ ತಿಳಿಯಾಗಿ ಬಾಳ್ವೆ ಮಾಡುವುದನ್ನು ಕಲಿಯಬೇಕು, ಅಖಂಡ ಹರಿನಾಮ ಸಪ್ತಾಹ ಎಲ್ಲರಿಗೂ ಹೊಸ ಜೀವನೋತ್ಸಾಹ ನೀಡುವಂತಾಗಲಿ, ಸರಜವಳಗಾ ಗ್ರಾಮ ಸೌಹಾರ್ದತೆಯ ದಿಟ್ಟ ಸಂದೇಶ ನೀಡುವಂತಾಗಲಿ ಎಂದು ಶುಭ ಹಾರೈಸಿದರು.

ಶಾಸಕ ಶರಣು ಸಲಗರ ರವರು ಮಾತನಾಡಿ, ಡಾ. ಚನ್ನವೀರ ಶಿವಾಚಾರ್ಯರ ಸಮನ್ವಯ ಸಿದ್ಧಾಂತ ನಾಡಿಗೆ ಮಾದರಿಯಾಗಿದ್ದು ಅವರ ದಿವ್ಯವಾಣಿ ನಮ್ಮೆಲ್ಲರಿಗೂ ದಾರಿದೀಪವಾಗಿದೆ.

ವಿಶೇಷವಾಗಿ ಗ್ರಾಮದ ಯುವಕರು ದುರ್ವೆಸನಗಳಿಗೆ ಬಲಿಯಾಗದೆ ಸಕಾರಾತ್ಮಕ ಚಿಂತಕರಾಗಿ ಸಮಾಜ ಕಟ್ಟುವ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕು.

ಅಖಂಡ ಹರಿನಾಮ ಸಪ್ತಾಹ ವ್ಯಸನ ಮುಕ್ತ ಗ್ರಾಮ ವಾಗುವುದಕ್ಕೆ ಪ್ರೇರಣೆ ನೀಡುವಂತಾಗಲಿ ಎಂದು ನುಡಿದರು. ಈ ಸಂದರ್ಭದಲ್ಲಿ

ಮಲ್ಲಿನಾಥ ಹಿರೇಮಠ ಹಾರಕೂಡ, ಎಪಿಎಂಸಿ ಮಾಜಿ ಅಧ್ಯಕ್ಷ ಸಿದ್ರಾಮಪ್ಪ ಗುದಗೆ, ಜ್ಞಾನೇಶ್ವರ ಮುಳೆ, ಓಂ ಪಾಟೀಲ ಜಾನಪೂರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಕಾರ್ತಿಕ ಸ್ವಾಮಿ ಯಲದಗುಂಡಿ ಪ್ರಾರ್ಥನಾ ಗೀತೆ ಹಾಡಿದರು. ಪಾಂಡುರಂಗ ಪಾಟೀಲ ಸ್ವಾಗತಿಸಿ ನಿರೂಪಿಸಿದರು.

# ದರ್ಶನ್ ಹೋಟೆಲ್ ಮಾಲೀಕರಿಂದ ರೋಗಿಗಳಿಗೆ ಉಚಿತ ಉಪಾಹಾರ

• ಮಲ್ಲಮ್ಮ ನುಡಿ ವಾರ್ತೆ, ಹಗರಿಬೊಮ್ಮನಹಳ್ಳಿ



ಸರ್ಕಾರಿ ಸಾರ್ವಜನಿಕ ಆಸ್ಪತ್ರೆ ಒಳ ರೋಗಿಗಳಿಗೆ ಉಚಿತ ಉಪಹಾರ ಇಂದಿಗೆ 365 ದಿನಗಳು(ಒಂದನೇ ವಾರ್ಷಿಕೋತ್ಸವ) ಆಚರಣೆ.ಗಂಗಾಧರಯ್ಯ ಕುಟುಂಬದವರಿಂದ ಹಾಗೂ ಆತ್ಮೀಯ ಸಮಾನ ಮನಸ್ಕರಿಂದ ತುಂಬು ಹೃದಯದ ಅಭಿನಂದನೆಗಳು,

ಎಸ್ ಎಂ ಪರಮೇಶ್ವರಯ್ಯ,

ಎಸ್ ಎಂ ಗೌರಮ್ಮ,ಪರಮೇಶ್ವರಯ್ಯ ದಂಪತಿಗಳ ಪುತ್ರನಾದ ಎಸ್ ಎಂ ಗಂಗಾಧರಯ್ಯ, ಇವರ ಸಹೋದರಿ ಎ□□□ಂ ಸುಮಿತ್ರ, ಗಂಗಾಧರಯ್ಯನವರ ವಿದ್ಯಾಭ್ಯಾಸ ಡಿಗ್ರಿ ಮುಗಿಸಿ ಸರ್ಕಾರಿ ಕೆಲಸಕ್ಕೆ ನಿರ್ಧರಿಸಿರುತ್ತಾರೆ. ಆದರೆ ಇವರ ತಂದೆ ಕಾಲವಾದ ನಂತರ ಇವರ ತಾಯಿಯವರು ಗೌರಮ್ಮನವರು ಹೋಟೆಲ್ ಮುಂದುವರಿಸಿಕೊಂಡು ಹೋಗುತ್ತಾರೆ,

ಗಂಗಾಧರಯ್ಯನವರಿಗೆ ಸರ್ಕಾರಿ ಕೆಲಸ ಸಿಗದೇಯಿರುವ ಕಾರಣ ಇವರು ಮೂಲತಃ ಅಜ್ಜಿ ಅಜ್ಜ ಕಾಲದಿಂದಲೂ ನಿರಂತರ ಹೋಟೆಲ್ ವೃತ್ತಿಯನ್ನು ಮುಂದುವರೆಸಿಕೊಂಡು ಬಂದಿರುತ್ತಾರೆ. ಹೋಟೆಲ್ಗೆ ತಮ್ಮ ಮಗನ ಹೆಸರಾದ ದರ್ಶನ್' ಹೋಟೆಲ್ ಎಂದು ನಾಮಕರಣ ಮಾಡುತ್ತಾರೆ,

ಹೋಟೆಲ್ ಕ್ರಮೇಣವಾಗಿ ಪ್ರಸಿದ್ಧವಾಗಿ ಬೆಳೆಯುತ್ತದೆ. ತದನಂತರ ಇವರು ಉಚಿತ ಸಾಮೂಹಿಕ ವಿವಾಹಗಳಿಗೆ ಹಾಗೂ ಎಲ್ಲಾ ಜಾತಿ, ಧರ್ಮದ ಗುಡಿಗಳಿಗೆ,ಹಾಗೂ ಮಠಮಾನ್ಯಗಳಿಗೆ, ಕೊಡಗೈ ದಾನಿಗಳು, ಹಾಗೂ ಬಡ ವಿದ್ಯಾರ್ಥಿಗಳಿಗೆ, ಆಸ್ಪತ್ರೆಯ ರೋಗಿಗಳಿಗೆ, ಬಡವರಿಗೆ ಸಹಾಯ, ಹಾಗೂ ನಮ್ಮೂರಿನ ವೆಂಕಟೇಶ್ವರ ಜಾತ್ರೆಯ ಪ್ರಯುಕ್ತ ಸುಮಾರು 15 ವರ್ಷಗಳಿಂದ ಹೋಳಿಗೆ ಊಟ ಪ್ರಸಾದ ನೀಡುತ್ತಾರೆ, ದೇವಸ್ಥಾನಗಳಿಗೆ ಕಾರ್ತಿಕ ಮಾಡುವ ಸಂದರ್ಭದಲ್ಲಿ ಪ್ರಸಾದ ಸೇವೆಯನ್ನು ಸಹ ನೀಡಿರುತ್ತಾರೆ,

ಇನ್ನೂ ಅನೇಕ ಸಮಾಜ ಸೇವೆ ಕೈಂಕರ್ಯಗಳನ್ನು ಮಾಡುವುದರ ಜೊತೆಗೆ, ಆಸ್ಪತ್ರೆಯ ಒಳ ರೋಗಿಗಳಿಗೆ ಉಚಿತ ಉಪಹಾರವನ್ನು ಇಂದಿಗೆ ಒಂದು ವರ್ಷದಿಂದ ಉಚಿತವಾಗಿ ನೀಡತ್ತಾ ಬಂದಿದ್ದಾರೆ. ಇವರ ಜೊತೆಗೆ ಇವರ ಧರ್ಮಪತ್ನಿ ಶ್ರೀಮತಿ ಅಂಬುಜಮ್ಮ ಸಹ ಕೈಗೂಡಿಸಿಕೊಂಡು ಬಂದಿದ್ದಾರೆ. ಇವರಿಗೆ ಇಬ್ಬರು ಮಕ್ಕಳು. ಒಬ್ಬ ಮಗ ದರ್ಶನ್ ಸ್ವಾಮಿ ಎಂ. ಬಿ. ಬಿ. ಎಸ್. ಮಾಡುತ್ತಿದ್ದಾರೆ. ಹಾಗೂ ಎರಡನೆಯ ಮಗ ಗಣೇಶ್ ಸ್ವಾಮಿ ಇಂಜಿನಿಯರಿಂಗ್ ಮಾಡುತ್ತಿದ್ದಾರೆ,

ಇವರ ಜೊತೆಗೆ ಸಮಾನ ಮನಸ್ಕರ ಸ್ನೇಹಿತರಾದ ಸಿಎಂ ಶ್ರೀನಿವಾಸ್, *ಸರ್ದಾರ್ ಯಮನೂರಪ್ಪ, ಕನ್ನಿಹಳ್ಳಿ ಚಂದ್ರಶೇಖರ್, ಆಟೋ ವೀರೇಶ್,ಮಡಿವಾಳರ ಅಶೋಕ್, ಸೆರಗಾರ್ ಪರಶುರಾಮ್, ಲಕ್ಷ್ಮಿಪತಿ( ಪಾನ್ ಶಾಪ್ ಪುಟ್ಟ ) ದರ್ಶನ್ ಹೋಟೆಲ್ ಸಿಬ್ಬಂದಿ ವರ್ಗದವರು ಈ ಮಹತ್ಕಾರ ಸೇವೆ ದೇವರು ಮೆಚ್ಚುವ ಸೇವೆ ನಿರಂತರವಾಗಿ ದಿನ ಸಂಜೆ 7:30ಕ್ಕೆ ಉಚಿತ ಉಪಹಾರ ಪ್ರತಿದಿನ 130 -150 ಸಂಖ್ಯೆ ಯಷ್ಟು ಉಪಹಾರವನ್ನು ನೀಡಿರುತ್ತಾರೆ . (ಕೊಟ್ಟಿರುತ್ತಾರೆ) ಇವರ ಈ ದಾಸೋಹ ಸೇವೆ ಇಂದಿಗೆ 365 ದಿನಗಳು ಆಗಲಿದೆ. "ದಾನ ಚಿಂತಾಮಣಿ" ಎಸ್. ಎಂ. ಗಂಗಾಧರಯ್ಯ ಹಾಗೂ ಅವರ ಕುಟುಂಬಕ್ಕೆ ಇನ್ನೂ ಹೆಚ್ಚು ಹೆಚ್ಚು ಧಾನ ಧರ್ಮ ಮಾಡುವ ಶಕ್ತಿ ಹಾಗೂ ಸಾಮರ್ಥ್ಯ ದ್ವಿಗುಣವಾಗಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

# ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ತ್ವರಿತ ಕಾರ್ಯಾಚರಣೆ ಬಾಲ್ಯವಿವಾಹದಿಂದ ಐವರು ಅಪ್ರಾಪ್ತ ಬಾಲಕಿಯರ ರಕ್ಷಣೆ



• ಮಲ್ಲಮ್ಮ ನುಡಿವಾರ್ತೆ ಕೊಪ್ಪಳ

ಜಿಲ್ಲಾ ಮಕ್ಕಳ ರಕ್ಷಣಾ ಘಟಕದಡಿ ಕಾರ್ಯನಿರ್ವಹಿಸುವ ಉಚಿತ ಮಕ್ಕಳ ಸಹಾಯವಾಣಿ 1098 ಕ್ಕೆ ಬಂದ ಕರೆಯಿಂದ ತ್ವರಿತ ಕಾರ್ಯಾಚರಣೆ ಕೈಗೊಂಡ ಮಕ್ಕಳ ರಕ್ಷಣಾ ಘಟಕವು ಬಾಲ್ಯವಿವಾಹಕ್ಕೆ ಒಳಗಾಗಬೇಕಿದ್ದ ಐವರು ಅಪ್ರಾಪ್ತರನ್ನು ರಕ್ಷಿಸಿದೆ.

ಮಕ್ಕಳ ಉಚಿತ ಸಹಾಯವಾಣಿ ಸಂಖ್ಯೆ 1098 ಕ್ಕೆ ಬಂದ ಕರೆಯಲ್ಲಿ ಎರಡೇ ದಿನದಲ್ಲಿ ಐದು ಅಪ್ರಾಪ್ತರನ್ನು ಬಾಲ್ಯ ವಿವಾಹದಿಂದ ರಕ್ಷಣೆ ಮಾಡಿದೆ. ಬೆಳಂ ಬೆಳಗ್ಗೆ ಮಕ್ಕಳ ಸಹಾಯವಾಣಿ–1098 ಉಚಿತ ಮಕ್ಕಳ ಸಹಾಯವಾಣಿ ಸಂಖ್ಯೆಗೆ ಯಲಬುರ್ಗಾ ತಾಲೂಕಿನ ಬೇವೂರು ಪೊಲೀಸ್ ಠಾಣೆ ವ್ಯಾಪ್ತಿಯ ಇಬ್ಬರು ಬಾಲಕಿಯರು, ಯಲಬುರ್ಗಾ ಪೊಲೀಸ್ ಠಾಣೆ ವ್ಯಾಪ್ತಿಯ ಒಬ್ಬ ಬಾಲಕಿ, ಕಾರಟಗಿ ತಾಲೂಕಿನ ಕಾರಟಗಿ ಪೊಲೀಸ್ ಠಾಣೆ ವ್ಯಾಪ್ತಿಯ ಇಬ್ಬರು ಬಾಲಕಿಯರು ಅಪ್ರಾಪ್ತರಿದ್ದು, ಅವರ ಮದುವೆ ಸಿದ್ದತೆ ನಡೆದಿದೆ. ಅವರನ್ನು ರಕ್ಷಣೆ ಮಾಡುವಂತೆ ಮಕ್ಕಳ ಸಹಾಯವಾಣಿ 1098 ಗೆ ಕರೆ ಬಂದಿತ್ತು.ಕರೆಯ ಮಾಹಿತಿ ಆಧರಿಸಿ, ಜಿಲ್ಲೆಯ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಹಾಗೂ ಮಕ್ಕಳ ಸಹಾಯವಾಣಿ ಸಿಬ್ಬಂದಿ, ಅಕ್ಕಪಡೆ ಮತ್ತು 112 ಪೊಲೀಸ್ ಸಿಬ್ಬಂದಿ, ವಲಯ ಮೇಲ್ವಿಚಾರಕರು,ಗ್ರಾಮ ಪಂಚಾಯತ ಅಭಿವೃದ್ಧಿ ಅಧಿಕಾರಿಗಳು, ಶಾಲಾ ಮುಖ್ಯೋಪಾಧ್ಯಾಯರು,ಪುರಸಭೆಯ ಸಿಬ್ಬಂದಿಯ ಸಹಯೋಗದೊಂದಿಗೆ ಐದು ಜನರನ್ನು ರಕ್ಷಿಸಿ, ಮಕ್ಕಳ ಪೋಷಣೆ ಮತ್ತು ರಕ್ಷಣೆಗಾಗಿ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಹಾಜರುಪಡಿಸಿದೆ. ರಕ್ಷಣಾ ಕಾರ್ಯಾಚರಣೆಯಲ್ಲಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕದಿಂದ ಬಸವರಾಜ ಗುಳೇದ್, ಅಮರಮ್ಮ ಹಿರೇಮಠ, ಬಸಮ್ಮ ಎಸ್., ಮೇಲ್ವಿಚಾರಕಿ ಶ್ರೀದೇವಿ, ಸವಿತಾ, ಅಕ್ಕಪಡೆಯ ಸಾವಿತ್ರಿ, ಪಿ.ಸಿ. ಯಲಮ್ಮ, ಭಾಗ್ಯ, ವಾಹನ ಚಾಲಕ ಶರಣಪ್ಪ ಭಾಗವಹಿಸಿದ್ದರು.ಜಿಲ್ಲೆಯಲ್ಲಿ ಇತ್ತೀಚೆಗೆ ಮಕ್ಕಳ ಮೇಲಿನ ದೌರ್ಜನ್ಯ ಪ್ರಕರಣಗಳನ್ನು ತಡೆಗಟ್ಟಲು ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಲಾಗುತ್ತಿದ್ದು, ಈಗ ವಿವಾಹ ಮುಹೂರ್ತಗಳು ಆರಂಭವಾಗಿರುವ ಹಿನ್ನೆಲೆ ಬಾಲ್ಯ ವಿವಾಹ ಪ್ರಕರಣಗಳು ಹೆಚ್ಚಾಗುವ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ಗ್ರಾಮ ಪಂಚಾಯತ್ ಮಟ್ಟದ ಬಾಲ್ಯ ವಿವಾಹ ನಿಷೇಧಾಧಿಕಾರಿಗಳು ಹಾಗೂ ಸಂಬಂಧಿತ ಅಧಿಕಾರಿಗಳು ವಧು–ವರರ ವಯಸ್ಸಿನ ದೃಢೀಕರಣವನ್ನು ಕಡ್ಡಾಯವಾಗಿ ಪರಿಶೀಲಿಸಬೇಕು ಎಂದು ಸೂಚಿಸಲಾಗಿದೆ.ವಧುವಿಗೆ 18 ವರ್ಷ ಹಾಗೂ ವರನಿಗೆ 21 ವರ್ಷ ಪೂರ್ತಿಯಾಗಿರುವುದನ್ನು ಖಚಿತಪಡಿಸಿಕೊಂಡ ನಂತರವೇ ವಿವಾಹಕ್ಕೆ ಅನುಮತಿ ನೀಡಬೇಕು. ನಿಯಮಗಳನ್ನು ಉಲ್ಲಂಘಿಸಿ ಬಾಲ್ಯ ವಿವಾಹ ನಡೆಸಲು ಯತ್ನಿಸಿದರೆ ಆಯೋಜಕರು ಮತ್ತು ಭಾಗಿಯಾದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಸಿಂಧು ಅಂಗಡಿ ತಿಳಿಸಿದ್ದಾರೆ.

# ಕಾಂಗ್ರೆಸ್ಸಿಗೆ ಸೋಲಿನ ಭೀತಿ: ವಿಜಯೇಂದ್ರ

• ಮಲ್ಲಮ್ಮ ನುಡಿ ವಾರ್ತೆ, ಬಾಗಲಕೋಟೆ

ಮುಖ್ಯಮಂತ್ರಿ ಸೇರಿ ಯಾರೇ ಬಂದರೂ ಉಪಚುನಾವಣೆಯಲ್ಲಿ ಬಾಗಲಕೋಟೆ ಮತ್ತು ದಾವಣಗೆರೆ ಎರಡೂ ಕ್ಷೇತ್ರದಲ್ಲಿ ಬಿಜೆಪಿ ಬಹು ಅಂತರದಲ್ಲಿ ಗೆಲ್ಲಲಿದೆ. ಕಾಂಗ್ರೆಸ್ ಓಟ್ ಬ್ಯಾಂಕ್ ಕುತಂತ್ರ ಅರ್ಥಮಾಡಿಕೊಂಡಿರುವ ಮತದಾರರು ತಕ್ಕಪಾಠ ಕಲಿಸಲಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.



ನಗರದ ದೀಪಮ್ ಕಾಲೋನಿಯ ಸತ್ಯನಾರಾಯಣ ದೇವಸ್ಥಾನದಲ್ಲಿ ಸೋಮವಾರ ಪೂಜೆ ಸಲ್ಲಿಸಿ ಪಕ್ಷದ ಅಭ್ಯರ್ಥಿ ವೀರಣ್ಣ ಚರಂತಿಮಠ ಪರವಾಗಿ ಮನೆ ಮನೆಗೆ ತೆರಳಿ ಮತಯಾಚನೆ ಮಾಡಿ ಮಾತನಾಡಿದ ಅವರು, ಉಪಚುನಾವಣೆಯ ಎರಡೂ ಕ್ಷೇತ್ರದಲ್ಲಿ ಬಿಜೆಪಿ ಕಾರ್ಯಕರ್ತರು ಉತ್ಸಾಹದಿಂದ ಕೆಲಸ ಮಾಡುತ್ತಿದ್ದು ಬಾಗಲಕೋಟೆ ಮತಕ್ಷೇತ್ರ ರಣರಂಗವಾಗಿ ಬದಲಾಗಿದೆ. ಮತದಾರರು ಕಾಂಗ್ರೆಸ್ ದುರಾಡಳಿತಕ್ಕೆ ಸಂಪೂರ್ಣವಾಗಿ ಬೇಸತ್ತಿದ್ದು ಇದನ್ನು ತಿಳಿದಿರುವ ಮುಖ್ಯಮಂತ್ರಿಗಳು ಸೋಲುವ ಆತಂಕದಿಂದ ಹಳ್ಳಿಗಳಲ್ಲೂ ವಾಸ್ತವ ಹೂಡಲು ಹೊರಟಿದ್ದಾರೆ. ತಮ್ಮ ಸ್ಥಾನವನ್ನೂ ಮರೆತು ಅಲ್ಪಸಂಖ್ಯಾತರ ಓಲೈಕೆ ಮಾಡಲು ಹೊರಟ ಇವರ ಯಾವುದೇ ಕುತಂತ್ರ ಬಿಜೆಪಿಯ ಮೇಲೆ ಪರಿಣಾಮ ಬೀರುವುದಿಲ್ಲ ನಮ್ಮ ಗೆಲುವು ಖಚಿತ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕಳೆದ ಮೂರು ವರ್ಷಗಳ ಕಾಂಗ್ರೆಸ್ ಆಡಳಿತದಲ್ಲಿ ರಾಜ್ಯದಲ್ಲಿ ಹಿಂದೂ ಕಾರ್ಯಕರ್ತರಿಗೆ ಅಪಮಾನ ಮತ್ತು ಸುಳ್ಳುಕೇಸು ದಾಖಲು ಪ್ರಕರಣಗಳು ಹೆಚ್ಚಾಗಿವೆ. ಬಾಗಲಕೋಟೆ ಸೇರಿದಂತೆ ವಿವಿಧೆಡೆ ಹಿಂದೂ ಮೆರವಣಿಗೆಗಳ ಮೇಲೆ ಕಲ್ಲು ತೂರಾಟಗಳು ನಡೆಯುತ್ತಿವೆ. ದೇಶ ದ್ರೋಹಿಗಳಿಗೆ ರಕ್ಷಣೆ ಕೊಡುತ್ತಿದ್ದಾರೆ. ದಲಿತರ ಮೇಲೆ ಹಲ್ಲೆಗಳು ನಡೆಯುತ್ತಿದ್ದರೂ ಅದರ ಬಗ್ಗೆ ತಲೆ ಕೆಡಿಸಿಕೊಳ್ಳುತ್ತಿಲ್ಲ. ಉದ್ಯೋಗ ಭರವಸೆ ನೀಡಿ ಒಂದು ಹುದ್ದೆಯನ್ನು ಭರ್ತಿ ಮಾಡದೇ ಪ್ರತಿಭಟನೆ ಮಾಡುವ ಉದ್ಯೋಗ ಆಕಾಂಕ್ಷಿಗಳ ಮೇಲೆ ಲಾಟಿ ಪ್ರಹಾರ ಮಾಡಿಸಿದ್ದಾರೆ. ಸರಕಾರದ ಇಂತಹ ಸಾಲು ಸಾಲು ವೈಫಲ್ಯತೆಗಳೇ ಬಿಜೆಪಿಯನ್ನು ಗೆಲ್ಲಿಸುತ್ತವೆ ಎಂದು ಅವರು ಹೇಳಿದರು.

ಸಂಸದ ಗೋವಿಂದ ಕಾರಜೋಳ ಮಾತನಾಡಿ, ಕಾಂಗ್ರೆಸ್ ಪಕ್ಷಕ್ಕೆ ಮೊದಲೇ ಸೋಲು ಖಚಿತವಾಗಿದ್ದು ಅತಂತ್ರ ಸ್ಥಿತಿ ತಲುಪಿದೆ. ಬಾಗಲಕೋಟೆಯಲ್ಲಿ ವೀರಣ್ಣ ಚರಂತಿಮಠರ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಚಾರದ ಮುಂದೆ ಮುಖ್ಯಮಂತ್ರಿಗಳ ಪ್ರಚಾರ ಕೆಲಸ ಮಾಡುವುದಿಲ್ಲ. ಅವರ ಯಾವ ಕುತಂತ್ರವು ಕಾರ್ಯತತ್ಪರ್ಯಕ್ಕೆ ಬಾರದ ಕಾರಣದಿಂದ ವಾಸ್ತವ ಹೂಡಲು ಮುಂದಾಗಿದ್ದಾರೆ ಎಂದರು.

ವಿಧಾನ ಪರಿಷತ್ ಸದಸ್ಯ ಪಿ.ಎಚ್ ಪೂಜಾರ ಮಾತನಾಡಿ, ಬಾಗಲಕೋಟೆ ಸಮಗ್ರ ಅಭಿವೃದ್ಧಿ ಚರಂತಿಮಠರಿಂದ ಮಾತ್ರ ಸಾಧ್ಯ. ಮುಳುಗಡೆಯಂತಹ ಗಂಭೀರ ಪರಿಸ್ಥಿತಿಯಲ್ಲೂ ಜನಸಾಮಾನ್ಯರಿಗೆ ತೊಂದರೆ–ಯಾಗದಂತೆ ಕಾರ್ಯನಿರ್ವಹಿಸಿದ್ದಾರೆ. ಈ ಭಾರಿ ಉಪಚುನಾವಣೆಯಲ್ಲಿ ಮತ್ತೊಮ್ಮೆ ಬೆಂಬಲಿಸಿ ಅವಕಾಶ ನೀಡಬೇಕು ಎಂದರು.

ಜಮಖಂಡಿ ಶಾಸಕ ಜಗದೀಶ್ ಗುಡಗುಂಟಿ, ಮಾಜಿ ಶಾಸಕ ಎಂ.ಕೆ ಪಟ್ಟಣಶೆಟ್ಟಿ, ಜೆಡಿಎಸ್ ಜಿಲ್ಲಾಧ್ಯಕ್ಷ ಹಣಮಂತ ಮಾವಿಮರದ, ಬಿಜೆಪಿ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ್, ರಾಜ್ಯ ಬಿಜೆಪಿ ಕಾರ್ಯದರ್ಶಿ ಶರಣು ತಳ್ಳಿಕೇರಿ, ಜಿಲ್ಲಾ ಪ್ರದಾನ ಕಾರ್ಯದರ್ಶಿ ರಾಜು ನಾಯಕ, ಸರಸ್ವತಿ ಕುರಬರ, ಶೀವಲೀಲಾ ಪಟ್ಟಣಶೆಟ್ಟಿ ಕಿರಣ ಕೋರಿ, ಮಲ್ಲು ಕಾಂಬಳೆ, ವಿಶ್ವನಾಥ ವೈಜಾಪುರ ಸೇರಿದಂತೆ ಬಿಜೆಪಿ ಜೆಡಿಎಸ್ ನಾಯಕರು ಮತ್ತು ಕಾರ್ಯಕರ್ತರು ಉಪಸ್ಥಿತರಿದ್ದರು.

# ಮಹಾವೀರ ಜಯಂತಿ ಸರಳ ಆಚರಣೆ



• ಮಲ್ಲಮ್ಮ ನುಡಿ ವಾರ್ತೆ, ಬಾಗಲಕೋಟೆ

ಬಾಗಲಕೋಟೆ ವಿಧಾನಸಭಾ ಉಪ ಚುನಾವಣೆ ಹಿನ್ನಲೆಯಲ್ಲಿ ನೀತಿ ಸಂಹಿತೆ ಜಾರಿಯಲ್ಲಿರುವದರಿಂದ ಮಹಾವೀರ ಜಯಂತಿಯನ್ನು ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವ ಮೂಲಕ ಸರಳವಾಗಿ ಆಚರಿಸಲಾಯಿತು. ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಜಿಲ್ಲಾಧಿಕಾರಿ ಸಂಗಪ್ಪ, ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ಆಹಾರ ಇಲಾಖೆಯ ಜಂಟಿ ನಿರ್ದೇಶಕ ಶ್ರೀಶೈಲ ಕಂಕಣವಾಡಿ ಸೇರಿದಂತೆ ಇತರರು ಮಹಾವೀರರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು. ಈ ಸಂದರ್ಭದಲ್ಲಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಮಹಾವೀರ ಜಯಂತಿ



• ಮಲ್ಲಮ್ಮ ನುಡಿ ವಾರ್ತೆ ಮುದಗಲ್

ಇಲ್ಲಿನ ಜೈನ ಸಮುದಾಯವರಿಂದ ಪುರಸಭೆ ಕಾರ್ಯಾಲಯದಲ್ಲಿ ಭಗವಾನ ಮಹಾವೀರ ಜಯಂತಿ ಸೋಮವಾರ ಆಚರಣೆ ಮಾಡಲಾಯಿತು.

ಭಗವಾನ ಮಹಾವೀರ ಭಾವಚಿತ್ರಕ್ಕೆ ಸಮುದಾಯದ ಮುಖಂಡ ಜವಳಿ ವ್ಯಾಪಾರಿ ಜವಾರಲಾಲ್ ಶೇಟ್ ಹಾಗೂ ಪುರಸಭೆ ಸಿಬ್ಬಂದಿ ಚೆನ್ನಮ್ಮ ದಳವಾಯಿಮಠ ಪೂಜೆ ಸಲ್ಲಿಸಿ ಪುಷ್ಪರ್ಚನೆ ಮಾಡಿದರು. ಪುರಸಭೆ ಮಾಜಿ ಸದಸ್ಯ ಸುರೇಶ ಶೆಟ್ ಜಾಂಗಡಾ, ಕ್ರೀಡಾ ಶಿಕ್ಷಕ ಎ□□□ನ್ ಅಕ್ಕಿ, ಸಂಜೀವ ಶೆಟ್, ಸುರೇಂದ್ರ ಶೆಟ್, ಮಹೇಂದ್ರ ಶೆಟ್, ಪ್ರವೀಣ ಶೆಟ್, ಮಹೇಠದ್ರ ಶೆಟ್, ರೋಹಿತ್ ಶೆಟ್, ನರೇಶ್ ಸೆಟ್ ಪುರಸಭೆ ಸಿಬ್ಬಂದಿಗಳು ಸೇರಿದಂತೆ ಇನ್ನಿತರರು ಇದ್ದರು.

# ಪಡಿತರ ಅಕ್ಕಿ ವಶ



ಬಳ್ಳಾರಿ,: ಇಲ್ಲಿನ ಗ್ರಾಮೀಣ ಪೊಲೀಸ್ ಠಾಣಾ ವ್ಯಾಪ್ತಿಯ ಎನ್.ಪಿ.ಆರ್. ಲೇಔಟ್ ಪಕ್ಕದ ಗುಡ್ಡದ ಅಂಚಿನ ಸಾರ್ವಜನಿಕ ಸ್ಥಳದಲ್ಲಿ ಆಕ್ರಮವಾಗಿ ದಾಸ್ತಾನು ಮಾಡಿದ್ದ 40.80 ಕ್ವಿಂಟಾಲ್, ರೂ.93,840 ಮೌಲ್ಯದ ಪಡಿತರ ಅಕ್ಕಿಯನ್ನು ವಶಪಡಿಸಿಕೊಳ್ಳಲಾಗಿದೆ.

ಈ ಪ್ರಕರಣಕ್ಕೆ ಸಂಬಂಧಿಸಿ ಗುಗ್ಗರಹಟ್ಟಿಯ ಶರಭಯ್ಯ (50) ಈತನ ಮೇಲೆ ಎಫ್ ಐ ಆರ್ ಮಾಡಿದೆ.

ಮತ್ತೊಂದು ಪ್ರಕರಣದಲ್ಲಿ ಆಹಾರ ಮತ್ತು ನಾಗರೀಕ ಇಲಾಖೆಯ ಅಧಿಕಾರಿಗಳು ಜಂಟಿ ದಾಳಿ ನಡೆಸಿ ಕೊಳಗಲ್ಲು ಸಿರುಗುಪ್ಪ ರಸ್ತೆಯ ಮದ್ಯದಲ್ಲಿರುವ ಲೇಔಟ್ನಲ್ಲಿ ಸಂಗ್ರಹಿಸಿ ಇಡಲಾಗಿದ್ದ 82.80 ಕ್ವಿಂಟಾಲ್, ರೂ. 1,90,440 ಮೌಲ್ಯದ ಪಡಿತರ ಅಕ್ಕಿಯನ್ನು ಸಹ ವಶಪಡಿಸಿಕೊಳ್ಳಲಾಗಿದೆ

# ಕುಡಿವ ನೀರಿನ ಸಮಸ್ಯೆ ಬಗ್ಗೆ ಪರಿಶಿಲನೆ



• ಮಲ್ಲಮ್ಮ ನುಡಿ ವಾರ್ತೆ, ಮುದಗಲ್

ಸ್ಥಳೀಯ ಪಟ್ಟಣದ ನಾಗರಿಕರಿಗೆ ಕಳೆದ ನಾಲ್ಕು ವರ್ಷಗಳಿಂದ ತಲೆದೋರಿರುವ ಕುಡಿವ ನೀರಿನ ಸಮಸ್ಯೆ ಸೂಕ್ತ ಪರಿಹಾರ ಕಲ್ಪಿಸಬೇಕಾಗಿದೆ. ಈ ನಿಟ್ಟಿನಲ್ಲಿ ಇಲಾಖೆಯ ಮಂತ್ರಿಗಳ ಜೊತೆ ಮಾತನಾಡಿದ್ದು ಸಕರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದು ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಇಲಾಖೆಯ ರಾಜ್ಯ ವಿಶೇಷ ಕಾರ್ಯದರ್ಶಿ ಎಂ. ಚಂದ್ರಶೇಖರ ದಫೆದಾರ್ ತಿಳಿಸಿದರು.

ಪಟ್ಟಣಕ್ಕೆ ಕುಡಿವ ನೀರು ಸರಬರಾಜು ಮಾಡುವ ನವಲಿ ಹತ್ತಿರದ ಜಾಕ್ವೆಲ್ ಪಂಪ್ ಹೌಸ್ ಹಾಗೂ ಕನ್ನಾಪೂರಹಟ್ಟಿ ಹತ್ತಿರದ ಜಲ ಶುದ್ಧಿಕರಣ ಘಟಕ ಸ್ಥಳಕ್ಕೆ ಬೇಟಿ ನೀಡಿ ಅಧಿಕಾರಿಗಳಿಂದ ತಾಂತ್ರಿಕ ಮಾಹಿತಿ ಪಡೆದು ಮಾತನಾಡಿದರು.

ಇಗಾಗಲೆ ಪಟ್ಟಣಕ್ಕೆ ಸರಬರಾಜು ಮಾಡಲಾಗುವ ನಿರಂತರ ಕುಡಿವ ನೀರಿನ ಯೋಜನೆ ಅಡಿ ಪಂಪ್ ಹೌಸ್ ದಿಂದ ಪ್ರತಿ ಸೆಕೆಂಡಿಗೆ ಹತ್ತು ಲೀಟರ್ ನೀರು ಹೊರ ಬರುತ್ತೆ. ಆದರೆ ಇನ್ನೂ 60 ಹೆಚ್ ಪಿ. ಶಕ್ತಿಯ ಎರಡು ಪಂಪ್ ಮೋಟರ್ ಹೆಚ್ಚುವರಿಯಾಗಿ ಅಳವಡಿಸಿದರೆ ಪ್ರತಿ ಸೆಕೆಂಡಿಗೆ ಇಪ್ಪತ್ತು ಲೀಟರ್ ಸಿಗಲಿದೆ.ಇದರಿಂದ ಪ್ರತಿ ಹತ್ತರಿಂದ ಹನ್ನೆರಡು ದಿನಗಳಿಗೊಮ್ಮೆ ಸರಬರಾಜು ಮಾಡಲಾಗುವ ನೀರು 5–6 ದಿನಗಳಿಗೊಮ್ಮೆಯಾದರೂ ಸರಬರಾಜು ಮಾಡಬಹುದಾಗಿದೆ ಎಂದು ಸಿಬ್ಬಂದಿಗಳು ಕೆಲ ತಾಂತ್ರಿಕ ಕಾರಣಗಳ ಮಾಹಿತಿ ನೀಡಿದರು.

ಅದಿವೇಶನದ ವೇಳೆ ಇಲಾಖೆಯ ಮಂತ್ರಿಗಳ ಜೊತೆ ಸಮಾಲೋಚನೆ ಮಾಡಲಾಗಿದೆ. ಕೆಲ ತಾಂತ್ರಿಕ ಕಾರಣಗಳ ನೆಪ ಹೇಳುತಿದ್ದು ಯಾವುದೆ ಕಾರಣಕ್ಕೂ ಮುದಗಲ್ ಪಟ್ಟಣಕ್ಕೆ ಕುಡಿವ ನೀರು ಕಲ್ಪಿಸುವ ಯೋಜನೆ ಮಂಜೂರು ಮಾಡಲು ಬಿಗಿಪಟ್ಟು ಹಿಡಿಯಲಾಗಿದೆ.ಈ ಬಗ್ಗೆ ರಾಜಕೀಯ ಮುಖಂಡರು ಸಹಕಾರ ನೀಡುವ ಮೂಲಕ ಜನರ ಸಮಸ್ಯೆಗೆ ಸ್ಪಂದಿಸುವಂತ ಕೆಲಸವಾಗಬೇಕು. ಶೀಘ್ರಹದಲ್ಲಿ ಕುಡಿವ ನೀರಿನ ಸಮಸ್ಯೆಗೆ ಸೂಕ್ತ ಪರಿಹಾರ ಕಲ್ಪಿಸುವದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಲಾಗುವದು ಎಂದು ಭರವಸೆ ನೀಡಿದರು. ಪುರಸಭೆ ಮುಖ್ಯಾಧಿಕಾರಿ ಪ್ರವೀಣ ಬೋಗಾರ್,ಸಿಬ್ಬಂದಿ ರಂಗನಾಥ,ಪ್ರಮುಖರಾದ ಮಂಜುನಾಥ ಬನ್ನಿಗೋಳ್ಕರ್,ಕಾರ್ಯನಿರತ ಪತ್ರಕರ್ತ ಸಂಘದ ಜಿಲ್ಲಾ ಕಾರ್ಯದರ್ಶಿ ಶರಣಯ್ಯ ಒಡೆಯರ್, ಬಸಣ್ಣ ನಕಲದಿನ್ನಿ,ರಮೇಶ ತೊಗರಿ,ಶರಣಪ್ಪ ಸೇರಿದಂತೆ ಅನೇಕರು ಇದ್ದರು.

# ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ ಗೆಲ್ಲಿಸಿ: ಜಾರಕಿಹೊಳಿ



• ಮಲ್ಲಮ್ಮ ನುಡಿ ವಾರ್ತೆ, ಬಾಗಲಕೋಟೆ

ಬಡಜನರ ಕಷ್ಟಗಳಿಗೆ ಸ್ಪಂದಿಸಿ ಗ್ಯಾರಂಟಿ ಯೋಜನೆಗಳ ಮೂಲಕ ಅವರ ಜೀವನೋದ್ಧಾರಕ್ಕೆ ಶ್ರಮಿಸಿದ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿ ಅಭ್ಯರ್ಥಿ ಉಮೇಶ ಮೇಟಿಯವರನ್ನು ಗೆಲ್ಲಿಸುವ ಮೂಲಕ ಕಾಂಗ್ರೆಸ್ ಪಕ್ಷವನ್ನು ಬಲಗೊಳಿಸಬೇಕೆಂದು ಯುವ ಕಾಂಗ್ರೆಸ್ ರಾಜ್ಯ ಪ್ರಧಾನ ಕಾರ್ಯದರ್ಶಿ ರಾಹುಲ್ ಜಾರಕಿಹೊಳಿ ಹೇಳಿದರು.

ಬಾಗಲಕೋಟೆ ಉಪ ಚುನಾವಣೆಯ ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ ಪರ ಶಿರೂರ ಪಟ್ಟಣದಲ್ಲಿ ಹಮ್ಮಿಕೊಂಡ ಪ್ರಚಾರ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ದಿ. ಎಚ್.ವೈ.ಮೇಟಿಯವರು ಸಂಸದರಾಗಿ, ಸಚಿವರಾಗಿ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಮಾಡುವ ಮೂಲಕ ಸರ್ವ ಸಮಾಜದ ಜನರ ಪ್ರೀತಿ ವಿಶ್ವಾಸ ಗಳಿಸಿದ್ದರು. ಈ ದಿಸೆಯಲ್ಲಿ ಅವರ ಪುತ್ರ ಉಮೇಶ ಮೇಟಿಯವರನ್ನು ಗೆಲ್ಲಿಸಬೇಕೆಂದು ವಿನಂತಿಸಿಕೊಂಡರು.

ನಂತರ ವಾಲ್ಮೀಕಿ ಕಾಲೋನಿಗೆ ಭೇಟಿ ನೀಡಿ ಸಮಾಜ ಬಾಂಧವರಲ್ಲಿ ಮತಯಾಚಿಸಿದರು. ಗ್ರಾಮೀಣ ಕಾಂಗ್ರೆಸ್ ಘಟಕದ ಅಧ್ಯಕ್ಷ ಎಸ್. ಎನ್.ರಾಂಪುರ, ಗ್ರಾಪಂ. ಮಾಜಿ ಅಧ್ಯಕ್ಷ ರಂಗಪ್ಪ ಮಳ್ಳಿ, ಸಿದ್ದಪ್ಪ ಗಾಳಿ, ಹನಮಂತ ಆಡಿನ,

ಜಗದೀಶ ದೇಸಾಯಿ, ಪಿಕೆಪಿಎಸ್ ಅಧ್ಯಕ್ಷ ಸಿದ್ದಪ್ಪ ಹಂಡ್ರಗಲ್ಲ, ಗ್ರಾಪಂ ಮಾಜಿ ಸದಸ್ಯರಾದ ರಾಮನಗೌಡ ಮಾಚಾ, ಸುರೇಶ ರಾಜೂರ, ಮುದಕಪ್ಪ ಬಿಲ್ಲಾರ, ಹನಮಂತ ಗೋಡಿ, ಮಹಾಂತೇಶ ಕೋಟಿಕಲ್ಲ ಹಾಗೂ ಶಿರೂರಿನ ಕಾಂಗ್ರೆಸ್ ಕಾರ್ಯಕರ್ತರು, ಯುವಕರು ಇದ್ದರು.

# ಪತ್ರಕರ್ತರ ಧ್ವನಿ ಸಂಘಟನೆಯ ಬಲವರ್ಧನೆಗಾಗಿ ಕರೆ: ಮಲ್ಲಿಕಾರ್ಜುನ



• ಮಲ್ಲಮ್ಮ ನುಡಿ ವಾರ್ತೆ ಯಲಬುರ್ಗಾ

ಕರ್ನಾಟಕ ಪತ್ರಕರ್ತರ ಧ್ವನಿ ಸಂಘಟನೆಯ ಬಲವರ್ಧನೆಗಾಗಿ ಪ್ರತಿಯೊಬ್ಬರೂ ಶ್ರಮಿಸಬೇಕು ಅಂದಾಗ ಸಂಘಟನೆ ಬೆಳೆಯಲು ಸಾದ್ಯ ಎಂದು ಧ್ವನಿ ಸಂಘಟನೆಯ ರಾಜ್ಯ ಅಧ್ಯಕ್ಷ ಬಂಗ್ಲೆ ಮಲ್ಲಿಕಾರ್ಜುನ ಅವರು ಯಲಬುರ್ಗಾದ ಪ್ರವಾಸಿ ಮಂದಿರದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿ ಪ್ರತಿಯೊಬ್ಬರಿಗೂ ಅಧ್ಯಕ್ಷ ಸ್ಥಾನ ಸಿಗಬೇಕು ಒಬ್ಬರಿಗೆ 2 ವರ್ಷ ಅವಧಿಯನ್ನು ನಿಗದಿ ಮಾಡಲಾಗಿದೆ ಆದ್ದರಿಂದ ಸರ್ವರು ಉತ್ಸಾಹದಿಂದ ಕಾರ್ಯ ನಿರ್ವಹಿಸಬೇಕು ಮತ್ತು ಅಗಸ್ಟ ತಿಂಗಳದ 2 ನೆ ವಾರದಲ್ಲಿ ರಾಜ್ಯಮಟ್ಟದ ಸಮಾವೇಶದಲ್ಲಿ ತಾವೆಲ್ಲರು ಭಾಗವಹಿಸಿ ಯಶಸ್ವಿಗೊಳಿಸಬೇಕು ಎಂದರು. ಈ ವೇಳೆ ಜಿಲ್ಲಾ ಅದ್ಯಕ್ಷ ಸುನೀಲಕುಮಾರ ಮಠದ, ಜಿಲ್ಲಾ ಸಹ ಕಾರ್ಯದರ್ಶಿ ವೀರಯ್ಯ ಹಿರೇಮಠ, ಯಲಬುರ್ಗಾ ತಾಲೂಕು ಗೌರವ ಅದ್ಯಕ್ಷ ಶರಣಬಸಪ್ಪ ದಾನಕೈ, ಜಿಲ್ಲಾ ಉಪಾಧ್ಯಕ್ಷ ಭೀಮಾಶಂಕರ ಪಾಣಿಗಾವ್,ಕುಕನೂರ ತಾಲೂಕು ಅಧ್ಯಕ್ಷ ಚಂದ್ರು ಭನಾಪೂರ ಹಾಗು ಯಲಬುರ್ಗಾ ತಾಲೂಕು ಧ್ವನಿ ಸಂಘಟನೆಯ ಪತ್ರಕರ್ತರಾದ ವ್ಹಿ.ಎಸ್.ಶಿವಪ್ಪಯ್ಯನಮಠ, ಹುಸೇನ ಮೋತೆಖಾನ, ಸಿ.ಎ.ಆದಿ, ನೀಲಪ್ಪ ಖಾನವಳಿ, ಶ್ರೀಕಾಂತ ಅಂಗಡಿ, ಮಲ್ಲಿಕಾರ್ಜುನ ಹಡಪದ ಭಾಗವಹಿಸಿದ್ದರು.

# ಪತ್ರಕರ್ತರ ಸಮಸ್ಯೆಗೆ ಸ್ಪಂದಿಸಲು ಸದಾ ಸಿದ್ಧ: ಮಲ್ಲಿಕಾರ್ಜುನ

ಮಲ್ಲಮ್ಮ ನುಡಿ ವಾರ್ತೆ

ಕುಕನೂರ: ಭಾರತ ಸಂವಿಧಾನದ ನಾಲ್ಕನೇ ಅಂಗವೆಂದು ಕರೆಯಲ್ಪಡುವ ಪತ್ರಿಕೋದ್ಯಮದ ಪ್ರಮುಖ ಕೊಂಡಿಯಾಗಿರುವ ವರದಿಗಾರರು ಇಂದಿನ ದಿನಗಳಲ್ಲಿ ಅನೇಕ ಸಂಕಷ್ಟಗಳನ್ನು ಎದುರಿಸುತ್ತಿದ್ದಾರೆ. ಅವರ ಸಮಸ್ಯೆಗಳಿಗೆ ಸ್ಪಂದಿಸಲು ಕೊನೆಯ ಉಸಿರಿರುವ ತನಕ ಸಿದ್ಧನಾಗಿದ್ದೇನೆ ಎಂದು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಧ್ವನಿ ಸಂಸ್ಥಾಪಕ ರಾಜ್ಯಾಧ್ಯಕ್ಷ ಬಂಗ್ಲೆ ಮಲ್ಲಿಕಾರ್ಜುನ ಹೇಳಿದರು.



ಸೋಮವಾರ ಕುಕನೂರ ಪಟ್ಟಣಕ್ಕೆ ಆಗಮಿಸಿ ಬಳಿಕ ಪ್ರವಾಸಿ ಮಂದಿರದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು,

"ಪತ್ರಕರ್ತರನ್ನು ಸಂವಿಧಾನದ ನಾಲ್ಕನೇ ಅಂಗ ಎಂದು ಕರೆಯಲಾಗುತ್ತದೆ. ಆದರೆ ಅವರಿಗೆ ಅಗತ್ಯವಿರುವ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಸರ್ಕಾರಗಳು ಮುಂದಾಗುತ್ತಿಲ್ಲ" ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಗ್ರಾಮೀಣ ಬಸ್ ಪಾಸ್ ಯೋಜನೆ ಕುರಿತು ಮಾತನಾಡಿದ ಅವರು, "ಪತ್ರಕರ್ತರಿಗೆ ಬಸ್ ಪಾಸ್ ನೀಡಲು ಸರ್ಕಾರ ಅನುದಾನ ಮೀಸಲಿಟ್ಟಿದ್ದರೂ, ವಿಧಿಸಿರುವ ಕಠಿಣ ಮಾನದಂಡಗಳಿಂದ ಹೆಚ್ಚಿನವರಿಗೆ ಈ ಸೌಲಭ್ಯ ಸಿಗುತ್ತಿಲ್ಲ. ಯೋಜನೆ ಜಾರಿಗೆ ಬಂದು ಎರಡು ವರ್ಷವಾದರೂ ಬೆರಳಣಿಕೆಯಷ್ಟು ಜನರಿಗೆ ಮಾತ್ರ ಸೌಲಭ್ಯ ಲಭಿಸಿದ್ದು, ಇದು ಕೇವಲ ಹೆಸರಷ್ಟೇ ಆಗಿದೆ" ಎಂದು ಟೀಕಿಸಿದರು.

ಹಲವಾರು ಸಂದರ್ಭಗಳಲ್ಲಿ ಪತ್ರಕರ್ತರು ತಮ್ಮ ಜೀವದ ಹಂಗನ್ನೇ ಪಣಕ್ಕಿಟ್ಟು ಸುದ್ದಿ ಸಂಗ್ರಹಿಸಬೇಕಾಗುತ್ತದೆ. ಆದರೂ ಅವರಿಗೆ ಕನಿಷ್ಠ ಜೀವ ವಿಮೆ ಸೌಲಭ್ಯವೂ ಲಭ್ಯವಾಗದಿರುವುದು ವಿಷಾದನೀಯ ಎಂದು ಹೇಳಿದರು.

ಪತ್ರಕರ್ತರು ಎದುರಿಸುತ್ತಿರುವ ಸಮಸ್ಯೆಗಳ ವಿರುದ್ಧ ಹೋರಾಡಲು ಸದಾ ಸಿದ್ಧನಿದ್ದು, ಅವರ ಪರವಾಗಿ ನಿಲ್ಲುವುದಾಗಿ ಬಂಗ್ಲೆ ಮಲ್ಲಿಕಾರ್ಜುನ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಧ್ವನಿ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಸುನಿಲ್ ಕುಮಾರ ಮಠದ, ಜಿಲ್ಲಾ ಸಹ ಕಾರ್ಯದರ್ಶಿ ವೀರಯ್ಯ ವಿ. ಹಿರೇಮಠ,

ಜಿಲ್ಲಾ ಉಪಾಧ್ಯಕ್ಷ ಭೀಮಾಶಂಕರ ತಾಲೂಕು ಘಟಕದ ಅಧ್ಯಕ್ಷ ಚಂದ್ರು ಆರ್. ಭಾನಾಪುರ, ತಾಲೂಕು ಪ್ರಧಾನ ಕಾರ್ಯದರ್ಶಿ ಬಸವರಾಜ ಕೋನಾರಿ, ತಾಲೂಕು ಉಪಾಧ್ಯಕ್ಷ ಮುರಾರಿ ಭಜಂತ್ರಿ, ಸದಸ್ಯರಾದ ಅಲ್ಲಾಬೇಗಂ ಅಮರವತಿ, ಸಲೀಂ ಅಮರವತಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ಮಲ್ಲಮ್ಮ ನುಡಿ ವಿಶೇಷಾಂಕ ಬಿಡುಗಡೆ



**ಸಿಂಧನೂರು:** ನಗರದ ಪ್ರಸಿದ್ಧ ಸಹನಾ ಮಕ್ಕಳ ಆಸ್ಪತ್ರೆಯಲ್ಲಿ ಯುಗಾದಿ ಹಬ್ಬದ ಪ್ರಯುಕ್ತ 'ಮಲ್ಲಮ್ಮ ನುಡಿ' ಕನ್ನಡ ದಿನಪತ್ರಿಕೆಯ ವಿಶೇಷ ಸಂಚಿಕೆಯನ್ನು ಅದ್ದೂರಿಯಾಗಿ ಬಿಡುಗಡೆ ಮಾಡಲಾಯಿತು.

ಖ್ಯಾತ ಮಕ್ಕಳ ತಜ್ಞರಾದ ಡಾ. ಕೆ. ಶಿವರಾಜ ಪಾಟೀಲ್ ಅವರು ಪತ್ರಿಕೆಯ ವಿಶೇಷಾಂಕವನ್ನು ಬಿಡುಗಡೆ ಮಾಡಿ, ಹಬ್ಬದ ಶುಭಾಶಯ ಕೋರಿದರು. ಸಾಮಾಜಿಕ ಕಳಕಳಿಯೊಂದಿಗೆ ಪತ್ರಿಕೋದ್ಯಮ ಸಾಗಲಿ ಎಂದು ಆಶಿಸಿದರು. ಈ ಸಂದರ್ಭದಲ್ಲಿ ಆಸ್ಪತ್ರೆಗೆ ಬಂದಿದ್ದ ತಾಯಿ-ಮಕ್ಕಳು ಹಾಗೂ ಸಾರ್ವಜನಿಕರ ಸಮ್ಮುಖದಲ್ಲಿ ಅರ್ಥಪೂರ್ಣವಾಗಿ ಕಾರ್ಯಕ್ರಮ ಜರುಗಿತು.

## ಜಯಶ್ರೀ ಹಿರೇಮಠ ಅವರ ಶಿವಗಣಾರಾಧನೆ



ದಿ॥ಶ್ರೀಮತಿ ಜಯಶ್ರೀ ಪಟದಯ್ಯ ಹಿರೇಮಠ ಇವರು ದಿನಾಂಕ:27.03.2026 ಮಧ್ಯಾಹ್ನದಂದು:10:50 ದೈವಾಧೀನರಾಗಿದ್ದಾರೆ.ತಿಳಿಸಲು ವಿಷಾದಿಸುತ್ತೇವೆ.ಅವರ ಶಿವಗಣಾರಾಧನೆಯನ್ನು ದಿನಾಂಕ :31:03:2026 ಮಂಗಳವಾರ ಮುಂಜಾನೆ 10:30ಕ್ಕೆ ಹೂಡುಕೋ ಕಾಲೋನಿ,ಮುಂಡರಗಿ ಜಿ॥ಗದಗ ಗೃಹದಲ್ಲಿ ನೆರವೇರಿಸಲಾಗುವುದು. ಕಾರಣ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ. ದುಃಖತಪ್ತರುಪತಿ,ಮಕ್ಕಳು,ಮೊಮ್ಮಕ್ಕಳು ಹಾಗೂ ಅಪಾರ ಬಂಧು- ಬಳಗದವರು.ಮೊ:9886188893.



**ಯುಗಾದಿ ವಿಶೇಷ ಸಂಚಿಕೆಯನ್ನು ಜಾತ್ಯತೀತ ಜನತಾದಳ ಪಕ್ಷದ ನಗರ ಘಟಕ ಅಧ್ಯಕ್ಷರು ಎನ್ .ಎಸ್. ವಂಡ್ರಿ ಸೋಮವಾರ ಸಾಯಂಕಾಲ ಜಿಲ್ಲಾ ಜೆಡಿಎಸ್ ಪಕ್ಷದ ಕಚೇರಿಯಲ್ಲಿ ಬಿಡುಗಡೆಗೊಳಿಸಿದರು. ಈ ಸಂದರ್ಭದಲ್ಲಿ ಅವರು ಮಾತನಾಡುತ್ತಾ ಕಲ್ಯಾಣ ಕರ್ನಾಟಕ ಭಾಗದ ಮಲ್ಲಮ್ಮ ನುಡಿ ದಿನಪತ್ರಿಕೆ ಉನ್ನತ ಮಟ್ಟಕ್ಕೆ ಬೆಳಬೇಕೆಂದು ಮಾತನಾಡಿದರು. ಈಗಾಗಲೇ ಈ ಮಲ್ಲಮ್ಮ ನುಡಿ ದಿನಪತ್ರಿಕೆ ಕಲ್ಯಾಣ ಕರ್ನಾಟಕ ಎಲ್ಲಾ ಜಿಲ್ಲೆಗೆ ಸರ್ಕಾರ ಮಾನ್ಯತೆ ಪಡೆದಿದ್ದು. ಕರ್ನಾಟಕ ರಾಜ್ಯದ ಎಲ್ಲಾ 31 ಜಿಲ್ಲೆಗಳಲ್ಲಿ ಪತ್ರಿಕೆ ಬೆಳೆಲೆಂದು ಶುಭ ಹಾರೈಸಿದರು.**

## ಭಗವಾನ್ ಶ್ರೀ ಮಹಾವೀರ ಜಯಂತಿ



**ಹಳಿಯಾಳ:** ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ಪಟ್ಟಣದ ತಹಶೀಲ್ದಾರ್ ಕಚೇರಿ ಸಭಾಂಗಣದಲ್ಲಿ ಭಗವಾನ್ ಶ್ರೀ ಮಹಾವೀರರ ಜಯಂತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು ಈ ಕಾರ್ಯಕ್ರಮದಲ್ಲಿ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಶಾಸಕ ಆರ್ ವಿ ದೇಶಪಾಂಡೆ ಅವರು ಮಹಾವೀರರು ತಮ್ಮ ರಾಜ್ಯ ವೈಭವವನ್ನು ತ್ಯಜಿಸಿ ಸಾಮಾನ್ಯರ ಕಷ್ಟಕ್ಕೆ ಸ್ಪಂದಿಸುವ ಕಾರ್ಯಕ್ರಮಗಳಿಗೆ ಮುನ್ನುಡಿ ಬರೆದು ಇಂದಿಗೂ ಕೂಡ ನಮಗೆಲ್ಲರಿಗೂ ಅವರ ಆದರ್ಶ ಮಾರ್ಗದರ್ಶಕವಾಗಿದೆ ಅವರ ಸಾಮಾಜಿಕ ಸೇವೆ ಕಳಕಳಿ ನಮಗೆ ಆದರ್ಶವಾಗಿದೆ ಎಂದರು.

ಈ ಸಮಾರಂಭದಲ್ಲಿ ಸಮಾಜದ ಮುಖಂಡರಾದ ಧರಣೇಂದ್ರ ಶಾಸ್ತ್ರಿ ಸಮಾಜದ ಅಧ್ಯಕ್ಷರಾದ ಬಸವರಾಜ್ ಲಕ್ಕನಗೌಡ್ರ ತಹಶೀಲ್ದಾರ್ ಫಿರೋಜ್ ಷ ಸೋಮನ ಕಟ್ಟಿ ಸಮ್ಮನ ಸಿಪಿಐ ಜೈಪಾಲ್ ಪಾಟೀಲ್ ಹಾಗೂ ಸಮಾಜದ ಬಾಂಧವರು ಉಪಸ್ಥಿತರಿದ್ದರು.



**ಕರ್ನಾಟಕ ಕ್ರಿಕೆಟ್ ಅಸೋಸಿಯೇಷನ್ ಅಧ್ಯಕ್ಷ ವೆಂಕಟೇಶ್ ಪ್ರಸಾದ್, ಕಾರ್ಯದರ್ಶಿ ವಿನಯ್, ಡಿ.ಎನ್.ಎ. ಎಂ ಡಿ ವೆಂಕಟ್, ಆರ್ ಸಿಬಿ ಸಿಇಓ ರಾಜೇಶ್ ಮೆನನ್ ಮತ್ತಿತರರು ಡಿಸಿಎಂ ಡಿ ಕೆ ಶಿವಕುಮಾರ್ ಅವರ ಜತೆ ಸದಾಶಿವನಗರ ನಿವಾಸದಲ್ಲಿ ಸೋಮವಾರ ಸಮಾಲೋಚನೆ ನಡೆಸಿದರು.**



**ಕೆಂಭಾವಿಯ ಹೇಮರಡ್ಡಿ ಮಲ್ಲಮ್ಮ ಸೌಹಾರ್ದ ಸಹಕಾರಿ ಸಂಘದ ಆಡಳಿತ ಮಂಡಳಿಯಿಂದ ಸಂಚಿಕೆ ಅನಾವರಣ.**


# ಸಮ್ಮೇಳನ ಸಮಿತಿಗಳ ಪೂರ್ವ ಸಿದ್ಧತಾ ಸಭೆ

• **ಮಲ್ಲಮ್ಮ ನುಡಿ ವಾರ್ತೆ ಬೀದರ್**

ಬಸವಣ್ಣನಡೆದಾಡಿದನೆಲದಲ್ಲಿನಡೆಯುತ್ತಿರುವ ರಾಜ್ಯ ಪತ್ರಕರ್ತರ ಸಮ್ಮೇಳನವನ್ನು ಅರ್ಥಪೂರ್ಣವಾಗಿದೆ ಆಚರಣೆ ಮಾಡುವ ಮೂಲಕ ಇತಿಹಾಸ ಪುಟದಲ್ಲಿ ದಾಖಲೆಯಾಗುವ ಸಮ್ಮೇಳನವನ್ನು ಮಾಡಲು ಸಂಘಟಿತ ಪ್ರಯತ್ನ ನಡೆಸುವಂತೆ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಕರೆ ನೀಡಿದರು. ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಶನಿವಾರ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ 40ನೇ ಪತ್ರಕರ್ತರ ರಾಜ್ಯ ಸಮ್ಮೇಳನದ ವಿವಿಧ ಸಮಿತಿಗಳ ಪೂರ್ವ ತಯಾರಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಬೀದರ್ ಪತ್ರಕರ್ತರ ಕೋರಿಕೆ ಮೇರೆಗೆ ಇಲ್ಲಿಗೆ ಸಮ್ಮೇಳನ ನೀಡಲಾಗಿದೆ. ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು, ವಿರೋಧ ಪಕ್ಷದ ನಾಯಕರು, ವಿಧಾನ ಸಭೆ, ವಿಧಾನ ಪರಿಷತ್ ಸಭಾಪತಿಗಳನ್ನು ಹಾಗೂ ಹಿರಿಯ ಪತ್ರಕರ್ತರು ಸೇರಿದಂತೆ ರಾಜ್ಯ ಮಟ್ಟದ ಎಲ್ಲ ಪತ್ರಿಕೆಗಳ ಸಂಪಾದಕರನ್ನು ಸಮ್ಮೇಳನಕ್ಕೆ ಅಹ್ವಾನಿಸಲಾಗಿದೆ ಎಂದರು.

ಎರಡು ದಿನದ ಸಮ್ಮೇಳನದಲ್ಲಿ ಉದ್ಘಾಟನೆ ಮತ್ತು ಸಮಾರೋಪ ಹೊರತುಪಡಿಸಿ, ಇನ್ನುಳಿದಂತೆ ಗೋಷ್ಠಿಗಳು, ಚಿಂತನ-ಮಂಥನ, ಸಂವಾದ ಮತ್ತು ಪ್ರಶಸ್ತಿ ಪ್ರದಾನ ಸಮಾರಂಭ ಕಾರ್ಯಕ್ರಮ ನಡೆಯಲಿದೆ. ನಾಡಿನಾದ್ಯಂತೆ ಈಗಾಗಲೇ ಎರಡೂವರೆ ಸಾವಿರ



ಪತ್ರಕರ್ತರು ಸಮ್ಮೇಳನಕ್ಕೆ ಬರಲು ನೋಂದಣಿ ಮಾಡಿಕೊಂಡಿದ್ದಾರೆ. ನಾಡಿನ ಪತ್ರಕರ್ತರು ಇಲ್ಲಿ ಬಂದು ಹೋಗುವ ತನಕ ಆತಿಥ್ಯ ನೀಡುವುದು ಸ್ವಾಗತ ಸಮಿತಿ ಜವಬ್ದಾರಿಯಾಗಿರುವ ಕಾರಣ ಎಲ್ಲರೂ ಒಟ್ಟಾಗಿ ಸಮ್ಮೇಳನ ಯಶಸ್ವಿಗೆ ದುಡಿಯಬೇಕು ಎಂದರು.

ಹೊಸ ಜಾಹಿರಾತು ನೀತಿಯಿಂದ ಪತ್ರಿಕೆಗಳ ಸಂಪಾದಕರಿಗೆ ಆಗುತ್ತಿರುವ ತೊಂದರೆ ಬಗೆಹರಿಸಲು ಮುಖ್ಯಮಂತ್ರಿಗಳಿಗೆ ಈಗಾಗಲೆ ಮನವಿ ಸಲ್ಲಿಸಲಾಗಿದ್ದು, ಸಮ್ಮೇಳನ ಸಂದರ್ಭದಲ್ಲೂ ಸಿಎಂಗೆ ಈ ಕುರಿತು ಮನವಿ ಮಾಡುವುದಾಗಿ ಭರವಸೆ ನೀಡಿದರು.

ಸ್ಮರಣ ಸಂಚಿಕೆ ಹಾಗೂ ಕೈಪಿಡಿಗಳನ್ನು ಪ್ರತ್ಯೇಕವಾಗಿ ಹೊರ ತರಲು ನಿರ್ಣಯಿಸಲಾಯಿತು. ವಸತಿ ಸಮಿತಿ, ಸಾರಿಗೆ ಸಮಿತಿಗಳು ಸೇರಿದಂತೆ ಎಲ್ಲ ಸಮಿತಿಗಳ ನಡುವೆಯೂ ಸೌಹಾರ್ದತೆಯ ಹೊಂದಾಣಿಕೆಯಿಂದ ಕೆಲಸ ಮಾಡಬೇಕು ಎಂದರು. ಛಾಯಾಚಿತ್ರ ಪ್ರದರ್ಶನ ಮತ್ತು ವ್ಯಂಗ್ಯಚಿತ್ರ ಪ್ರದರ್ಶನಗಳು ಅಚ್ಚುಕಟ್ಟಾಗಿ ನಡೆಯಬೇಕು. ಅದಕ್ಕಾಗಿ ಸಿದ್ಧತೆಗಳು ನಡೆಯಬೇಕು ಎಂದರು. ಹಿರಿಯರು ಹಾಗೂ ಮಾಜಿ ಜಿಲ್ಲಾಧ್ಯಕ್ಷರ ಸಲಹಾ ಸಮಿತಿ, ಪ್ರವಾಸ, ಆಹಾರ, ಮೆರವಣಿಗೆ, ವಸ್ತು ಪ್ರದರ್ಶನ ಮಾರಾಟ ಮಳಿಗೆ, ಪ್ರತಿನಿಧಿಗಳ ನೊಂದಣಿ ಹಾಗೂ ಕಿಟ್ ವಿತರಣಾ ಸಮಿತಿಗಳ ತಯಾರಿ ಕುರಿತು ಪೂರ್ವ ಸಿದ್ದತಾ ಸಭೆ ಜರುಗಿತು.

ಹಿರಿಯ ಪತ್ರಕರ್ತ ಶಿವಶರಣಪ್ಪ ವಾಲಿ ಮಾತನಾಡಿ, ಬೀದರ್ ಪತ್ರಕರ್ತರು ತಮಗೆ ಸಿಕ್ಕ ಅವಕಾಶ ಸದುಪಯೋಗಪಡಿಸಿಕೊಳ್ಳಬೇಕು. ತಗಡೂರು ಅವರಂಥ ರಾಜ್ಯಾಧ್ಯಕ್ಷರು ನಮಗೆ ಸಿಕ್ಕಿದ್ದು ನಮ್ಮೆಲ್ಲರ ಸೌಭಾಗ್ಯ. ಜಿಲ್ಲೆಗೆ ದೊರಕಿರುವ 40ನೇ ರಾಜ್ಯ ಸಮ್ಮೇಳನ ಯಶಸ್ವಿಯಾಗಿಸಲು ವೈಮನಸ್ಸು ಬಿಟ್ಟು ಪ್ರತಿಯೊಬ್ಬರ ಸಹಭಾಗಿತ್ವ ಬಹಳ ಮುಖ್ಯ ಎಂದರು.

ನಮ್ಮ ಮನವಿಗೆ ಸ್ಪಂದಿಸಿ ಬೀದರ್‌ಗೆ ಸಮ್ಮೇಳನ ನೀಡಿದಕ್ಕೆ ಧನ್ಯವಾದ ತಿಳಿಸಿದ, ಸಂಘದ ಮಾಜಿ ಜಿಲ್ಲಾಧ್ಯಕ್ಷ ಬಾಬುವಾಲಿ ಮಾತನಾಡಿ, ಜಿಲ್ಲಾ ಪದಾಧಿಕಾರಿಗಳನ್ನು ನೇಮಕ ಮಾಡಿ ಹಾಗೂ ಹೊಸ ಜಾಹಿರಾತು ನೀತಿ ಬಗೆಹರಿಸಲು ರಾಜ್ಯ ಸಂಘ ಮುಂದಾಗಬೇಕೆಂದರು.

ಸಂಘದ ಜಿಲ್ಲಾಧ್ಯಕ್ಷ ಆನಂದ ದೇವಪ್ಪ ಅವರು ವಸತಿ, ಸಾರಿಗೆ, ಆರ್ಥಿಕತೆ ಸೇರಿದಂತೆ ವಿವಿಧ ಸಮಿತಿಗಳ ಹಾಗೂ ಕಾರ್ಯಕ್ರಮದ ತಯಾರಿ ಬಗ್ಗೆ ಸಭೆಗೆ ವಿವರಿಸಿ, ಸಮ್ಮೇಳನ ಯಶಸ್ವಿಗೊಳಿಸುವ ನಿಟ್ಟಿನಲ್ಲಿ ನಮ್ಮ ತಂಡ ಹಗಲು ರಾತ್ರಿ ಕೆಲಸ ಮಾಡುತ್ತಿದೆ ಎಂದು ಹೇಳಿದರು. ಸಮ್ಮೇಳನದ ಯಶಸ್ವಿಯಾಗಿಸಲು ನಾವೆಲ್ಲರೂ ಒಗ್ಗಟ್ಟಾಗಿ ಕೆಲಸ ಮಾಡುವುದಾಗಿ ಮಾಜಿ ಅಧ್ಯಕ್ಷರುಗಳಾದ ಅಶೋಕ್ ಕಾರಂಜಿ, ಬಸವರಾಜ ಕಾಮಶೆಟ್ಟಿ, ಮಾಳಪ್ಪ ಅಡಸಾರೆ ತಿಳಿಸಿದರು.

ಸಂಘದ ಮಾಜಿ ರಾಜ್ಯ ಉಪಾಧ್ಯಕ್ಷ ಭವಾನಿಸಿಂಗ್ ಠಾಕೂರ್, ಮಾಜಿ ಜಿಲ್ಲಾಧ್ಯಕ್ಷರಾದ ಸಿದ್ರಾಮಯ್ಯ ಸ್ವಾಮಿ, ಅಶೋಕಕುಮಾರ ಕರಂಜಿ, ಡಿ.ಕೆ.ಗಣಪತಿ, ಪತ್ರಕರ್ತರಾದ ಅಪ್ಪಾರಾವ ಸೌದಿ, ಶಶಿ ಪಾಟೀಲ, ಪೃಥ್ವಿರಾಜ, ಶಶಿ ಶೆಂಬೆಳ್ಳಿ, ಶಶಿ ಬಂಬುಳಗಿ, ವಿಜಯಕುಮಾರ ಬೆಳ್ದೆ, ದೀಪಕ ಮನ್ನಳ್ಳಿ, ಗೋಪಿಚಂದ್ ತಾಂದಳೆ, ಮಾರೂತಿ ಬಾವಿದೊಡ್ಡಿ, ಶ್ರೀಕಾಂತ ಬಿರಾದಾರ, ನಂದಕುಮಾರ ಕರಂಜೆ, ವಿಜಯಕುಮಾರ ಅಷ್ಟೂರೆ, ಅಜಯ ಭೋಸ್ಲೆ, ಬಸವರಾಜ ಪವಾರ ಸೇರಿದಂತೆ ವಿವಿಧ ಸಮಿತಿಗಳ ಸದಸ್ಯರು ಸಭೆಯಲ್ಲಿ ಉಪಸ್ಥಿತರಿದ್ದರು. ಶಿವಕುಮಾರ ಸ್ವಾಮಿ ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು.

# ಮಹಾವೀರ ಜಯಂತಿ ಆಚರಣೆ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**

ಜಿಲ್ಲೆ ಕಂಪ್ಲಿ ತಾಲೂಕಿನ ತಾಲೂಕು ಆಡಳಿತದ ವತಿಯಿಂದ ಪಟ್ಟಣದ ತಹಸೀಲ್ದಾರ್ ಕಚೇರಿಯಲ್ಲಿ ಸೋಮವಾರ ಮಹಾವೀರ ಜಯಂತಿಯನ್ನು ಸರಳವಾಗಿ ಆಚರಿಸಲಾಯಿತು. ಇದರ ನಿಮಿತ್ತ ಮಹಾವೀರರ ಭಾವಚಿತ್ರಕ್ಕೆ ಪುಷ್ಪಾರ್ಚನೆಯನ್ನು ಮಾಡಲಾಯಿತು.

ಈ ಸಂದರ್ಭದಲ್ಲಿ ಕಂಪ್ಲಿ ತಾಲೂಕು ದಂಡಾಧಿಕಾರಿಗಳಾದ ಮಂಜು ನಾಯಕ್ ಮಾತನಾಡಿ, ಭಾರತೀಯ ಸಂಸ್ಕೃತಿಯು ವಿಭಿನ್ನತೆಯಲ್ಲೂ ಏಕತೆಯನ್ನು ಹೊಂದಿದೆ. ಮಹಾವೀರರು ಜೈನ ಧರ್ಮದ ಪ್ರತಿಪಾದಕರಾಗಿದ್ದರು. ತೀರ್ಥಂಕರರಾಗಿ ಇವರು, ಅಹಿಂಸೆ, ಶಾಂತಿಗೆ ಹೆಚ್ಚು ಪ್ರಾಧಾನ್ಯತೆ ನೀಡಿ, ಧರ್ಮದ ಪ್ರವರ್ತಕರಾಗಿದ್ದರು. ಈ ಧರ್ಮದ ಅನುಯಾಯಿಗಳು ಇಂದಿಗೂ ಕೂಡ ಭಾರತ ಸೇರಿದಂತೆ ಅನೇಕ ದೇಶಗಳಲ್ಲಿ




ವಾಸವಾಗಿದ್ದಾರೆ. ಇಂತಹವರ ತತ್ವಾದರ್ಶಗಳು ಎಲ್ಲರೂ ಪಾಲಿಸುಂತಾಗಬೇಕು ಎಂದರು.

ಈ ಸಂದರ್ಭದಲ್ಲಿ ಕಂಪ್ಲಿ ತಾಲೂಕು ಆಡಳಿತ ಎಲ್ಲ ಸಿಬ್ಬಂದಿಗಳು ಕಂಪ್ಲಿ ತಾಲೂಕಿನ ಜೈನ ಧರ್ಮದ ಹಿರಿಯ ಮುಖಂಡರು ಮತ್ತು ಯುವಕರು ಮಹಾವೀರ ಜಯಂತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

# ಗ್ಯಾರಂಟಿ: ಜೀವನ ಮಟ್ಟ ಸುಧಾರಣೆ

• **ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು**



"ಉಚಿತವಾಗಿ ಟಿಕೆಟ್ ಕೇಳಿರುವುದು ತಪ್ಪು. ಪಂದ್ಯ ವೀಕ್ಷಣೆ ಮಾಡುವ ಆಸೆ ಇರುವವರು ವೈಯಕ್ತಿಕವಾಗಿ ಹಣ ಕೊಟ್ಟು ಹೋಗಿ ನೋಡಲಿ. ಇದು ಉತ್ತಮವಾದುದು" ಎಂದು ಬಮೂಲ್ ಅಧ್ಯಕ್ಷ ಡಿ.ಕೆ. ಸುರೇಶ್ ಅವರು ಅಭಿಪ್ರಾಯ ವ್ಯಕ್ತಪಡಿಸಿದರು.

ಸದಾಶಿವನಗರ ನಿವಾಸದಲ್ಲಿ ಮಾಧ್ಯಮಗಳ ಪ್ರಶ್ನೆಗಳಿಗೆ ಸುರೇಶ್ ಅವರು ಪ್ರತಿಕ್ರಿಯೆ ನೀಡಿದರು.

ಶಾಸಕರಿಗೆ ಉಚಿತವಾಗಿ ಐಪಿಎಲ್ ಟಿಕೆಟ್ ನೀಡಬೇಕು ಎಂಬ ಬೇಡಿಕೆ ಬಗ್ಗೆ ಕೇಳಿದಾಗ, "ಈ ಬಗ್ಗೆ ಯಾರು ಮಾತನಾಡುತ್ತಿದ್ದಾರೆ ಅದು ಮಹಾಪರಾಧ. ಐಪಿಎಲ್ ದುರ್ಘಟನೆ ಸಂದರ್ಭದಲ್ಲಿ ಅವರು ಯಾವ ರೀತಿ ವಾಗ್ದಾಳಿ ಮಾಡಿದ್ದರು, ಪದ ಬಳಸಿದ್ದರು ಎಂದು ತೆಗೆದು ನೋಡಲಿ. ಮೊದಲಿನಿಂದಲೂ ಟಿಕೆಟ್ ನೀಡುತ್ತಾ ಬಂದಿದ್ದಾರೆ. ಇದನ್ನು ಅಪಪ್ರಚಾರಕ್ಕೆ ಬಳಸಿಕೊಳ್ಳುತ್ತಿದ್ದಾರೆ. ಬಿಜೆಪಿ ಶಾಸಕರು ಕೂಡ ಐಪಿಎಲ್ ಟಿಕೆಟ್ ಪಡೆದಿದ್ದಾರೆ. ಐಪಿಎಲ್ ರಾಷ್ಟ್ರವನ್ನು ಪ್ರತಿನಿಧಿಸುವ ಪಂದ್ಯಾವಳಿ ಅಲ್ಲ. ವಾಣಿಜ್ಯ ಉದ್ದೇಶಿತ ಪಂದ್ಯಾವಳಿ. ಇವುಗಳ ಬಗ್ಗೆ ಜನಪ್ರತಿನಿಧಿಗಳು ಹೆಚ್ಚು ಗಮನಹರಿಸುವುದು ಒಳ್ಳೆಯದಲ್ಲ" ಎಂದು ಹೇಳಿದರು. ಬೆಂಗಳೂರಿನ ನಾಲ್ಕು ಕಡೆ ಕ್ರೀಡಾಂಗಣಗಳನ್ನು ನಿರ್ಮಿಸಬೇಕು: ಚಿನ್ನಸ್ವಾಮಿ ಕ್ರೀಡಾಂಗಣ ಬೇರೆಡೆ ಸ್ಥಳಾಂತರ ಮಾಡಬೇಕು ಎಂಬ ಚರ್ಚೆ ಬಗ್ಗೆ ಕೇಳಿದಾಗ, "ಈಗಾಗಲೇ ನಾನು ಆಯ್ಕೆ ಮಾಡಿ, ಸೂಚಿಸಿದ ಜಾಗದಲ್ಲಿ ಹೊಸ ಕ್ರೀಡಾಂಗಣ ಮಾಡಲು ಸರ್ಕಾರ ಮನ್ನಣೆ ನೀಡಿದೆ. ಸೂರ್ಯ ಸಿಟಿಯಲ್ಲಿ ಕ್ರೀಡಾಂಗಣ ಮಾಡುವ ಬಗ್ಗೆ ಪ್ರಸ್ತಾವನೆ ಸಲ್ಲಿಸಿದ್ದು ನಾನೇ. ಬೆಂಗಳೂರಿನ ನಾಲ್ಕು ದಿಕ್ಕಿನಲ್ಲಿ ನಾಲ್ಕು ಕ್ರೀಡಾಂಗಣ ಮಾಡಬೇಕು. ಕಂಠೀರವ ಕ್ರೀಡಾಂಗಣ, ಕೆಎಸ್‌ಸಿಎ, ಫುಟ್ಬಾಲ್ ಕ್ರೀಡಾಂಗಣ ಹೊರತಾಗಿ ಬೇರೆ ಯಾವುದೇ ಕ್ರೀಡಾಂಗಣವಿಲ್ಲ ಎಂದು ಹೇಳಿದರು.

# ಅಲ್ಪಸಂಖ್ಯಾತ ಮುಸ್ಲಿಮರ ಮನಗೆದ್ದ ನಾಯಕ ಜಮೀರ್

• **ಮಲ್ಲಮ್ಮ ನುಡಿ ವಾರ್ತೆ ಗಂಗಾವತಿ**

ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅತ್ಯಂತ ಬಹುಮತದಿಂದ 130ಕ್ಕೂ ಅಧಿಕ ಸ್ಥಾನಗಳನ್ನು ಪಡೆದುಕೊಳ್ಳುವಲ್ಲಿ ಅಲ್ಪಸಂಖ್ಯಾತರ ಮುಸ್ಲಿಂ ಸಮಾಜದ ಸಚಿವ ಜಮೀರ್ ಅಹಮದ್ ಖಾನ್ ಅವರ ಪಾತ್ರ ಅತ್ಯಂತ ಮಹತ್ವವಾಗಿದ್ದು ಅವರು ಸಮಾಜದ ಪಕ್ಷಾತೀತ ನಾಯಕರಾಗಿ ಕಾಂಗ್ರೆಸ್ ಪಕ್ಷದ ಅಭಿವೃದ್ಧಿಗೆ ಅತ್ಯಂತ ಪ್ರಾಮಾಣಿಕವಾಗಿ ಶ್ರಮಿಸುತ್ತಿದ್ದಾರೆ ಎಂದು ಗಂಗಾವತಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬೆರುನಿ ಅಬಾದಿ ಮಸೀದಿ ಅಧ್ಯಕ್ಷರಾದ ಶಾಮಿದ್ ಮನಿಯರ್ ಹೇಳಿದರು.

ಅವರು ಸೋಮವಾರದಂದು ಮಾಧ್ಯಮದೊಂದಿಗೆ ಮಾತನಾಡಿ ರಾಜ್ಯದಲ್ಲಿ ಉಪಚುನಾವಣೆಯ ಸಂದರ್ಭದಲ್ಲಿ ದಾವಣಗೆರೆ ಹಾಗೂ ಬಾಗಲಕೋಟೆ ಚುನಾವಣೆಗೆ ಸಂಬಂಧಿಸಿದಂತೆ. ದಾವಣಗೆರೆಯ ದಕ್ಷಿಣ ಕ್ಷೇತ್ರದ ಅಭ್ಯರ್ಥಿ ಎಸ್ ಎಸ್ ಮಲ್ಲಿಕಾರ್ಜುನ





ಅವರ ಪುತ್ರ ಚುನಾವಣಾ ಪ್ರಚಾರಕ್ಕೆ ಸಂಬಂಧಿಸಿದಂತೆ ಸಚಿವರು ಜಮೀರ್ ಅಹಮದ್ ಖಾನ್ ಪ್ರಚಾರ-ಕ್ಕೆ ಬರಲಿ ಅಥವಾ ಬಾರದೇ ಇರಲಿ ಅದು ಅವರಿಗೆ ಬಿಟ್ಟಂತಹ ವಿಷಯವಾಗಿದೆ ಎಂದು ಹೇಳಿಕೆ ನೀಡುವುದರ ಮೂಲಕ ಸಚಿವ ಜಮೀರ್ ಅಹಮದ್ ಖಾನ್ ಅವರ ಬಗ್ಗೆ ಅತ್ಯಂತ ಹಗುರವಾಗಿ ಮಾತನಾಡಿರುವುದನ್ನು ಅಲ್ಪಸಂಖ್ಯಾತ ಮುಸ್ಲಿಂ ಸಮಾಜ ಬಾಂಧವರು ಅತ್ಯಂತ ತೀವ್ರವಾಗಿ ಖಂಡಿಸುತ್ತಾರೆ.ತೆಲಂಗಾಣ ಸೇರಿದಂತೆ ಮತ್ತಿತರ ರಾಜ್ಯಗಳ ವಿಧಾನಸಭಾ ಚುನಾವಣೆಗೆ ಪ್ರಚಾರಕ್ಕೆ ತೆರಳಿರುವ ಸಚಿವ ಜಮೀರ್ ಅಹ್ಮದ್ ಖಾನ್ ಅವರನ್ನು ಕರ್ನಾಟಕ ರಾಜ್ಯ ಕಾಂಗ್ರೆಸ್ ಪಕ್ಷ ಕಡೆಗಾಣಿಸಿದ್ದೆ ಆದರೆ ಮುಂಬರುವ ಸಾರ್ವಜನಿಕ ಚುನಾವಣೆಯಲ್ಲಿ ಅಲ್ಪಸಂಖ್ಯಾತ ಮುಸ್ಲಿಮರು.

ಪಕ್ಷಕ್ಕೆ ತಕ್ಕ ಪಾಠವನ್ನು ಕಲಿಸತ್ತಾರೆ ಎಂದು ತಿಳಿಸಿದರು. ಕಾಂಗ್ರೆಸ್ ಪಕ್ಷ ರಾಜ್ಯದಲ್ಲಿ ಅಧಿಕಾರಕ್ಕೆ ಬರಲು ಅಲ್ಪಸಂಖ್ಯಾತರ ಮುಸ್ಲಿಮರ ಪಾತ್ರ ಅತ್ಯಂತ ಮಹತ್ವದ್ದಾಗಿದ್ದು ಅದನ್ನು ಅರಿತುಕೊಂಡು ಕೆಪಿಸಿಸಿ ಅವರನ್ನು ಕಡೆಗಾಣಿಸದೆ ವಿಶ್ವಾಸಕ್ಕೆ ಪಡೆದುಕೊಂಡು ಮುಂದುವರೆಯಲಿ ಎಂದು ಶಾಮೀದ್ ಮುನಿಯಾರ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು, ಬೇರುನಿಆಬಾದಿ ಮಸೀದ್ ಅಧ್ಯಕ್ಷರು ಗಂಗಾವತಿ ತಿಳಿಸಿದ್ದಾರೆ.

# ಅಮೆರಿಕ-ಇರಾನ್ ಯುದ್ಧ: ಅಡುಗೆ ಮನೆಗಳಲ್ಲೂ ಸಮಸ್ಯೆ ಸಿದ್ಧ



**ವಿಶೇಷ ವರದಿ**
●ಮಧೂರ ತಿಳಗೂಳಕರ
ಜಿಲ್ಲಾ ವರದಿಗಾರರು

**ಜಾಗತಿಕ ರಾಜಕೀಯದ ಅನಿಶ್ಚಿತತೆ ಇಂದು ಕೇವಲ ಅಂತರಾಷ್ಟ್ರೀಯ ಸುದ್ದಿಯಾಗಿ ಉಳಿದಿಲ್ಲ ;** ಅದು ಸಾಮಾನ್ಯ ಭಾರತೀಯನ ಜೇಬಿಗೆ ಕತ್ತರಿ ಹಾಕುತ್ತಿದೆ , ಫೆಬ್ರವರಿ 28, 2026 ರಂದು ಆರಂಭವಾದ ಅಮೇರಿಕಾ ಮತ್ತು ಇರಾನ್ ನಡುವಿನ ಸಂಘರ್ಷವು ಈಗ ಒಂದು ತಿಂಗಳ ಮೇಲಾಗಿದ್ದು ಇದರ ನೇರ ಪರಿಣಾಮ ಭಾರತದ ದಿನಬಳಕೆ ವಸ್ತುಗಳ ಬೆಲೆ ಏರಿಕೆಯ ರೂಪದಲ್ಲಿ ಗೋಚರಿಸುತ್ತಿದೆ...

**ಇಂಧನದ ಬೆಲೆ ಏರಿಕೆ ಮತ್ತು ಸಾರಿಗೆ ವೆಚ್ಚ**

ಭಾರತವು ತನ್ನ ಒಟ್ಟು ಕಚ್ಚಾ ತೈಲದ ಅಗತ್ಯದ ಸುಮಾರು 90% ರಷ್ಟನ್ನು ಆಮದು ಮಾಡಿಕೊಳ್ಳುತ್ತದೆ. ಯುದ್ಧದ ಕಾರಣದಿಂದಾಗಿ ಹಾರ್ಮುಜ್ ಜಲಸಂಧಿ (ಖಣಡಿಚುಣ ಠಜಿ ಊಂಡಿಟಣಜ) ಮೂಲಕ ತೈಲ ಸಂಚಾರಕ್ಕೆ ಅಡ್ಡಿಯಾಗಿದ್ದು, ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಬ್ಯಾರೆಲ್‌ಗೆ $120 ಗಡಿ ದಾಟಿದೆ.

**ಏನಾಗಿದೆ ಪರಿಣಾಮ:** ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಕೆಯಿಂದಾಗಿ ಸರಕು ಸಾಗಣೆ ವೆಚ್ಚ ಗಣನೀಯವಾಗಿ ಹೆಚ್ಚಾಗಿದೆ. ಇದು ತರಕಾರಿ, ಹಣ್ಣು ಮತ್ತು ಧಾನ್ಯಗಳ ಬೆಲೆ ಏರಿಕೆ ಸ್ಟಾರ್




ಹೋಟೆಲ್ ನಿಂದ ಹಿಡಿದು ಬೀದಿ ಬದಿ ಗುಡಗಂಡಿಗಳಿಗೂ ಬೆಲೆ ಏರಿಕೆಯ ಬಿಸಿ ತಟ್ಟಿದೆ.

**ಅಡುಗೆ ಅನಿಲ (ಐಕಉ) ಮತ್ತು ಸಿಲಿಂಡರ್ ಬೆಲೆ**

ಭಾರತದ ಅಡುಗೆ ಅನಿಲದ ಆಮದಿನ ಪೈಕಿ ಸಿಂಹಪಾಲು ಗಲ್ಫ್ ರಾಷ್ಟ್ರಗಳಿಂದ ಬರುತ್ತದೆ. ಇತ್ತೀಚಿನ ವರದಿಗಳ ಪ್ರಕಾರ, ಅಡುಗೆ ಅನಿಲದ ಬೆಲೆಯಲ್ಲಿ ಸಿಲಿಂಡರ್ ಒಂದಕ್ಕೆ ಸುಮಾರು ₹60 ರಿಂದ ₹100 ವರೆಗೆ ಏರಿಕೆಯಾಗಿದೆ. ಗ್ಯಾಸ್ ಪೂರೈಕೆಯಲ್ಲಿನ ವ್ಯತ್ಯಯವು ಮುಂಬರುವ ದಿನಗಳಲ್ಲಿ ಮತ್ತಷ್ಟು ಬೆಲೆ ಏರಿಕೆಯ ಭೀತಿಯನ್ನು ಹುಟ್ಟುಹಾಕಿದೆ ಆದರೆ ಅಡುಗೆ ಅನಿಲ ಪೂರೈಕೆದಾರರು ಯಾವುದೇ ಸಮಸ್ಯೆಯಿಲ್ಲ ಎನ್ನುತ್ತಲೇ ಬ್ಲಾಕ್ ಮಾರ್ಕೆಟ್ ನಲ್ಲಿ ದಂಧೆ ಶುರು ಹಚ್ಚಿಕೊಂಡಿದ್ದು ಕಮರ್ಷಿಯಲ್ ಗ್ಯಾಸ್ ಸಿಲಿಂಡರ್ 2000ರಿಂದ 2800 ರೂಪಾಯಿಯಲ್ಲಿ ದೊರೆಯುತ್ತಿದೆ , ಇನ್ನು ಬೀದಿ ಬದಿ ಗುಡಗಂಡಿಗಳ ಮೇಲೆ ಹಗಲಿಗಷ್ಟೇ ಅಧಿಕಾರಿಗಳು ದಾಳಿ ನಡೆಸುತ್ತಿರುವುದು ದುರಂತವೇ ಸರಿ , ಸಂಜೆಯಿಂದ ಶುರುವಾಗುವ ಅಂಗಡಿಗಳಲ್ಲಿ ಬೀದಿ ಬದಿ ಹೋಟೆಲಗಳಲ್ಲಿ ಗೃಹ ಬಳಕೆಯ ಸಿಲಿಂಡರ್ ಹೊರ ಬರುತ್ತಿವೆ ಕಮರ್ಷಿಯಲ್ ಗ್ಯಾಸ್ ಸಿಲಿಂಡರ್ ಬಳಸುವ ಜಾಗದಲ್ಲಿ ಗೃಹ ಬಳಕೆಯ ಸಿಲಿಂಡರ್ ಹೇಗೆ

**ಕುಸಿಯುತ್ತಿರುವ ರೂಪಾಯಿ ಮೌಲ್ಯ**

**ಯುದ್ಧದ ಭೀತಿಯಿಂದಾಗಿ ಹೂಡಿಕೆದಾರರು ಡಾಲರ್ ಕಡೆಗೆ ಒಲವು ತೋರುತ್ತಿರುವುದರಿಂದ ಭಾರತೀಯ ರೂಪಾಯಿ ಮೌಲ್ಯವು ಡಾಲರ್ ಎದುರು ಸಾರ್ವಕಾಲಿಕ ಕುಸಿತ ಕಂಡಿದೆ (₹92-₹98 ಕ್ಕೆ ತಲುಪಿದೆ). ಇದರಿಂದಾಗಿ ನಾವು ಆಮದು ಮಾಡಿಕೊಳ್ಳುವ ಪ್ರತಿಯೊಂದು ವಸ್ತುವಿಗೂ ಹೆಚ್ಚಿನ ಹಣ ಪಾವತಿಸಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ...**

ಬರುತ್ತಿವೆ, ನೀಡಿದವರು ಯಾರು...????

ಅಗತ್ಯ ವಸ್ತುಗಳ ಬೆಲೆ ಏರಿಕೆ ಕೇವಲ ಇಂಧನ ಮಾತ್ರವಲ್ಲದೆ , ದಿನಬಳಕೆಯ ಅನೇಕ ವಸ್ತುಗಳು ಈಗ ದುಬಾರಿಯಾಗುತ್ತಿವೆ

ತೈಲ ಮತ್ತು ಬೇಳೆಕಾಳುಗಳು: ಸಾರಿಗೆ ವೆಚ್ಚ ಹೆಚ್ಚಾಗಿರುವುದರಿಂದ ಮತ್ತು ರೂಪಾಯಿ ಮೌಲ್ಯ ಕುಸಿಯುತ್ತಿರುವುದರಿಂದ ಆಮದು ಮಾಡಿಕೊಳ್ಳುವ ಬೇಳೆಕಾಳುಗಳು ಹಾಗೂ ಖಾದ್ಯ ತೈಲಗಳ ಬೆಲೆ 10-15% ರಷ್ಟು ಏರಿಕೆಯಾಗಿದೆ ಪಾನಿಪುರಿ ಅಂಗಡಿಯಿಂದ

**ರಸಗೊಬ್ಬರದ ವಸ್ತುಗಳಿಗೂ ಬೆಲೆ ಏರಿಕೆಯ ಬಿಸಿ ತಟ್ಟಿದೆ...**

ಇರಾನ್ ಮತ್ತು ಸುತ್ತಮುತ್ತಲಿನ ಪ್ರದೇಶಗಳಿಂದ ಬರುವ ರಸಗೊಬ್ಬರ ಪೂ-ರೈಕೆಗೆ ಧಕ್ಕೆಯಾಗಿರುವುದರಿಂದ, ಕೃಷಿ ವೆಚ್ಚ ಹೆಚ್ಚಾಗಿದೆ. ಇದು ಮುಂದಿನ ದಿನಗಳಲ್ಲಿ ಆಹಾರ ಧಾನ್ಯಗಳ ಬೆಲೆ ಏರಿಕೆಗೆ ದಾರಿಯಾಗಲಿದೆ.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.
PRGI NO. 120927
(RNINO:KARKAN/2011/48371)